ಸುಜ್ಞಾನ ಪ್ರಸಾರ ಸುಮಾವಳಿ

ಸೌರಭ

ಗ್ರಂಥಮಾಲ

ಷಷ್ಠ ಸುಮಾವಳಿ ಸೌರಭ

ತಾರತಮ್ಯೋಕ್ತ ಭಜನ ಸುಮಮಾಲ

ದುಂದುಭಿ ನಾಮ ಸಂವತ್ಸರದ

ಕಾರ್ತೀಕ ಶುದ್ಧ ಪೌರ್ಣಿಮ

ಕೃತಿ ಕರ್ತರು :

ಕುಂ॥ ಸೌ॥ ಕೋಲಾರ್ ಪದ್ಮಾಬಾಯಿ, ರಾಮರಾವ್,

ಬಳ್ಳಾರಿ.

ಪ್ರಕಾಶಕರು :

ಸರ್ವಜ್ಞ ಸೇವಾ ಧುರೀಣ ಇತ್ಯಾದಿ

ಶ್ರೀ ಕೋಲಾರ್ ರಾಮರಾಯುಡು

ವಕೀಲರು, ಬಳ್ಳಾರಿ.

ಸುಜ್ಞಾನ ಪ್ರಸಾರ ಸುಮಾವಳಿ

ಸೌರಭ

ಗ್ರಂಥಮಾಲ

ಷಷ್ಠ ಸುಮಾವಳಿ ಸೌರಭ

ತಾರತಮ್ಯೋಕ್ತ ಭಜನ ಸುಮಮಾಲ

ದುಂದುಭಿ ನಾಮ ಸಂವತ್ಸರದ

ಕಾರ್ತೀಕ ಶುದ್ಧ ಪೌರ್ಣಿಮ

ಕೃತಿ ಕರ್ತರು :

ಕುಂ|| ಸೌ|| ಕೋಲಾರ್ ಪದ್ಮಾಬಾಯಿ, ರಾಮರಾವ್,

ಬಳ್ಳಾರಿ.

ಪ್ರಕಾಶಕರು :

ಸರ್ವಜ್ಞ ಸೇವಾ ಧುರೀಣ ಇತ್ಯಾದಿ

ಶ್ರೀ ಕೋಲಾರ್ ರಾಮರಾಯರು

ವಕೀಲರು, ಬಳ್ಳಾರಿ.

ಇತರ ಕೃತಿಗಳು

1. " ಶ್ರೀಹರಿ ಗುರು ಮತ್ತು ಶ್ರೀಗುರು ರಾಘವೇಂದ್ರರ ಸ್ತೋತ್ರ ಸೌರಭ "
2. " ಗೃಹಿಣಿ, ಗೃಹಸ್ಥ ಧರ್ಮ ವಿವೇಕ "
3. " ಶ್ರೀ ಹರಿ, ಗುರು, ಸ್ತವನ "
4. " ಭಾಗವತ ಪ್ರಸಂಗ "
5. " ಶ್ರೀ ಭಾರತ ಪ್ರಸಂಗ "
6. " ತಾರತಮ್ಯೋಕ್ತ ಸ್ತೋತ್ರಗಳು "

ಮುಂಬರುವ ಕೃತಿಗಳು

1. ರಾಮಾಯಣ ಪ್ರಸಂಗ
2. ಸಂಕ್ಷಿಪ್ತ ಸುಮಧ್ವವಿಜಯ
3. ದ್ರೌಪದಿ ಸ್ವಯಂವರ
4. ಶ್ರೀರಾಮ ಭಕ್ತೆ ಶಬರಿ

★ ★ ★

7-12-1982 ಬೆಂಗಳೂರಿನಲ್ಲಿ ವಿದ್ವಾಂಸರೂ, ದಾಸರೂ, ಐದು ಆರು ಸಾವಿರಕ್ಕೂ ಮೀರಿದ ಸ್ತ್ರೀ ಪುರುಷರಿಂದ ಕಿಕ್ಕಿರಿದ ಬೃಹತ್ಸಮಾರಂಭದಲ್ಲಿ

ಶ್ರೀಬಂಢಾರಕೇರಿ ಪಲಿಮಾರು ಮಠಾಧೀಶರಾದ

ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರ

ಅಧ್ಯಕ್ಷತೆಯಲ್ಲಿ

ಶ್ರೀ ಶ್ರೀ ಪೇಜಾವರಮಠಾಧೀಶರಾದ

ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರಿಂದ

ಪುಸ್ತಕ ಬಿಡುಗಡೆ ಮಾಡುವಾಗ ಮಾಡಿದ ಆಶೀರ್ವಾದ ಭಾಷಣದಿಂದ ಆಯ್ದ ನುಡಿಗಳು

" ಬಳ್ಳಾರಿಯ ಸುಪ್ರಸಿದ್ಧ ವಕೀಲರಾಗಿರುವ ಶ್ರೀ ಕೋಲಾರ್ ರಾಮರಾಯರ ಧರ್ಮಪತ್ನಿ ಶ್ರೀಮತಿ ಪದ್ಮಾಬಾಯಿಯವರು ಶ್ರೀ ಪರಮಾತ್ಮನ, ಮತ್ತು ತತ್ವಾಭಿಮಾನಿ ದೇವತೆಗಳ, ಮತ್ತು ಗುರುಗಳ ಸ್ತೋತ್ರಗಳೆಂಬ ಅನೇಕ ಪುಷ್ಪಗಳನ್ನು ಜೋಡಿಸಿದ ವೈಜಯಂತಿ ಮಾಲೆಯನ್ನು ತಯಾರಿಸಿ ಭಗವಂತನಿಗೆ ಭಕ್ತಿಯಿಂದ ಅರ್ಪಿಸಿದ್ದಾರೆ. ಪರಮಾತ್ಮನಿಗೆ ವೈಜಯಂತಿ ಮಾಲೆ ಎಂದರೆ ಬಹು ಪ್ರೀತಿ. ಇಂತಹ ಒಳ್ಳೆಯ ಉತ್ತಮವಾದ ಸುಂದರವಾದ, ಪುಷ್ಪ ಮಾಲಿಕೆಯನ್ನು ಪರಮಾತ್ಮನು ಈಗ ಧರಿಸಿದ್ದಾನೆ. ಇಂತಹ ಒಂದು ಒಳ್ಳೆಯ ಭಕ್ತಿಯುಕ್ತವಾದ ಕಾಣಿಕೆಯನ್ನು ಭಗವಂತನಿಗೆ ಅರ್ಪಿಸುವ ಕಾರ್ಯಕ್ರಮದಿಂದ ಈ ದಿನದ ಮಹಿಳಾ ಗೋಷ್ಠಿಯು ಪ್ರಾರಂಭವಾಗಿರುವುದು ನಮಗೆ ಬಹಳ ಆನಂದವಾಗಿದೆ.

ಈ ಪದ, ಪದ್ಯಗಳನ್ನು ನಾವು ಚೆನ್ನಾಗಿ ಓದಿದ್ದೇವೆ. ಇವು ಬಹಳ ಲಲಿತವಾಗಿಯೂ, ಸುಂದರವಾಗಿಯೂ, ನಮ್ಮ ಆಚಾರ್ಯರ ಸಿದ್ಧಾಂತಕ್ಕೆ ಅನುಗುಣವಾಗಿಯೂ, ಭಕ್ತಿ ಬಂಧುರವಾಗಿಯೂ ರಚಿತವಾಗಿವೆ.

ಈ ಸ್ತೋತ್ರ ಕುಸುಮ ಮಾಲೆಯನ್ನು ಈದಿನ ಬಿಡುಗಡೆ ಮಾಡಲು ನಮಗೆ ತುಂಬಾ ಸಂತೋಷವಾಗುತ್ತಿದೆ.

ನಮ್ಮ ಮಾಧ್ವ ಸಮಾಜದ ದೃಷ್ಟಿಯಲ್ಲಿ, ಕೋಲಾರ್ ಪದ್ಮಾಬಾಯಿಯವರು ಒಬ್ಬ ಆದರ್ಶಮಹಿಳೆ ಹಾಗೂ ಆದರ್ಶ ಗೃಹಿಣಿ, ಯಾಗಿದ್ದಾರೆ. ಅನೇಕ ವರ್ಷಗಳಿಂದಲೂ ಅವರ ಪತಿ ಶ್ರೀಕೋಲಾರ್ ರಾಮುರಾಯರ ಮತ್ತು ಅವರ ತಂದೆ ಶ್ರೀ ನಾಗೇಶರಾಯರ ಸಂಪರ್ಕ ನಮಗಿದೆ. ಅವರ ಪತಿಯವರು ಆದರ್ಶ ಮಾಧ್ವಗೃಹಸ್ಥರಾಗಿ, ಮಾಧ್ವ ಸಮಾಜದ ಸೇವೆ, ಆಚಾರ್ಯರ ತತ್ವಜ್ಞಾನದ, ಮತ್ತು ದಾಸ ಸಾಹಿತ್ಯದ ಸೇವೆಗಳಿಗಾಗಿಯೇ ಜೀವನವನ್ನು ಮುಡುಪಾಗಿಟ್ಟು ನಮ್ಮ ಮತ್ತು ಎಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ.

ಇನ್ನು ಅವರ ತಂದೆ ನಾಗೇಶರಾಯರಂತೂ, ಎಷ್ಟೋಗ್ರಂಥಗಳನ್ನೂ ಲೇಖನಗಳನ್ನೂ ಬರೆದು, ಶ್ರೀಮದಾಚಾರ್ಯರ ಸಿದ್ಧಾಂತದ ತಾತ್ವಿಕ ಜಾಗ್ರತೆಯನ್ನುಂಟುಮಾಡಿದರು. ಉತ್ತಮ ಜ್ಞಾನಿಗಳು ತತ್ವನಿಷ್ಠೆಯನ್ನು ಬೆಳೆಸಿ ಕೊಂಡುಬಂದು ನಮ್ಮ ಸಮಾಜಕ್ಕೆ, ವೈದಿಕ ತತ್ವದ ಧೀರತ್ವ, ವೀರತ್ವ, ಧರ್ಮನಿಷ್ಠೆಗಳ ಕಡೆಗೆ ವಿಶೇಷ ಗಮನ ಹರಿಯುವಂತೆ ಹೊಸದೃಷ್ಟಿಯನ್ನು ಬೀರಿದಂತಹ ಉತ್ತಮ ವಿದ್ವಾಂಸರು. ಅಂತಹ ನಾಗೇಶರಾಯರನ್ನು ನಾವು ಎಷ್ಟು ಸ್ಮರಿಸಿದರೂ ಸಾಲದು. ಹೀಗೆ ಧರ್ಮನಿಷ್ಠರಾದ ಪತಿ ತತ್ವನಿಷ್ಠರಾದ ತಂದೆಯವರ ಸೇವೆ ಮಾಡುತ್ತಿರುವ ಈ ಪದ್ಮಾಬಾಯಿಯವರು ಅನೇಕ ವರ್ಷಗಳಿಂದ ಅನಾರೋಗ್ಯದಿಂದ ತೊಂದರೆ ಗೀಡಾಗಿದ್ದರೂ ಭಗವತ್ಪ್ರೀತಿಕರವಾದ ಇಂತಹ ಭಕ್ತಿ ಕಾರ್ಯಗಳನ್ನು ಮಾಡುತ್ತಿರುವುದೇ ಅವರಿಗೆ ಒಂದು "ಟಾನಿಕ್" ಆಗಿದೆ. ಅವರಿಗೆ ಭಗವಂತನು ಇನ್ನೂ ಹೆಚ್ಚಾದ ಆರೋಗ್ಯವನ್ನು ಕೊಟ್ಟು ಇಂತಹ ಜ್ಞಾನ, ಭಕ್ತಿಗಳ ಕಾರ್ಯಗಳನ್ನು ಮಾಡಿಸುತ್ತಿರಲಿ ಎಂದು ಭಗವಂತನಲ್ಲಿ ನಾವು ಪ್ರಾರ್ಥಿಸುತ್ತೇವೆ.

ಅಧ್ಯಕ್ಷರಾದ ಶ್ರೀ ಫಲಿಮಾರು, ಭಂಡಾರಕೇರಿ, ಮಠಾಧಿಪತಿಗಳಾದ

" ಶ್ರೀ ವಿದ್ಯಾಮಾನ್ಯ ತೀರ್ಥರ ಅನುಗ್ರಹ ಭಾಷಣ ದಿಂದ ಆಯ್ದ ನುಡಿಗಳು "

"ಬಳ್ಳಾರಿಯ ಪ್ರಸಿದ್ಧ ವಕೀಲರಾಗಿರುವ ಶ್ರೀ ಕೋಲಾರ್ ರಾಮು ರಾಯರ ಧರ್ಮಪತ್ನಿ ಶ್ರೀಮತಿ ಕೋಲಾರ್ ಪದ್ಮಾಬಾಯಿಯವರು ರಚಿಸಿರುವ ಈ ಸುಜ್ಞಾನ ಪ್ರಸಾರ ಸುಮಾವಳಿಯ ಸ್ತೋತ್ರ ಮಾಲೆಯನ್ನು ನೋಡಿ ಬಹಳ ಸಂತೋಷ ಪಟ್ಟಿದ್ದೇವೆ. ಇದರಲ್ಲಿನ ವಿಷಯಗಳು ನಮ್ಮ ಆಚಾರ್ಯರ ಸಿದ್ಧಾಂತಕ್ಕೆ ಸರಿಯಾಗಿದೆಯೇ ? ಹೇಗೆ ? ಎಂದು ಒಂದು ಗಂಟೆ ಕಾಲ ಪರಿಶೀಲನೆ ಮಾಡಿದ್ದೇವೆ. ಹಾಗೆ ಪರಿಶೀಲನೆ ಮಾಡುವಾಗ ಒಂದು ತಪ್ಪಾದರೂ ನಮಗೆ ಸಿಕ್ಕಿಲ್ಲ. ಇನ್ನೂ ವಿಶೇಷವಾದ ಉಪನಿಷತ್ತುಗಳು, ಮಧ್ವ ಸಿದ್ಧಾಂತದ ಪ್ರಮೇಯಗಳು, ಪುರಾಣಗಳಲ್ಲಿನ ಕಥೆಗಳೂ ಸಿಕ್ಕಿವೆ. ಕೆಲವು ಕಡೆ, ಗಂಡಸರಿಗೂ ತಿಳಿಯದ ಗಹನವಾಗಿರತಕ್ಕ ವಿಷಯಗಳನ್ನು ಸುಲಭರೀತಿಯಲ್ಲಿ ಅವರು ಈ ಪದ್ಯಗಳಲ್ಲಿ ಕಾಣಿಸಿರುವುದು ನಮಗೆ ತುಂಬಾ ಆಶ್ಚರ್ಯವೂ, ಆನಂದವೂ ಆಗಿದೆ. ಹೆಂಗಸರು ಈರೀತಿಯಲ್ಲಿ ಜ್ಞಾನ ಪ್ರಸಾರದ ಕಾರ್ಯಗಳನ್ನು ಮಾಡುತ್ತಿರುವುದು ನಮಗೆ ತುಂಬಾ ಸಂತೋಷವಾಗಿದೆ. ಇದೇ ರೀತಿಯಲ್ಲಿ ಹೆಂಗಸರು ಪವಿತ್ರವಾದ ದೇವ ಭಾಷೆಯಲ್ಲಿಯೂ ಪದ ಪದ್ಯಗಳ ರಚನೆಯನ್ನು ಮಾಡಿ ಹಾಡಿ ಭಾಗವತ ಭಾರತಾದಿ ಗ್ರಂಥಗಳ ಪಠನ ಮಾಡಿ, ತಮ್ಮ ಮಕ್ಕಳಿಗೆ ಸಂಸ್ಕೃತ ಜ್ಞಾನ ಹುಟ್ಟುವಂತೆ ಮಾಡಿ, ಧಾರ್ಮಿಕ ಮನೋಭಾವವನ್ನು ಹುಟ್ಟಿಸಿ ನಮ್ಮ ಸಮಾಜದ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಮಾಡಲಿ ಎಂದು ನಮಗೆ ತುಂಬಾ ಆಶೆಯುಂಟಾಗಿದೆ. ಈ ರೀತಿಯಾದ ಒಂದು ಸಂಸ್ಕೃತ ವಿದ್ಯೆಯನ್ನು ಕಲಿತು ಕಲಿಸುವ ಜಾಗ್ರತೆಯೂ ತತ್ವ ಜಾಗ್ರತೆಯೂ ನಮ್ಮ ಮಹಿಳಾ ಜನಗಳಲ್ಲಿ ಉಂಟಾಗಲೆಂದು ಈ ದಿನದ ಮಹಿಳಾಗೋಷ್ಠಿಯಲ್ಲಿ ನಾವು ಹಾರೈಸುತ್ತಿದ್ದೇವೆ. ಈ ದಿನ ಕೋಲಾರ್ ಪದ್ಮಾಬಾಯಿಯವರು ಭಕ್ತಿ ಪೂರ್ವಕವಾಗಿ ಈ ತಾರತಮ್ಯೋಕ್ತ ಪದಗಳ ಪುಷ್ಪಮಾಲಿಕೆ

ಯನ್ನು ಭಗವಂತನಿಗೆ ಅರ್ಪಿಸಿದ್ದಾರೆ. ಇದರಿಂದಾಗಿ ಅವರ ಪತಿಯವರಿಗೂ ಪುಣ್ಯವು ದೊರೆತು ಭಗವಂತನ ಕೃಪೆಗೆ ಪಾತ್ರರಾಗಿದ್ದಾರೆ. ಮತ್ತು ಅವರ ತಂದೆ ನಾಗೇಶರಾಯರಿಗೂ ಪುಣ್ಯವು ದೊರೆತು, ಅವರು ಸಂತುಷ್ಟರಾಗಿದ್ದಾರೆ. ಪದ್ಮಾಬಾಯಿಯವರಿಗೆ, ಒಳ್ಳೆಯ ಆರೋಗ್ಯ ಉಂಟಾಗಲಿ ನಿರಂತರವಾಗಿ ಈ ದಂಪತಿಗಳು ಈ ತರಹದ ಜ್ಞಾನ, ಭಕ್ತಿಗಳ ಕಾರ್ಯಗಳನ್ನು ಮಾಡುತ್ತಿರಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತಿದ್ದೇವೆ.

ಒಪ್ಪೋಲೆ

ಪುಟ	ಸಾಲು	ತಪ್ಪು	ಸರಿ (ಒಪ್ಪು)
ಭಾಮಿನಿ ಷಟ್ಪದಿ	15	ನಾಮಾದೇವಿ	ನಾಮಳು, ಆಕೆ
67	20	ಉತ್ತಮ್ಮ	ಉತ್ತುಮ್ಮ
68	5	ಹಸ್ತಿನಿಯ	ಹಸ್ತಿನಿಯು
70	1	ಜೀವರರೊಳ	ಜೀವರೊಳ
76	4	ರತಿ ಪತಿ	ಕೃತಿ ಪತಿ
78	7	ಬಟ್ಟ	ಬಿಟ್ಟ
82	23	ಅಕ್ಷರ ಪುರುಷಗೆ	ಕೃಷ್ಣಗೆ, ಬೌದ್ಧಗೆ
82	24	ಲಕ್ಷ್ಮಿರಮಣ	ರಕ್ಷಿಪ ಕಲ್ಕಿ
85	17	ಬಂದೆಯ	ಬಂದೆಯೆ
86	1	ಸೇದಂತಿಕ	ಸೇವಂತಿಕ
87	3	ಸಿರಿ ಕೃಷ್ಣಗೆ	ಕೃಷ್ಣನ ನೋಡಿ
93	15	ಅತಿತಿಯ	ಅತಿಶಯ
93	19	ತೋರುವರ	ತೋರುವ
102	22	ಜ್ಞಾಲಿಗಳ ಒರೆಸುತ್ತ	ರೋಧಿಪ ತೆರದೆನ್ನ
	23	ಬಾಳಾಗಿದೆ ಧ್ಯಾನ	ಪೀಯೂಷ ಮರೆಯಾಗೆ
	24	ವ್ಯಾಳ ವೈರಿ ಧ್ವಜ	ನಾಗೇಶ ಶಯನ

ಶ್ರೀಗುರುರಾಜೋ ವಿಜಯತೇ

— ಮುನ್ನುಡಿ —

ಶಮದಮಾದಿ ಅಧಿಕಾರ ಸಂಪನ್ನರಾದ ಸಾತ್ವಿಕ ಅಧಿಕಾರಿಗಳಿಗೆ ವೈರಾಗ್ಯ ಭಕ್ತಿ ಪೂರ್ವಕವಾದ ಸ್ವಯೋಗ್ಯಶ್ರವಣಾದಿ ಜನಿತ ಉಪಾಸನೆಯು, ಶ್ರೀಹರಿಯು ಸಾಕ್ಷಾತ್ಕಾರ–ಪರಮ ಭಕ್ತಿ ಪರಮ ಪ್ರಸಾದಗಳ ಮುಖಾಂತರದಿಂದ ಮುಕ್ತಿಸಾಧನವಾಗಿದೆ. ಆದುದರಿಂದ, ಶ್ರೀಹರಿಯ ನಿರ್ದೋಷಾಶೇಷ ಕಲ್ಯಾಣ ಗುಣಗಣ ಪೂರ್ಣತ್ವಾದಿ ಮಹಾ ಮಹಿಮೆಗಳನ್ನು ತಿಳಿದು ನಿರಂತರ ಅವನನ್ನು ಭಜಿಸುವುದೇ "ಫಲವಿದು ಬಾಳ್ದುದಕೆ" ಇದುವೇ ಶಾಸ್ತ್ರಸಾರ.

ಸಕಲ ಸುಜನ ಸುಖೋಪಾಯ – ಸಖಾಯನೂ ಏಕಾಂತಿಗಳ ಪರಮ ಪ್ರಿಯನೂ ಆದ ಭಗವಂತನ ವಿಸ್ಮರಣೆಯು ಅಧರ್ಮ ದ್ವಾರಾ ದುಃಖ್ಯ ಮುಂತಾದ ರೂಪ ಅನರ್ಥದ ಮೂಲ. ಆದುದರಿಂದ, ಅವನ್ನು ನಿರ್ಮೂಲಗೊಳಿಸಿ, ಸಕಲ ಸುಖ ಸಮೃದ್ಧಿ ಕಾರಣವಾದ ಶ್ರೀಹರಿ ಸಂಸ್ಮರಣವನ್ನು ಹುಟ್ಟಿಸಲು ಇಂಥ ಅನುಗ್ರಹವನ್ನು ಸಜ್ಜನರ ಮೇಲೆ ತೋರಲು ಭಗವತ್ಪ್ರೇರಿತರಾದ ಭಗವದ್ಭಕ್ತರು ಭಾರತ ಭೂಮಿಯಲ್ಲಿ ಆಗಾಗ್ಗೆ ಅವತರಿಸಿ, ಸಂಚರಿಸಿ, ಭಗವತ್ಕಥಾಮೃತಸಾರ ಸುಖವನ್ನು ಸಜ್ಜನರಿಗೆ ಉಣಿಸುತ್ತಾರೆ.

ಇದೇ ಕಾರ್ಯಕ್ಕೋಸ್ಕರ ಭಗವಂತನ ಅಣತಿಯಂತೆ ಅವತರಿಸಿದ ಶ್ರೀಹರಿದಾಸವರರೂ ಭಾರತ ಭಾಗವತ ಪುರಾಣಾದಿಗಳಲ್ಲಿ ನಿರೂಪಿಸಿದ ಶ್ರೀಹರಿಯ ಮಹಿಮೆಗಳನ್ನೂ ಉಪಾಸನೋಪಯುಕ್ತ ರಹಸ್ಯ ಪ್ರಮೇಯಗಳನ್ನೂ ತಮ್ಮ ಸುಮಧುರ ಸಂಗೀತಗಳಿಂದ ಹಾಡಿ ಸಾತ್ವಿಕರ ಹೃದಯಗಳಲ್ಲಿ ತುಂಬಿ ಅವರನ್ನು ನಲಿದಾಡಿಸಿದ್ದಾರೆ.

ಇಂಥ ಶ್ರೀಹರಿದಾಸವರರ, ಪಂಡಿತವರರ, ಪರಮ ಹಂಸರವರ ಸೇವಾ ಸಂಪನ್ನರೂ ಭಾಗವತಪ್ರಿಯರೂ ಭಾಗವತ ಧರ್ಮಾನುಷ್ಠಾನ ನಿರತರೂ ಅಸ್ಮದ್ಗುರು ಭ್ರಾತೃಚರಣ ಪರಮ ಪೂಜ್ಯ ಶ್ರೀನಿವಾಸಾ ಚಾರ್ಯರ ಪರಮಾನುಗ್ರಹ ಪಾತ್ರರೂ ಆದ ಶ್ರೀ ಕೋಲಾರ್ ರಾಮ ರಾಯರವರ ಧರ್ಮಪತ್ನಿ ಸೌ|| ಪದ್ಮಾಬಾಯಿಯವರು ವಿರಚಿಸಿದ ಶ್ರೀಹರಿಗುರು ಸ್ತೋತ್ರರೂಪ ಸಂಕೀರ್ತನಗಳನ್ನು ಕೇಳಿ, ಓದಿ, ನಮಗೆ ಪರಮಾನಂದ ವಾಯಿತು.

* ಈ ಸಾಧ್ವೀಶಿರೋಮಣಿಯು ತಮ್ಮ ಪೂಜ್ಯ ಪಿತೃಚರಣ ನಾಗೇಶರಾಯರಿಂದ ಸದ್ವಿದ್ಯೋಪದೇಶ ಪಡೆದವರು. ಅವರಿಂದ ಪ್ರಮೇಯ ರಹಸ್ಯವನ್ನು ಅರಿತಿದ್ದಾರೆ. ಪಾತಿವ್ರತ್ಯಾದಿ ಸದ್ಗುಣ ಖಣಿ ಗಳಾಗಿದ್ದಾರೆ. ದೈವಗುರು ಭಕ್ತಿ ಪುಲಕಿತ ಕರುಣಾತರಂಗಿತ ಅಂತರಂಗ ಸಂಪನ್ನರಾಗಿದ್ದಾರೆ.

ಇದರ, ಶ್ರೀಹರಿಗುರು ಪತಿ ಪಿತೃ ಭಕ್ತಿ ಪೂರ್ವಕವಾದ ಭಗವದಾ ರಾಧನಾ ಫಲವಾಗಿ ಹೊರಹೊಮ್ಮಿದ, ಪ್ರತಿಭಾ ಪರಿಪೂರ್ಣ–ಪ್ರಸಾದ ಮಯ–ಪ್ರಾಸ–ಅಲಂಕಾರ ರಸ ಸಮುಧರ ಸರಸ ಸಂಕೀರ್ತನಗಳು, ನಿಜವಾಗಿಯೂ ಆಸ್ತಿಕರ, ವಿಶೇಷತಃ ಮಹಿಳೆಯರ ಹೃದಯಗಳಲ್ಲಿ ಭಗವದ್ಭಕ್ತಿ ಭಾಗವತ ಧರ್ಮಾಸಕ್ತಿ ಆಸ್ತಿಕ್ಯಮತಿ; ನೈತಿಕ ಸನ್ಮತಿ. ಸಾರಾಸಾರ ವಿವೇಕ ಸಹಿತ ಗುರುಭಕ್ತಿ, ಕರ್ತವ್ಯ ನಿಷ್ಠತೆಯನ್ನು ಹುಟ್ಟಿಸುತ್ತವೆಯೆಂದು ಧಾರಾಳವಾಗಿ ಹೇಳಬಹುದು.

ಇದರಿಂದ ಸಂಪ್ರೀತರಾದ ಶ್ರೀಹರಿ ವಾಯುಗುರುಗಳು, ಈ ದಂಪತಿ ಗಳಿಗೆ ಸುದೀರ್ಘಾಯುರಾರೋಗ್ಯ ಅವಿಚ್ಛಿನ್ನ ಸೌಮಂಗಲ್ಯಾದಿ ಸಕಲ ಕಲ್ಯಾಣ ಶಿರಿಯನ್ನು ಅನುಗ್ರಹಿಸಿ, ಇವರಿಂದ ಇನ್ನೂ ಅಧಿಕಾದಿಕ ಕೃತಿ ರತ್ನಗಳು ಹೊರಬೀಳುವಂತೆ ಕರುಣಿಸಲಿ; ಹೀಗೆಂದು ನಮ್ಮ ಉಪಾಸ್ಯ ಮೂರ್ತಿ. “ ವ್ಯಾಸಕೇಶವಾತ್ಮಕ ” ಶ್ರೀಹಯಗ್ರೀವದೇವರಲ್ಲಿ ಪ್ರಾರ್ಥಿ ಸುತ್ತೇವೆ.

ಅಗ್ರಹಾರ
ಗದಗ
1–12–82

ಪಂಡಿತ ಕೇಶವಾಚಾರ್ಯ ಜಾಲಿಹಾಳ

ಪ್ರಕಾಶಕರ ಮುನ್ನುಡಿ

ಮಾನ್ಯ ಸಜ್ಜನರೇ :—

ನನ್ನ ಧರ್ಮಪತ್ನಿಯಾದ ಶ್ರೀಮತಿ ಕೋಲಾರ್ ಪದ್ಮಾಬಾಯಿ ಯವರ ಕವನಗಳ ಸುಜ್ಞಾನ ಪ್ರಸಾರಸುಮಾವಳಿ ಸೌರಭ ಗ್ರಂಥಮಾಲೆಯ ಆರನೇ ಪುಷ್ಪವಾದ ಈ "ತಾರತಮ್ಯೋಕ್ತ ಸ್ತೋತ್ರಗಳು" ಎಂಬ ಪುಸ್ತಕವನ್ನು ಸಜ್ಜನರ ಸಂತೋಷಕ್ಕಾಗಿ ಈಗ ಪ್ರಕಟಿಸುತ್ತಿದ್ದೇನೆ.

ಇದುವರೆಗೂ ಗ್ರಂಥ ಮಾಲೆಯಲ್ಲಿ "ಶ್ರೀರಾಘವೇಂದ್ರ ಸ್ವಾಮಿಗಳ ಬಳ್ಳಾರಿ ಬೃಂದಾವನ ಪ್ರತಿಷ್ಠೆ" ಯನ್ನು ಮೊದಲನೆಯ ಪುಷ್ಪವಾಗಿಯೂ, "ಗೃಹಿಣಿ ಗೃಹಸ್ಥ ಧರ್ಮ ವಿವೇಕ" ಎಂಬ ಎರಡನೆಯ ಪುಷ್ಪವನ್ನು ಭಾಗವತರತ್ನಂ ಇತ್ಯಾದಿ ವಿದ್ಯಾ ಶ್ರೀ ಘೂಳಿ ಕೃಷ್ಣಮೂರ್ತ್ಯಾಚಾರ್ಯರಿಂದ ಬಿಡುಗಡೆಮಾಡಲ್ಪಟ್ಟವು.

18–5–81 ರಲ್ಲಿ ಬೆಂಗಳೂರು ಸಿಟಿ ಚಾಮರಾಜ ಪೇಟೆಯಲ್ಲಿ ಶ್ರೀಮನ್ಮಾಧ್ವ ಸಂಘದಲ್ಲಿ ನಡೆದ ಬೃಹತ್ ಸಮಾರಂಭದಲ್ಲಿ ಮೂರನೆಯ ಪುಷ್ಪವಾದ "ಶ್ರೀ ವಿಶ್ವೇಶತೀರ್ಥ ವೈಭವ ವನಜ" ವನ್ನು "ಶ್ರೀಹರಿಗುರು ಸ್ತವನ" ವನ್ನು ಶ್ರೀಶ್ರೀಶ್ರೀ ಪುತ್ತಿಗೆ ಮಠಾಧೀಶರಿಂದಲೂ ನಾಲ್ಕನೆಯ ಪುಷ್ಪ "ಭಾಗವತ ಪ್ರಸಂಗವನ್ನು ಶ್ರೀ ಶ್ರೀ ಶ್ರೀ ಪೇಜಾವರ ಮಠಾಧೀಶ ರಾದ ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳಿಂದಲೂ, ಐದನೆಯ ಪುಷ್ಪ "ಭಾರತ ಪ್ರಸಂಗ" ವನ್ನು ಶ್ರೀ ಶ್ರೀ ಶ್ರೀ ಭಂಡಾರಕೇರಿ – ಶ್ರೀ ಪಲಿಮಾರು ಉಭಯಮಠಾಧೀಶರಾದ "ಶ್ರೀ ಶ್ರೀ ಶ್ರೀ ವಿದ್ಯಾಮಾನ್ಯ ತೀರ್ಥ" ಶ್ರೀ ಪಾದಂಗಳವರಿಂದಲೂ ಬಿಡುಗಡೆ ಮಾಡಲ್ಪಟ್ಟವು.

ಗುರು ದೇವತಾನುಗ್ರಹದಿಂದ ರಚಿತವಾದ ಈ ಆರನೆಯ "ತಾರ ತಮ್ಯ ಸ್ತೋತ್ರಗಳ" ಪುಷ್ಪವನ್ನು ಶ್ರೀ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ಲಕ್ಷ್ಮಿವೇಂಕಟೇಶನ ಪಾದಾರವಿಂದಗಳಲ್ಲಿ, ಈ ಭವ್ಯವಾದ "ಅಖಿಲ ಭಾರತ ವ್ಯಾಸದಾಸ ಸಮ್ಮೇಳನ" ಶ್ರೀ ರಾಘವೇಂದ್ರ ಸ್ವಾಮಿ ಮಠ ಮತ್ತಿಕೆರೆ ಬೆಂಗಳೂರಿನಲ್ಲಿ ದುಂದುಭಿ ಸಂ. ಕಾರ್ತೀಕ ಬ|| ಸಪ್ತಮಿಯಲ್ಲಿ ಸಮರ್ಪಿಸಿ ನಾವು ದಂಪತಿಗಳು ಕೃತಾರ್ಥರಾಗಿರುತ್ತೇವೆ.

ಚತುಶಾಸ್ತ್ರ ಪಂಡಿತರಾದ ವಿದ್ವಾನ್ ಪಂಡಿತ ಶ್ರೀ ಜಾಲಿಹಾಳು ಕೇಶವಾಚಾರ್ಯರು ಈ ಗ್ರಂಥವನ್ನು ಪೂರ್ಣ ಅವಲೋಕಿಸಿ, ಶ್ರವಣಮಾಡಿ ಆಶೀರ್ವದಿಸಿ ಈ ಗ್ರಂಥಕ್ಕೆ ಅನುಗ್ರಹ ಪತ್ರವನ್ನು ದಯಪಾಲಿಸಿದಕ್ಕಾಗಿ ನಾವು ದಂಪತಿಗಳು ಅವರಿಗೆ ನಮ್ಮ ಭಕ್ತಿ ಪೂರ್ವಕ ವಂದನೆಯನ್ನು ಅರ್ಪಿಸುತ್ತೇವೆ.

ಈ ಪುಸ್ತಕವನ್ನು, ರಾತ್ರಿ ಹಗಲು ಶ್ರಮ ಪಟ್ಟು ಅಂದವಾಗಿ ಮುದ್ರಣಮಾಡಿ ಸಕಾಲಕ್ಕೆ ಕೊಟ್ಟುದಕ್ಕಾಗಿ ನಮ್ಮ ಪರಮ ಮಿತ್ರರಾದ ಶ್ರೀಕದರಿ ವಸಂತರಾಯರು ಅವರ ಚಿರಂಜೀವಿಗಳಿಗೂ ಅಭಿನಂದಿಸುತ್ತೇವೆ.

ಭಗವದ್ಭಕ್ತರು ಕ್ಷೀರನೀರ ನ್ಯಾಯದಿಂದ ಶ್ರೀಪರಮಾತ್ಮನಿಗೆ ಅರ್ಪಿಸಿದ ಪುಷ್ಪವನ್ನು ಆಘ್ರಾಣಿಸಿ, ಮುಡಿದು, ನಮ್ಮನ್ನು ಆಶೀರ್ವದಿಸಬೇಕೆಂದು ಬೇಡುತ್ತೇನೆ.

ಇತಿ ಸರ್ವಜ್ಞ ಸೇವಾ ಧುರೀಣೇತ್ಯಾದಿ
ಸಜ್ಜನ ಪಾದ ರೇಣುಧಾರಕ
ಕೋಲಾರ್ ರಾಮರಾವು,
ಅಡ್ವಕೇಟ್, ಬಳ್ಳಾರಿ.

ದುರ್ಮತಿ ಸಂ. ಕಾರ್ತೀಕ ಶು|| 15
ವ್ಯಾಸ ಪೌರ್ಣಿಮಾ

ಕೃತಿ ಕರ್ತರ ನುಡಿ

ಸರ್ವ ಕಾರ್ಯಾರಂಭದಲ್ಲಿಯೂ " ಶ್ರೀಗುರುಭ್ಯೋನಮಃ ಎನ್ನುವ ಗುರು ನಮಸ್ಕಾರವು ಶ್ರೀರಮಾ ಬ್ರಹ್ಮಾದಿಗಳಿಗೂ ಗುರುವಾಗಿರುವ ಪರಮಾತ್ಮನಿಗೇ ಸಲ್ಲತಕ್ಕದ್ದಾಗಿದೆ.

ಆದರೂ, ಹಾಗೆ ನೇರವಾಗಿ ಆತನನ್ನು ಸಂಬೋಧಿಸಿ ಪೂಜಿಸುವ ಯೋಗ್ಯತೆ ಅಲ್ಪರಾದ ನಮಗಿಲ್ಲ. ತೃಣ ಜೀವರಾದ ನಾವು, ನಮ್ಮ ಸ್ವಗುರುಗಳನ್ನೂ ಪರಮ ಗುರುಗಳನ್ನೂ ತತ್ವಾಭಿಮಾನಿಗಳಾದ ದೇವತೆಗಳನ್ನೂ ಸ್ಮರಿಸಿ ಸರ್ವದೇವತಾಂತರ್ಗತನಾದ ಶ್ರೀ ಮುಖ್ಯಪ್ರಾಣರ ಹೃತ್ಕಮಲದಲ್ಲಿರುವ ಶ್ರೀ ಲಕ್ಷ್ಮೀಸಹಿತನಾದ ಶ್ರೀಹರಿಯನ್ನು ಧ್ಯಾನ್ನಿಸಿ, ಪೂಜಿಸಿ ದಾಗಲೇ ಪರಮಾತ್ಮನು ಆ, ಪೂಜೆಯನ್ನು ಸ್ವೀಕರಿಸಿ ಅನುಗ್ರಹಿಸುತ್ತಾನೆಂಬ ಕ್ರಮುವನ್ನು ಶ್ರೀ ಜಗದ್ಗುರು ಮಧ್ವಾಚಾರ್ಯರು ಸಾರಿ ಹೇಳಿದ್ದಾರೆ.

ಆದ್ದರಿಂದ ಶ್ರೀರಮಾ ಬ್ರಹ್ಮಾದಿ ಸಕಲ ಸುರರಿಂದ ಪರಿವೃತನಾದ ಪರಮಾತ್ಮನನ್ನೇ ಭಜಿಸಬೇಕು. ನಮ್ಮಿಂದ ಪೂಜಿಸಲ್ಪಟ್ಟ ಆ, ದೇವತೆಗಳು ನಮ್ಮ ಸಾಧನಕ್ಕೆ ಬರುವ ವಿಘ್ನಗಳನ್ನು ತಡೆದು ನಮಗೆ ಇಂದ್ರಿಯ ಪಾಟವವನ್ನೂ, ಸದ್ಭಕ್ತಿಯನ್ನೂ ಪಾಲಿಸುತ್ತಿದ್ದಾರೆ.

ಆದುದರಿಂದ ನಿತ್ಯದಲ್ಲೂ ಯಥಾಯೋಗ್ಯವಾಗಿ ಶ್ರೀಹರಿ ಭಕ್ತರನ್ನು ತಾರತಮ್ಯಯುಕ್ತವಾಗಿ ಸ್ಮರಿಸಿ ಪೂಜಿಸಿ ಅವರ ಅಂತರ್ಗತನಾದ ಶ್ರೀಹರಿಯನ್ನು ಭಜಿಸಬೇಕೆನ್ನುವ ಶ್ರೀ ಪೂರ್ಣ ಪ್ರಜ್ಞರ ಆದೇಶವನ್ನು ಮನನ ಮಾಡಿಕೊಳ್ಳಲು ಮೂಡಿ ಬಂದಿರುವ ತಾರತಮ್ಯೋಕ್ತ ಕೃತಿಗಳ ಈ ಚಿಕ್ಕ ಹೊತ್ತಿಗೆಯು ಚಿಕ್ಕ ಪೀಳಿಗೆಯ ಹೆಣ್ಣು ಮಕ್ಕಳಿಗೆ ತಾರತಮ್ಯ ಜ್ಞಾನವನ್ನು ಉಂಟು ಮಾಡಲು ಉಪಯುಕ್ತವಾಗಲೆಂದು, ಆಶಿಸುತ್ತೇನೆ.

ಅನುಗ್ರಹಮಾಡಿ ಮುನ್ನುಡಿಯನ್ನು ಬರೆದಿರುವ ವಿಶಾಲ ಹೃದಯಿಗಳಾದ ಶ್ರೀಮಾನ್ ಪಂಡಿತ ಜಾಲಿಹಾಳ್ ಕೇಶವಾಚಾರ್ಯವರ್ಯರಿಗೆ ಅನಂತ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ಈ, ಆರನೆಯ ಸುಮಾವಳಿಯನ್ನೂ ಪ್ರಕಾಶಕ್ಕೆ ತಂದಿರುವ ನನ್ನ ಪತಿದೇವರಿಗೆ ಭಕ್ತಿಪುರಸ್ಸರವಾದ ನಮಸ್ಕಾರಗಳನ್ನು ಸಲ್ಲಿಸಿ, ಸಕಾಲಕ್ಕೆ ಮುದ್ರಿಸಿ ಕೊಟ್ಟ L. N. ಮುದ್ರಣಾಲಯದವರಿಗೂ ಮತ್ತು ಕರಡು ತಿದ್ದುವ ಪ್ರಯಾಸದ ಕಾರ್ಯವನ್ನು ನಿರ್ವಹಿಸಿ. ಸಹಾಯ ಮಾಡಿರುವ ನನ್ನ ನೆರೆಯ ಸಹೋದರಿ ಕುಂ|| ಸೌ|| ಕುಮುದಾಬಾಯಿ ಪೊನ್ನಾಪುರ, ಇವರಿಗೂ, ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನನ್ನ ವಾಕ್‌ಶುದ್ಧಿಗಾಗಿ ರಚಿಸಲ್ಪಟ್ಟಿರುವ ಈ ಪದ ಸುಮಾವಳಿ ಸೌರಭವನ್ನು ಸುಜನರು ಆಘ್ರಾಣಿಸಿ ಆಶೀರ್ವದಿಸಬೇಕೆಂದು ಪ್ರಾರ್ಥಿಸುತ್ತಿದ್ದೇನೆ.

ಇತಿ,

ಕುಂ|| ಸೌ|| ಕೋಲಾರ್ ಪದ್ಮಾಬಾಯಿ, ರಾಮರಾವ್,

ಬಳ್ಳಾರಿ.

“ ಮಂಗಳಾಚರಣ ”

ಭಾಮಿನಿ ಷಟ್ಪದಿ

ಹನ್ನೆರಡು ಮತ್ತೆರಡು ಲೋಕವ
ತನ್ನ ಜಠರದೊಳಿಟ್ಟು ಪೂರ್ವದಿ
ಘನ್ನ ಮಹಿಮನು ಪ್ರಳಯ ಜಲಧಿಲಿ, ಶೇಷತಲ್ಪದಲಿ
ಕನ್ನೆ ಲಕುಮಿಯು ಬಾಹುಲತೆಗಳ
ಲಿನ್ನು ಬಂಧಿತನಾಗಿ ತೋರ್ವ, ಪ್ರ
ಪನ್ನ ವತ್ಸಲ ಸುಲಭ ಸ್ವರಮಣ ಸಕಲ ಸುಖಪೂರ್ಣ 1

ಚಂದ್ರಮನ ಉರುಕಾಂತಿ ಪಕ್ಷಕೆ
ಕುಂದುವುದು ಶ್ರೀರಾಮಚಂದ್ರನ
ಕುಂದದಿಹ ಸ್ವೈಶ್ವರ್ಯ ಕಾಂತಿಯು ಸತತ ಉದಿತವದು
ಇಂದಿರೇಶ ಸುಖಾತ್ಮಬಿಂಬ, ಸು
ಮಂದಹಾಸದಿ ನೋಡಿ ಸುಜನಕೆ
ಬಂದ ಸಂತಾಪಗಳ ಕಳೆವನು ಪೂರ್ಣಚಂದ್ರಮನು 2

ಹರಿಯ ಪರಿವಾರದ ಸುಭಕ್ತರು
ಸಿರಿ, ವಿರಿಂಚಿ, ಭವಾದಿ ಮುಖ್ಯರ
ಸುರರ ವೈದ್ಯರ ರಮಣಿ ನಾಮಾದೇವಿ ಪರ್ಯಂತ
ತರತಮದ ಭಾವದಲಿ ಪೂಜಿಪ
ಪರಮ ಭಕ್ತರಿ ಗೊಲಿವ ಶ್ರೀಹರಿ
ಸುರರ ಅವಹೇಳನವ ಸಹಿಸನು ಸುಮನಸರ ಪ್ರಿಯ 3

ಮೂರು ಅವತಾರಗಳ ತಾಳುತ
ಮೂರು ಆಶ್ರಮ ವಿಧವ ತೋರುತ
ಶ್ರೀರಮಾಪತಿ ಈಶ ಉಳಿದರು ದಾಸರೆಂತೆಂದ
ಮಾರುತನ ಮತವಿಡಿದು ಸುರಪರಿ
ವಾರ ಮಧ್ಯದಿ ಹರಿಯ ಪೂಜಿಪ
ಸೂರಿಗಳ ಮಮತೆಯಲಿ ಕಾವನು ಮಧ್ವ ವಲ್ಲಭನು 4

" ಗುರು ನಮನ ಇರುವಂತಿಕ ಆರೋಹಣ ಕ್ರಮ "

ರಾಗ : ವಾಚಸ್ಪತಿ ತಾಳ : ಆದಿತಾಳ

ನಮಿಸುವೆ ನನುದಿನ | ಗುರುಗಳಿಗೆ |
ಮಮತೆಯಲೆನ್ನನು | ಪೊರೆವರಿಗೆ || ||ಪ||
ಶಮ, ದಮ, ಜ್ಞಾನ ಸಂ | ಪನ್ನರಿಗೆ |
ರಮೆಯರಸನ ದಯ | ಪಡೆದರಿಗೆ || ||ಅ.ಪ||

ಧರಣಿಗೆ ಎನ್ನನು | ಇಳುಹುತಲಿ |
ಹರಿ, ಗುರು, ಮಹಿಮೆಯ | ಪೇಳುತಲಿ ||
ಹರುಷದಿ ಮುದ್ರಿಕೆ | ಕರುಣಿಸಿದ | ಮ
ದ್ಗುರು ನಾಗೇಶ | ಶರ್ಮರಿಗೆ || 1

ಹರಿಕಥಾಮೃತದ | ಸಾರವನು |
ಶರಣರಿ ಗುಡಿಸಿದ | ಗುರು ವರಗೆ ||
ಗುರುವಾಜ್ಞೆಲಿ ತ | ನ್ನಾಯುವನು|
ಸಿರಿ ಜಗನ್ನಾಥರಿ | ಗೆರೆದರಿಗೆ || 2

ಪದಪದ್ಯ ಸುಳಾ | ದಿಗಳಿಂದ |
ಪದುಮನಾಭನ ನ್ನೊಲಿಸಿರುವ |
ಭುಧ ವಿಜಯಾರ್ಯರ | ಪದಗಳಿಗೆ |
ಸದಮಲ ಕನಕಾ | ರ್ಯರ ಪದಕೆ || 3

ವರ ನಾರದರಂ | ಶದಿ ಬಂದು |
ಗುರುತರ ಐಶ್ವ | ರ್ಯವ ತೊರೆದು |
ಮುರುತನಮತ, ತತ್ವನ ನೊರೆದ |
ಗುರು ಪುರಂದ ರಾ | ರ್ಯರ ಪದಕೆ || 4

ಅಡವ್ಯಾಚಾರ್ಯರಿ | ಗಭಿನಮಿಪೆ |
ಬಿಡದೆ ವ್ಯಾಸ ತ | ತ್ವಜ್ಞರಿಗೆ ||
ಕಡುಕರುಣದಿ, ಎ | ನ್ನನು ಪೊರೆವ |
ಒಡೆಯ ಶ್ರೀರಾಘ | ವೇಂದ್ರರಿಗೆ || 5

ಭಾವಬೋಧರಿಗೆ | ಪ್ರಣಮಿಸುವೆ |
ಕಾವ ವಾದಿರಾ | ಜರ ಪದಕೆ ||
ದಿವ್ಯ ಚಂದ್ರಿಕಾ | ಕರ್ತರಿಗೆ | ವರ
ವೀವ ಶ್ರೀಪಾದ | ರಾಜರಿಗೆ || 6

ಕಣ್ವದಡದ, ಬ್ರ | ಹ್ಮಣ್ಯರಿಗೆ |
ಘನ್ನ ಸುಧಾ ಚಾ | ರ್ಯರ ಪದಕೆ || ಪ್ರ
ಸನ್ನ ನಾಗೇಶ | ಶಯನನ್ನ |
ಸನ್ನುತಿಸುವ ಸುರ | ವಂಶರಿಗೆ || 7

" ಶ್ರೀ ವಿಘ್ನೇಶವಂದನ ಕುಂದ ಕುಸುಮ "

ರಾಗ : ತೋಡಿ   ತಾಳ : ಛಾಪುತಾಳ

ವಂದಿಪೆ ಗಣ ನಾಯಕ| ಕುಂಜರಮುಖ || ಪ
ಇಂದಿರೆ ರಮಣನ ದ್ವಂದ್ವ ಪಾದಗಳಲಿ
ಕುಂದದ ಭಕುತಿಯ | ನಂದದಿ ನೀಡು|| ಪ

ಸಕಲ ಕಾರ್ಯಕೆ ಮೊದಲು | ನಿನ್ನಯ ಪಾದ
ಭಕುತಿ ಇಂದಲಿ ಪೂಜಿಸೆ ||
ಅಖಿಲ ವಿಘ್ನ | ಕಳೆದು | ಸುಖವಿತ್ತು ಸಲಹುವೆ
ಲಕುಮೀಶ ನಾಜ್ಞೆಯು | ಇದಕುಂಟು ಗುರುವೆ 1

ಆಕಾಶ ಕಭಿಮಾನಿ | ಏಕ ದಂತನೆ
ಲೋಕದೊಳಗೆ ವಂದ್ಯನೆ ||
ಕಾಕು ದುರ್ಮತಿಗಳ | ನೂಕಿ ಕೆಡಹು| ಪಿ
ನಾಕಿ ಪ್ರೇಮಕೆ ಪಾತ್ರ| ಸಾಕು ಸಜ್ಜನರ || 2

ರಕ್ತವಸನ ಧರನೇ | ವಿರಕ್ತವರನೆ
ಭಕ್ತರ ಪೊರೆವವನೇ ||
ಶಕ್ತಿ, ಯುಕ್ತಿ, ಆ|ಸಕ್ತಿ ಕೊಟ್ಟು ಹರಿ
ಭಕ್ತಿ ಮಾರ್ಗ ತೋರಿ| ಮುಕ್ತನೆಂದೆನಿಸು || 3

ಕ್ಷಿಪ್ರ ಪ್ರಸಾದ ನೆಂದು| ನಿನ್ನನು ಜಪಿಸೆ
ಕ್ಷಿಪ್ರದಿ ವರ ಕೊಡುವೆ ||
ಸರ್ಪ ಶಯನ ವಿ | ಶ್ವಂಭರಮೂರ್ತಿಯ
ಹೃತ್ಪದ್ಮದಲಿ ಕಾಂಬ | ಹಸ್ತಿ ವದನನೆ || 4

ಅನು ದಿನದಲಿ ಬರುವ | ವಿಘ್ನವ ಕಳೆ
ಅನುಗಾಲ ಹರಿ ಭಕ್ತಿಯ ||
ಅನುಗ್ರಹಮಾಡಿ ಎ | ನ್ನನು ದಯದಲಿನೋಡು
ಅನಿಮಿಷರಿಗೆ ಪ್ರಿಯ | ಅಗಜೆ ಕುಮಾರ|| 5

ಭಾರತ ಗ್ರಂಥಗಳ | ಬಹುಭಕುತಿ ಇಂದ
ಸಾರಿ ಬರೆದೆ ಮೋದ ||
ಬೀರಿ ಸಜ್ಜನರಿಗೆ | ದಾರಿತೋರಿಸಿದೆ, ನೀ
ನಾರಾಯಣ ಪ್ರಿಯ | ವ್ಯಾಸರ ಶಿಷ್ಯ || 6

ಪಾರ್ವತಿ ವರಪುತ್ರ| ಸುಂದರ ಗಾತ್ರ
ಹಾವಿನ ಕಟಿ ಸೂತ್ರ||
ಸರ್ವದ ಹರಿಯೆ ಸ|ರ್ವೋತ್ತಮ ನೆನ್ನುವ
ಶರ್ವನ ಸುತ ಎನ್ನ | ಗರ್ವವ ಹರಿಸು || 7

ಚಾರುದೇಷ್ಣನೆನಿಸಿ | ಅವತಾರ ಮಾಡಿದೆ |
ನೀರೆ ರುಕ್ಮಿಣಿಯಲ್ಲಿ ||
ಗೌರೀಶನ ವರದಿ | ಮೀರಿದ ದನುಜನ
ಶೌರಿ ಆಜ್ಞೆದಿ ಸಂ | ಹಾರ ಮಾಡಿದೆಯೋ || 8

ಪಾಶಾಂಕುಶ ಧರನೆ | ಪಾವನ ನೀನೆ
ಮೂಷಿಕ ವಾಹನನನೆ ||
ದೋಷ ರಹಿತ, ಸರ್ವೇಶ, ಸುಂದರ ನಾ
ಗೇಶ ಶಯನ ಹರಿ ದಾಸ ವರೇಣ್ಯ || 9

ಶ್ರೀ ಕಾಮದೇವರ ಪ್ರಾರ್ಥನ ಪಯೋಜ

ರಾಗ : ಅರಭಿ ತಾಳ : ಆದಿ

ಅಂಗಜ, ಮನ್ಮಥ, ಮಾರ, ಮನೋಜ |
ಮಂಗಳ ಮಕರ ಧ್ವಜ ||
ತುಂಗ ವಿಕ್ರಮ, ಅನಂಗ ಹರಿಯಸುತ
ಅಂಗನೆರತಿ ಪ್ರಿಯ | ಶೃಂಗಾರ ನಿಲಯ || ಅ | ಪ

ತಾರಕ ಅಸುರ ಸಂ | ಹಾರ ವಾಗಲು ಸುಕು
ಮಾರ ಶಿವನಿಗೆ ಬೇಕಾಯ್ತು ||
ಧೀರ ಹರನ ತಪ ಕೆಡಿಸಿ ಪೂಶರದಿ |
ಮೂರನೆ ಕಣ್ಣಿಗೆ ಆಹುತಿ ಯಾದಿ || 1

ದೇವತ ಕಾರ್ಯಕ್ಕೆ | ಕಾಯುವ ನೀಗಿ |
ದೇವಿ ರುಕ್ಮಿಣಿಗೆ ಮಗನಾದೆ
ಭಾವಜ ನೀ ಪ್ರಧ್ಯುಮ್ನ ನಾಮದಿ
ದೇವ ವೈರಿ ಶಂಬರನನು ತರಿದೆ || 2

ದುಷ್ಟ ವಿಷಯಗಳ | ದೃಷ್ಟಿಗೆ ತಾರದ
ಧಿಟ್ಟ ಮನವ ಕೊಡು | ಮನಸಿಜನೇ
ಇಷ್ಟದೈವ ನಾ | ಗೇಶ ಶಯನನನು |
ಮುಟ್ಟಿ ಭಜಿಪ ಸೌ | ಭಾಗ್ಯವ ನೀಡೊ || 3

ಶ್ರೀ ಗಿರಿಜಾ ಪೂಜಾ ಪಾದರಿ

ರಾಗ : ಆನಂದ ಭೈರವಿ   ತಾಳ : ಆದಿತಾಳ

ಪೂಜಪೆನೆ ಪರಮ ಪಾವನಿ | ಪಾಪ ಶಮನಿ
ರಾಜಿಸೆನ್ನಮನದಿ ಭವಾನಿ | ವಿ
ರಾಜಿಸೆನ್ನಮನದಿ ಭವಾನಿ || ಅ || ಪ
ಪೂಜಿಪೆ ಕಲಕೀರ ವಾಣಿ | ರಾಜಶೇಖರನ ರಾಣಿ
ಮೂಜಗದ ಮನೋಭಿಮಾನಿ
ರಾಜೀವಾಕ್ಷಿ ಮೃಡಾಣಿ || ಅ || ಪ ||
ಅರಿಷಿಣ ಕುಂಕುಮವು ಗಂಧವು, ಬುಕ್ಕಿಟ್ಟು
ಸರಸಿಜ, ಸೌಗಂಧಿ ಪುಷ್ಪವು
ಪರಿಮಳಿಸುವ ಧೂಪ, ದೀಪ | ಸುರಸಭಕ್ಷ್ಯ ನೈವೇದ್ಯ
ಮೆರವ ಆರತಿಗಳ ನೈಯ್ದು | ಚರಣಕಮಲಕ್ಕೆರಗಿ ನಾನು 1

ಸ್ಕಂದ ಗಣೇಶರಿಗೆ ಮಾತೆಯು | ಪ್ರಖ್ಯಾತೆಯೆ
ಇಂದು ಶೇಖರನ್ನ ಪ್ರೀತೆಯು
ಸುಂದರ ರಘು ರಾಮನ ಪದ | ದ್ವಂದ್ವಗಳನ್ನು ಎನ್ನ ಹೃದಯ
ಮಂದಿರದಲಿ ನಿಲಿಸಿ ಸ್ತುತಿಪ | ಕುಂದದ ಸೌಭಾಗ್ಯ ನೀಡೆ 2

ಬಾಲೇಂದು ಧರನ ಅಂಕದಿ | ಶೋಭಿಸುವ, ಸು
ಶೀಲೆ ಪೀತ ವಸ್ತ್ರಧಾರಣಿ ||
ಶೈಲೆಜೆ ವರ, ಅಭಯ ಹಸ್ತೆ | ಚಿರ ಸುಮಾಂಗಲ್ಯದಾತೆ
ಶ್ರೀ ಲತಾಂಗಿ ರಮಣ ನಾ | ಗೇಶ ಶಯನ ಹರಿಯ ಭಕ್ತೆ 3

ಶ್ರೀ ಪಾರ್ವತಿ ಪ್ರಸಾದ ಪಾರಿಜಾತ

ರಾಗ : ಆನಂದ ಭೈರವಿ ತಾಳ : ಛಾಪುತಾಳ

ಗಿರಿರಾಜ ತನಯೆ ಗೌರಿ | ಶ್ರೀ ಗಿರಿಜೆ |
ಹರನರಸಿ ಸ್ವರ್ಣ ಗೌರಿ ||
ದುರಿತ ಪರಿಹರಿಸಿ ಸಾರಿ | ಬಂದು ನೀ
ವರವ ಕೊಡು ಕರುಣ ಬೀರಿ || ಪ ||
ದಕ್ಷಸುತೆ | ಧರ್ಮದೇವಿ | ನೀನಂದು
ದಕ್ಷಯಜ್ಞಕೆ | ತೆರಳಿದೆ ||
ಅಕ್ಷಿ ಮೂರವನಿ ಗನ್ನ | ಕೊಡದಿರಲು |
ಆಕ್ಷಣದಿ ದೇಹ ವಳಿದೆ || 1

ಹಿಮ ಶೈಲನಲಿ ಜನಿಸಿದೆ | ಹೈಮವತಿ
ಉಮ ಪಾರ್ವತಿ ಎನಿಸಿದೆ ||
ಕಾಮಹರನನು ಒಲಿಸಿದೆ | ತಪಗೈದು
ವಾಮದೇವನ ವರಿಸಿದೆ || 2

ರಾಗ : ನಾಟಿಕುರಂಜಿ

ಗೀರ್ವಾಣರೆಲ್ಲ ನೆರೆದು | ತಂತಮ್ಮ
ಶೌರ್ಯ ವೀರ್ಯಗಳ ನೆನೆದು ||
ಸರ್ವೋತ್ತಮನ್ನ ಮರೆದು | ಇರಲಾಗ
ಶರ್ವಾಣಿ ಜ್ಞಾನ ವೆರೆದೆ || 3

ಮನಸಿಗಭಿಮಾನಿ | ನೀನೆ | ನಿನ್ನ ಪತಿ
ವನಜಾಕ್ಷ ಗತಿ ಪ್ರಿಯನು ||
ಕನಸಿಗಭಿಮಾನ ಅಹನ | ರುದ್ರನು |
ಮನಸಿಜನ ಜಯಿಸಿದವನು 4

ಸ್ಕಂದ ಗಣಪರಿಗೆ | ಜನನಿ | ಕಲ್ಯಾಣಿ
ಸುಂದರಿ ಜಗನ್ಮೋಹಿನಿ ||
ಇಂದೀವರಾಕ್ಷಿ ಸುಗುಣಿ | ನಮ್ಮಮ್ಮ
ಚಂದ್ರಶೇಖರನ ರಾಣಿ 5

ರಾಗ : ಆರಭಿ

ಕೈಲಾಸ ಶಿಖರದಲ್ಲಿ | ರಂಜಿಸುವ |
ವೈಭೋಗದ | ಸಭೆಯಲಿ ||
ಹೈಮ ಮಣಿ | ಮಂಟಪದಲಿ | ಶೋಭಿಸಿದೆ |
ತೈಜಸಾ ಹರ | ನಂಕದಿ || 6

ಇಂದ್ರಾದಿ ಸಕಲ ಸುರರು | ಮುನಿವರರು
ಸಂದಣಿಸಿನಿಂದು | ನುತಿಸೆ ||
ವಂದಿ ಮಾಗಧರು | ಪೊಗಳೆ | ನಿನ್ನೊಡನೆ |
ನಂದಿವಾಹನ ಮೆರೆದನು || 7

ಪರತತ್ವ | ಅರುಹ ಎಂದು | ಬಿನ್ನೈಸೆ |
ಪರಮಾತ್ಮ ಹರಿಯೆ ಎಂದು ||
ಸಿರಿರಾಮ ಮಂತ್ರವನ್ನು | ಜಪಿಸೆಂದು |
ಪರಶಿವನು ನುಡಿದ ನಂದು || 8

ರಾಮ ನಾಮವ | ಜಪಿಸುತ | ಪತಿಯೊಡನೆ |
ಪ್ರೇಮದಿಂದಲಿ | ನಲಿಯುತ ||
ಈ ಮಹಿಯ | ಭಕ್ತ ಜನಕೆ | ಮಾಂಗಲ್ಯ
ಕಾಮಿತದ ಫಲ | ನೀಯುತ || 9

ರಾಗ : ಹಿಂದೋಳ

ಮೆರೆವ ಪೀತಾಂಬರಗಳ | ಧರಿಸುತ್ತ
ವರ ಅಭಯಕರ ತೋರುತ ||
ಹರನ ಅಂಕದಿ ಕುಳಿತಿಹ | ಹರಿಣಾಕ್ಷಿ |
ಚಿರ ಸುಮಾಂಗಲ್ಯ ನೀಡೆ || 10

ಭಾದ್ರಪದ ಶುದ್ಧ ತೃತಿಯ | ದಿನದಲ್ಲಿ
ಮುದ್ದು ಗೌರಿಯೆ ನಿನ್ನನು ||
ಶ್ರದ್ಧೆಯಿಂದಲಿ ಪೂಜಿಪ | ಸತಿಯರಿಗೆ
ಭದ್ರ ಮಾಂಗಲ್ಯ ನೀವೆ || 11
ಅರಿಶಿನವು ಕುಂಕುಮಗಳು | ಶ್ರೀಗಂಧ |
ವರಪಾರಿಜಾತದರಳು ||
ಜರಿಗೆ ಪೀತಾಂಬರಗಳು | ಕಂಚುಕವು |
ಸರುವ ಆಭರಣಂಗಳು || 12
ಅಗರು ಚಂದನ ಧೂಪವು | ದೀಪಗಳು
ಮಿಗಿ ಭಕ್ಷ್ಯ ಪಾಯಸಗಳು ||
ಸುಗುಣಿ ಗೌರಮ್ಮ ನಿನಗೆ | ತಂದಿರುವೆ |
ಚಿಗುರೆಲೆಯ ತಾಂಬೂಲವು || 13

ರಾಗ : ಮೋಹನ

ಸ್ವಚ್ಛ ಧಾನ್ಯದ ತುಂಬುವೆ | ಮೊರಗಳಲಿ
ಬಿಚ್ಚೋಲೆ ಬಳೆಯ ನಿಡುವೆ ||
ಮುಚ್ಚು ಬಾಗಿನವ ಕೊಡುವೆ | ನಿನ್ನನ್ನು
ಮೆಚ್ಚಿಸುತ ವರ ಬೇಡುವೆ || 14

ಜಯ ಜಯತು ಕಾತ್ಯಾಯಿನಿ | ಶ್ರೀ ಗೌರಿ
ಜಯ ಜಯತು ಶುಭದಾಯಿನಿ ||
ಜಯ ಜಯತು ಭಕ್ತ ಜನನಿ | ನಮ್ಮಮ್ಮ |
ಜಯ ಜಯತು ಪಾಪ ಶಮನಿ || 15

ಮಂದ ಹಾಸದ | ವೀಕ್ಷಣ ತೋರುತ್ತ
ಸುಂದರೀ | ಶುಭಲಕ್ಷಣ | ಮನ ||
ಮಂದಿರಕೆ | ಬಾ ಈಕ್ಷಣ || ಮಹದೇವಿ |
ವಂದಿಸುವೆ ಕೊಡು ರಕ್ಷಣ 16

ರಾಗ : ಅಠಾಣ

ದೈತ್ಯ ದಾನವ ಹಾರಿಣೀ | ರುದ್ರಾಣಿ ||
ಖಡ್ಗ ಖೇಟಕ ಧಾರಿಣಿ ||
ಮೃತ್ಯುಹರ | ಶಿವನ ರಾಣಿ | ಶರ್ವಾಣಿ |
ಶತ್ರುಹರೆ | ಅಭಯ ಪಾಣಿ || 17

ವರವ ಬೇಡುವೆನು | ತಾಯೆ | ಶ್ರೀಲಲಿತೆ ||
ಸುರ ಪಾರಿಜಾತ ವೀಯೆ ||
ಕರಿಚರ್ಮ ಧರನ | ಪ್ರಿಯೆ | ಸೌಭಾಗ್ಯ |
ಹರಿ ಭಕ್ತಿ ಇತ್ತು || ಕಾಯೆ|| 18

ತೂಗು ಮಣಿ, ಮಂಚದಲ್ಲಿ | ರಂಜಿಸುವ |
ರಾಗ ರಂಗಿನ ಹಾಸಿಗೆ ||
ನಾಗ ಸಂಪಿಗೆಯು ಒರಗು | ಹರ ನೊಡನೆ |
ಭೋಗದಲ್ಲಿರುವ | ಸೊಬಗು || 19

ರಾಗ . ಮಧ್ಯಮಾವತಿ

ಲಾಲೀ ವಸಂತಗೌರಿ | ಮೃಡ ನರಸಿ |
ಲಾಲಿ ವೈಭೋಗ | ಗೌರಿ ||
ಲಾಲಿ ಮಂಗಳ ಮೌನ ಗೌರಿ | ಭವನರಸಿ |
ಲಾಲಿ ಶಾಂಭವಿ | ದುರ್ಗೆ ಗೌರಿ || 20

ನಾಗ ಭೂಷಣನ ಜಾಯೆ | ನಳಿನಾಕ್ಷಿ
ಯೋಗ ಭೋಗಗಳ ನೀಯೆ ||
ನಾಗೇಶ ಶಯನ ಹರಿಯ | ಪದವ ಚಿ
ನ್ನಾಗಿ ನೆನೆವಂತೆ ಮಾಡೆ || 21

8

"ಶ್ರೀ ತುಲಿಸಿ ಪ್ರಾರ್ಥನ ಪಚ್ಚಿತೆನೆ"

ರಾಗ : ಕಲ್ಯಾಣಿ   ತಾಳ : ಆದಿತಾಳ

ಮಂಜುಳೆ | ಶ್ರೀ ತುಳಸಿ | ಕಂಜನಾಭ | ಪ್ರಿಯೆ |
ರಂಜಿಸು | ಅಂಗಳದಿ | ರಂಗನರಾಣಿ | ರಂಜಿಸು | ಅಂಗಳದಿ || ||ಪಲ್ಲವಿ||
ಕುಂಜರಗಮನೆ | ಎನ್ನಂಜಿಕೆ | ಬಿಡಿಸಿ, ನಿ
ರಂಜನ ಮೂರ್ತಿಯ | ಕಂಜಪದ | ತೋರೆ ||ಅ. ಪ.||

ಹರಿ ಶ್ರೀ ಧನ್ವಂತ್ರಿಯ | ಹರುಷ ಬಿಂದುಗಳಿಂದ |
ಹರಿಣಾಕ್ಷಿ | ಧರೆಗಿಳಿದೆ ||
ಸುರ, ಇಂದ್ರ | ಪ್ರಮುಖಾ | ದ್ಯಮರರು | ನಿನ್ನನು |
ಹರಿಯೊಡನೆ | ಪೂಜಿಸಿ | ಹರುಷವ ಪಡೆದರು || 1

ಸರಸಿಜಾಕ್ಷನ | ಸು ಸರಸದಿ | ಓಲೈಸಿ |
ಪರಮ ಮಂಗಳೆ | ಯಾದೆ ||
ಅರಿಶಿನ ಕುಂಕುಮ | ಪರಿಮಳ ದ್ರವ್ಯದಿ |
ಹರುಷದಿ | ಪೂಜಿಸೆ | ಹರಸಿ | ವರ ಕೊಡುವೆ || 2

ಉದಯಾಸ್ತ ಮಾನದಿ | ಸದನದಿ ನಿನ್ನನು |
ಮುದದಿಂದ | ಪೂಜಿಸುವೆ ||
ಪದುಮನಾಭನ ಸು | ಪಾದವ ಎನ್ನಯ |
ಹೃದಯದಿ ತೋರಿಸು | ಪದುಮಾಕ್ಷಿ | ತುಲಸಿ || 3

ಇಂದಿರೆ ದೇವಿಯ | ಅಂದದ | ಆವೇಶ
ದಿಂದ | ನೀ ಶೋಭಿಸುವಿ ||
ಮಂದಗಮನೆ ಎನ್ನ ಕುಂದುಗಳೆಣಿಸದೆ |
ಸುಂದರವದನ ಗೋ | ವಿಂದನ ತೋರಮ್ಮ || ಮಂಜುಳೆ || 4

ಮಂಗಳ ಮಹಿಮ ಶ್ರೀ | ಗಂಗಾಜನಕ | ಹರಿ |
ರಂಗನ್ನ ಪ್ರಿಯರಾಣಿ ||
ತಿಂಗಳ ಬೆಳಕಿಲಿ | ಪೊಂಗೊಳ ಲೂದುವ |
ಶೃಂಗಾರ ವದನನ್ನ | ಸಂಗಡ | ಕರೆತಾರೆ || ಮಂಜುಳೆ || 5

ಉತ್ಥಾನ ದ್ವಾದಶಿ | ಉತ್ತಮ ಹರಿ | ಪುರು |
ಷೋತ್ತಮಗೂ | ನಿನಗೂ ||
ಮತ್ತೇ ವಿವಾಹ ಗೈಯ್ಯುತ್ತ | ಪೂಜಿಸಲು |
ಉತ್ತಮಗತಿಗಳನಿತ್ತು | ಸಂತೈಸುವೆ || ರಂಜಿಸು || 6

ನಾಗೇಶಯನನ | ರಾಗದಿ ಧ್ಯಾನಿಪ |
ಯೋಗಿಜನರ | ತೋರು ||
ನಾಗವೇಣಿ ನಿನ್ನ | ಬಾಗಿ ಭಜಿಸುವೆನು |
ಯೋಗ ಭೋಗವಿತ್ತು | ಸಾಗಿಸು ಸಾಧನ || ಮಂಜುಳೆ || 7

"ಶ್ರೀ ಶಂಕರಸ್ತವನ ಬಿಲ್ವ"

ರಾಗ : ಭೈರವಿ ತಾಳ : ಆದಿತಾಳ

ಭೋಗಿ ಭೂಷಣನೆ ಬಾಗಿ | ಭಜಿಪೆ ಭಕ್ತಿ |
ಯೋಗವ ಕೊಡು ಸತತ | ಹರಿಯ ಭಕ್ತಿ | ಭಾಗ್ಯವ ಕೊಡು ನಿರತ ||ಪಲ್ಲವಿ||

ನಾಗಾರಿ ಗಮನನ | ಭೋಗೇಂದ್ರ ಶಯನನ |
ವಾಗೀಶ ಪಿತನ ಚೆ | ನ್ನಾಗಿ ಭಜಿಪ ದಿವ್ಯ || ಯೋಗವ ಕೊಡು || 1

ಕೃತ್ತಿವಾಸ ಪುರು | ಷೋತ್ತಮ ಹರಿಯನು
ಉತ್ತಮ ತಪಗೈದು | ಪೊತ್ತು ತೂಗುವೆಯೊ || 2

ಮೃತ್ಯುಂಜಯನೆ | ಅಪಮೃತ್ಯುಗಳ ಕಳೆದು |
ಚಿತ್ತದಲ್ಲಿ ಜ್ಞಾನ | ಭಕ್ತಿ ವೈರಾಗ್ಯವಿತ್ತು || ಯೋಗವ || 3

ಮನಸಿ ಗಭಿಮಾನಿ | ಮನಸಿನ ವ್ಯಾಕುಲ |
ಹರಿಸಿ ಭಕ್ತರ ಸಂಗ | ಬೆರಸಿ ಕಾಪಾಡಯ್ಯ || ಯೋಗವ || 4

ಕಾಮದೇವನ ಗೆದ್ದ | ವಾಮದೇವನೆ ದುಷ್ಟ |
ಕಾಮಗಳ ದಹಿಸಿ | ರಾಮಚಂದ್ರನ ಭಕ್ತಿ || ಯೋಗವ || 5

ಪಾರ್ವತಿ ವರಪ್ರಿಯ | ಗೀರ್ವಾಣರಿಗಭಯ |
ಸರ್ವದ ಕೊಟ್ಟು ವಿಷ | ನಿರ್ವಹಿಸಿದಯ್ಯ || ಯೋಗವ || 6

ಸದ್ಯೋಜಾತ, ವಾಮದೇವ | ತತ್ಪುರುಷನೆ |
ಬುದ್ಧಿ ಪಾಲಿಸು ಅಘೋರ | ಈಶಾನನೆ || ಯೋಗವ || 7

ಸಾಸಿರ ನಾಮವ | ಲೇಸಾಗಿ ಜಪಿಸುತ |
ಕಾಶಿ ನಗರದಲ್ಲಿ | ವಾಸವಾಗಿಹನೆ || ಯೋಗವ || 8

ಹರಿಯೆ ಸರ್ವೋತ್ತಮ | ಗುರು ಮುಖ್ಯ ಪ್ರಾಣರು |
ವರ ತಾರ ತಮ್ಯದ | ಪರಿಯ ತಿಳಿವ ದಿವ್ಯ || ಯೋಗವ || 9

ವಿಷ್ಣುಭಕ್ತಿಯ ಕೊಟ್ಟು | ಶಿಷ್ಟಜನರೊಳಿಟ್ಟು |
ಶ್ರೇಷ್ಟ ಮಧ್ವಮತ | ದಿಷ್ಟ ದೀಕ್ಷೆ ಕೊಟ್ಟು || ಯೋಗವ || 10

ನಟರಾಜ ಪ್ರಳಯದಿ | ನಟಿಸಿ ಜಗದಹಿಸಿ |
ವಟಪತ್ರ ಶಾಯಿಗೆ | ದಿಟವಾಗಿ ಸಲಿಸುವೆ || ಯೋಗವ || 11

ವರ ವೈಷ್ಣವಾಗ್ರಣಿ | ಹರ, ಶಂಭೊ, ಸು, ಕರುಣಿ |
ನಿರುತದಿ ಎನ್ನ ಮನ | ಹರಿಪಾದದಲ್ಲಿರುವ || ಯೋಗವ || 12

ಶಂಭೋ, ಶಂಕರ, ಶಿವ | ಜಂಭಾರಿ ನುತದೇವ |
ಅಂಬಾ ರಮಣ ಸ್ಥಾಣು | ನಂಬಿದೆ ಮಹದೇವ || ಯೋಗವ || 13

ವಿಷಕಂಠ ರುದ್ರನೇ | ಶಶಿಮೌಳಿ ಭದ್ರನೇ |
ಅಸುರ ಮೋಹನ ಹರ | ಬಿಸುಜಾಕ್ಷ ಹರಿ ಭಕ್ತಿ || ಯೋಗವ || 14

ನಾಗೇಶ ಶಯನನ | ರಾಗದಿಂ ಭಜಿಸುವ |
ಭಾಗವತರ ಸಂಗ | ಬೇಗದಿ ಕೊಟ್ಟು ಭಕ್ತಿ || ಯೋಗವ|| 15

★ ★ ★

"ಶ್ರೀ ಪಂಪಾಪತಿ ಸ್ತೋತ್ರ ಶಿರೀಷ"

ರಾಗ : ಹಿಂದೂಸ್ತಾನಿ ಕಾಪಿ   ತಾಳ : ರೂಪತಾಳ.

ಪಾರ್ವತೀಶ | ಪಾಪನಾಶ | ಪಂಪ ಧೀಶನೆ | || ಪಲ್ಲವಿ ||
ಪಾವನ ಕೈಲಾಸ ವಾಸ | ಭಾವಿ ಶೇಷನೆ || || ಅ. ಪ. ||

ಸೋಮಧರನೆ | ಕಾಮಹರನೆ |
ಸ್ವಾಮಿ ಶಂಕರನೆ ||
ರಾಮನಾಮ | ನೇಮದಿಂದ |
ಭಾಮೆ ಗೊರೆದನೆ || 1

ಚಕ್ರತೀರ್ಥ ಪ | ವಿತ್ರ ಕ್ಷೇತ್ರ |
ಮುಖ್ಯ ಪ್ರಾಣನ ||
ಚಕ್ರವರ್ತಿ ರಾಮಚಂದ್ರನ |
ಭಕ್ತಾಗ್ರೇಸರ || 2

ವರಹ ತನಯ | ತೀರ ಮಂದಿರ |
ಪರಮ ಗುರು ವರ ||
ಸಿರಿ ನಾಗೇಶ | ಶಯನ ಪ್ರಿಯ |
ಕರುಣಿ ಶಶಿಧರ || 3

"ಶ್ರೀ ಶೇಷದೇವರ ಪ್ರಾರ್ಥನೆ, ಶ್ವೇತ ಚಂಪಕ"

ರಾಗ : ಸಾವೇರಿ   ತಾಳ : ಛಾಪು ತಾಳ

ಶೇಷ ದೇವನೆ | ಪಾಲಿಸೊ | || ಪಲ್ಲವಿ ||
ವಾಸುದೇವನ ಭಕ್ತ | ವಾಸುಕಿ ಅಹೀಶ ಗುರು || || ಅ.ಪ. ||

ಸಾಸಿರ ಸುಫಣೆಗಳನು | ಲೇಸಾಗಿ ಪಸರಿಸುತ |
ಈಸರೋಜ ಭವಾಂಡ | ಶಿರದಿ ಧರಿಸಿ ||
ಹಾಸಿಗೆಯು, ಆಸನವು | ಶ್ವೇತಛತ್ರವು ಆಗಿ |
ಶ್ರೀಶ ನಾರಾಯಣನ | ಸೇವಿಸುವ ಗುರುವೆ|| 1

ದ್ವಿಸಹಸ್ರ ಜಿಹ್ವೆಯಿಂ | ಕುಸುಮನಾಭನ ಮಹಿಮೆ |
ಹಸನಾದ ವೇದ | ಸುಸ್ವರದಿ ನುತಿಪೆ ||
ಶಶಿವದನೆ ವಾರುಣೀ | ಶನೆ ನಿನ್ನ ಮೊರೆ ಹೊಕ್ಕೆ |
ನಿಶಿ, ಹಗಲು ಶ್ರೀ ಹರಿಯ | ಸ್ಮರಣೆ ಕೊಡು ಗುರುವೆ || 2

ರಾಮಾವತಾರದಲಿ | ರಾಮ ನನುಜನು ಆಗಿ|
ಸ್ವಾಮಿ ಸೇವೆಯ | ಮಾಡಿ ಧನ್ಯನಾದೆ ||
ಆ ಮಹಾ ದ್ವಾಪರದಿ | ಹಲಧರನು ನೀನಾಗಿ|
ಶ್ರೀ ಮಾಧವನ ಅ | ಗ್ರಜ ನೆನೆಸಿ ಮೆರೆದೆ || 3

ನೀಲಾಂಬರವನುಟ್ಟು | ಹಲ, ಮುಸಲ ಕೈಲಿಟ್ಟು |
ಲೋಲೈಪ ಏಕ ಕುಂ | ಡಲವ ಧರಿಸಿ ||
ಬಾಲೆ ವಾರುಣಿ ಸಹಿತ | ಭಕ್ತಿಯಿಂ ಕೈಮುಗಿದು |
ಶ್ರೀಲೋಲ ಹರಿಯ | ಹಿಂಬದಿಯಲ್ಲಿ ಇರುವೆ || 4

ನಾಗರಾಜನೆ ನಿನ್ನ | ಬಾಗಿ ನಾ ನಮಿಸುವೆನು |
ಭಾಗವತ ಜನ ಸಂಗ | ಬೇಗ ಕೊಡಿಸೊ ||
ಸಾಗರದ ಸುತೆಯೊಡನೆ | ಭೋಗದಿಂ ನಲಿವ ಶ್ರೀ |
ನಾಗೇಶಯನನಲಿ | ನಿಜಭಕುತಿ ನೀಡೋ || 5

"ಶ್ರೀ ಗರುಡದೇವರ ಸ್ತುತಿ. ಸಾರಸ"

ರಾಗ : ಕೇದಾರಗೌಳ ತಾಳ : ರೂಪಕತಾಳ

ವೈನತೇಯ | ವಿಹಗರಾಜ |
ವಿನತೆವರ ಸುತ || || ಪಲ್ಲವಿ ||
ಗಾನಲೋಲ ಹರಿಯ ಪೊತ್ತು |
ಸಾನುರಾಗದಿಂದ ಚರಿಪ || || ಅ. ಪ. ||

ಅಂಡದಿಂದ ನೀನುದಿಸೆ | ಪ್ರ
ಚಂಡ (ತೇಜನೆ) || ಶಭ್ದಕೆ
ಅಂಡಲಿದುದು ತ್ರಿಜಗ | ಶಶಿ, ಮಾ ||
ರ್ತಾಂಡರ ತೇ | ಜವು ಕುಂದಿತು || 1

ಛಂದೋಮಯ | ಪಕ್ಷಗಳ | ಒಂ
ದೊಂದು ರೋಮದಿಂ ||
ಇಂದಿರೇಶ ಹೆ | ರಿಯ ಮಹಿಮೆ
ನಂದದಿಂದ | ಪೊಗಳಿ ನಲಿವ || 2

ಹರಿಯ ಹೆಗಲಲ್ಲಿಟ್ಟು | ಆತನ (ದಿವ್ಯ)
ಚರಣ ಯುಗಗಳ | ನಿನ್ನ |
ಕರದಿ ಧರಿಸಿ | ಸಿರಿ ಪದಗಳ ||
ಪರಮ ಚೆಲುವ | ಕಂಡು ನಲಿವ || 3

ತಂದೆ ಯಾಜ್ಞೆ ಪಡೆದು | ಜವದಿ
ಸಿಂಧು ಪೊಕ್ಕು ನೀ ||
ತಿಂದು ಕೂರ್ಮ ಗಜವ | ಜನನಿ
ಬಂಧ ಬಿಡಿಸೆ | ತಂದೆ ಸುಧೆಯ || 4

ಅರುಣಾಗ್ರಜ | ಗರುತ್ಮಂತ, ಸೌ ||
ಪರುಣಿ ವರಪ್ರಿಯ ||
ಸಿರಿ ನಾಗೇಶ | ಶಯನನಲಿ |
ನಿರತ ಭಕ್ತಿ ಇತ್ತು ಕಾಯೋ || 5

"ಶ್ರೀ ಭಾರತಿದೇವಿಯ ಸ್ತೋತ್ರ, ಸುಗಂಧರಾಜ"

ರಾಗ : ಆರಭಿ ತಾಳ : ಆದಿತಾಳ

ಭಾರತಿ ಭರತನರ್ಧಾಂಗಿ | ಕೃಪಾಂಗಿ |
ಸಾರಿದೆ ನಿಮ್ಮ ಚರಣ || || ಪಲ್ಲವಿ ||

ಘೋರ ದುರಿತಗಳ | ತೂರಿ ಕೆಡಹಿ ಮತಿ |
ತೋರಿ ಹರಿಸು ಮನೆ | ದಾರಿಯ ತೋರೆ || ||ಅ.ಪ.||

ಪ್ರದ್ಯುಮ್ನ ಜಠರಸಂ | ಭೂತೆ ಮರುತ ಪ್ರೀತೆ |
ವಿದ್ಯಾಭಿಮಾನಿ | ಖ್ಯಾತೆ ||
ವಿದ್ಯುನ್ನಾಮಕೆ | ವಾಗ್ದೇವಿ ಎನ್ನ, ಅ
ವಿದ್ಯವ ಕಳೆದು ಹೃ | ತ್ಯುದ್ಧಿಯ ಮಾಡೆ || 1

ಕಲಿ ಕಲ್ಮಷಗಳು | ಕಲೆತು ಭಾಧಿಪುದು |
ಜಲಜಾಕ್ಷಿಯೆ ಕೇಳೆ ||
ಕಳವಳ ಕಳೆದೆನ್ನ | ಕಾಪಾಡೆಂದು |
ಕಲಿಕುಲ ದಮನ ಕ | ಪೀಂದ್ರಗೆ ಪೇಳೆ || 2

ಯಜ್ಞಕುಂಡದಿಂ | ದುದ್ಭವಿಸಿಹಳೆ, ಎ |
ನ್ನಜ್ಞಾನವ ಹರಿಸೆ ||
ಪ್ರಜ್ಞ ತೇಜನಿಧಿ | ಭೀಮಗೆ ಪೇಳಿ |
ಸುಜ್ಞಾನ ಮತಿಯ | ಕೊಡಿಸೌ ತಾಯಿ || 3

ಆನಂದತೀರ್ಥರ | ಆನಂದ ಮತವನು |
ಏನೆಂದು ವರ್ಣಿಸಲಿ ||
ಸಾನಂದದಿಂದೀ | ಮತದ ತತ್ವವನು |
ಮಾನವಿಲ್ಲದಲೆ | ಪೊಂದಿಸು ತಾಯೆ || 4

ಕಾಳಾಹಿವೇಣಿ | ಶ್ರೀನಳ ನಂದಿನಿ |
ಕಾಳಿ, ಇಂದ್ರಸೇನಿ ||
ಶೈಲಜೆ, ಶ್ಯಾಮಲೆ | ಪೌಲೋಮಿ, ಉಷೆಯರ |
ಪಾಲಿಸಬೇಕೆಂದು | ಪಾಂಚಾಲಿಯಾದೆ || 5

ವೇದಾಭಿಮಾನಿಯೆ | ವೇದಗಳಿಗೆ ಅಪ
ವಾದವ ರಚಿಸುವರ ||
ಭಾದಿಪ ನಿರಯ ದಿ | ಭೇಧಿಸಿ ಕೆಡಹುತ |
ಸಾಧು ಜನಕೆ ಪಂಚ | ಭೇಧವ ತೋರೆ || 6

ನಾಗೇಶ ಶಯನನ | ಬಾಗಿ ಭಜಿಸುವಂಥ (ತ)
ಯೋಗವ ಕೊಡು ಜನನಿ ||
ಭಾಗವತರ ಸಹ | ಸಂಗ ಕೊಡಿಸಿ ಭವ
ನೀಗಿ ಸುಪಥ | ಚೆನ್ನಾಗಿ ತೋರಮ್ಮ || 7

" ಶ್ರೀ ವಾಣಿ ದೇವಿ ನಂದನ ವನಜ "

ರಾಗ : ಮೋಹನ   ತಾಳ : ಆದಿತಾಳ

ಬ್ರಹ್ಮಾಣಿ ನಿನಗೊಂದಿಪೆ | ದು
ಷ್ಕರ್ಮ ಕಳೆದು ಮನ| ನಿರ್ಮಲ ಮಾಡೆ|| ||ಪ||

ಬ್ರಹ್ಮದೇವನ ಜಾಯೆ| ಸರ್ವ್ವನರಸರ ತಾಯೆ ||
ರಮ್ಮೆ ರಮಣನ ಸು | ರಮ್ಯ ಪದ ತೋರೆ || ||ಅ. ಪ.||

ಅಖಿಲ ವಿದ್ಯಾನಿಲಯೆ | ಶಾರದೆಯೆ |
ನಿಖಿಲ ವಿದ್ಯಾದಾನಿಯೆ ||
ಸುಖ ತೀರ್ಥ ಮುನಿಗಳ | ಮುಕುತಿ ಶಾಸ್ತ್ರವನು |
ಯುಕುತಿಯಿಂ ತಿಳಿಯುವ | ಶಕುತಿಯ ಪಾಲಿಸೆ || 1

ರಾಜೀವದಳ ಲೋಚನಿ | ಕಲ್ಯಾಣಿ |
ಮೂಜಗದೊಳು | ಪಾವನಿ ||
ರಾಜರಾಜೇಶ್ವರ | ನಾದ ಹರಿಯು ಸೊಸೆ |
ನೈಜ ಭಕ್ತಿ ಸೌ| ಭಾಗ್ಯವ ನೀಡೆ || 2

ನಿಗಮ ಸ್ವರದಿಂದಲಿ | ಶ್ರೀಹರಿಯನ್ನು |
ಅಗಣಿತ ಭಕ್ತಿಯಲಿ ||
ಪೊಗಳುತ ವೀಣಾ | ಕ್ಷರ ಮಾಲೆ ಧರಿಸಿಹೆ |
ಸುಗುಣಿ, ಶ್ರೀನಾಗೇಶ | ಶಯನನ್ನ ತೋರೆ || 3

"ಶ್ರೀ ಮಾರುತಿ ಮಹಿಮ ಮಲ್ಲಿಕ"

ರಾಗ : ಮೋಹನ ತಾಳ : ಛಾಪುತಾಳ

ಮಾರುತಿ ಭಕ್ತರ ಸಾರಥಿ | ನಿನ್ನಯ ಕೀರುತಿ ಕೇಳಿದೆನು || ||ಪಲ್ಲವಿ||

ಭಾರತಿ ರಮಣ | ಹರಿ ವಾರುತಿ ಜಗದಲ್ಲಿ |
ಬೀರುತ ಭಕುತಿಯ | ತೋರುತ ಮೆರೆದೆ || ||ಅ. ಪ.||

ತ್ರೇತೆಯಲ್ಲಿ | ಕೋತಿರೂಪದಿ | ಶ್ರೀರಾಮ
ನಾಥನ್ನ ಸೇವಿಸಿದೆ |
ವಾತಸುತನೆ | ಪ್ರಖ್ಯಾತ | ವಾರಿಧಿ | ದಾಟಿ
ಸೀತೆಗುಂಗುರ ತೋರಿದಾತನೆ ಹನುಮ || 1

ಖ್ಯಾತ ರಾವಣನ | ಪ್ರೀತಿಯ | ವನ ಕಿತ್ತಿ
ದೈತ್ಯರ ಮರ್ಧಿಸಿದೆ ||
ಖಾತಿಯಿಂದಲಿ | ಲಂಕಪು | ರಕೆ ಬೆಂಕಿಯ ನಿಟ್ಟು |
ವೀತಿಹೋತ್ರನಿಗುಣಿಸಿ | ಪ್ರೀತಿಬಡಿಸಿದೆ || 2

ಕುಂಜರ ಗಮನೆ | ಜಾನಕಿ ವಾರ್ತೆಯ ತಂದು |
ಕಂಜನಾಭನಿಗೊರೆದೆ ||
ರಂಜಿಪ ಹಿಮಪರ್ವತಾಗ್ರಕ್ಕೆ ಹಾರಿ |
ಸಂಜೀವಿನಿ ತಂದು | ಸಜ್ಜನರ ಪೊರೆದೆ 3

ಸೇತುವೆಯನು ಕಟ್ಟಿ | ಪಾತಕರನು ಮೆಟ್ಟಿ |
ಸೀತರಾಮರ ಪದಮುಟ್ಟಿ |
ನಾಥ ರಾಮರ ಕೂಡಯೋಧ್ಯ| ಪುರಕೆ ಬಂದು |
ದೂತನೆಂದು | ಬಹು ಖ್ಯಾತಿಯ ಪಡೆದೆ || 4

ನವರತ್ನಮಯವಾದ | ಸಿಂಹಾಸನದಲಿ |
ಅವನಿಜೆಪತಿ ಇರಲು |
ಪವಮಾನಸುತ | ಹರಿಪಾದವ | ಪಿಡಿದೆಯೊ |
ಭುವಿಯೊಳು | ನಿನಗ್ಯಾರು | ಸರಿ ಇಲ್ಲ ಹನುಮ || 5

ಬುದ್ಧಿ, ಬಲ, ಯಶ, ಧೈರ್ಯ | ಉಂಟಾಗೋದು |
ನಿರ್ಭಯತ್ವಾ, ಜಾಡ್ಯವು ||
ಸದ್ವಿದ್ಯ, ವಾಕ್ಪಾಟವ | ಉಂಟಾಗೋದು |
ಸದ್ಭಕ್ತಿ ಬರುವುದು | ನಿನ್ನನು ನೆನೆಯೆ || 6

ಸಿರಿ ರಾಮಾಯಣ | ಪೇಳುವ ಸ್ಥಲದಿ | ವಾ
ನರ ಮುಖ್ಯ ನೀನಿರುವೆ ||
ಹರಿ ರಾಮ ನಾಮವ | ಜಪಿಸುತ ನೀ ಬಾಷ್ಪ
ವಾರಿಗಳನು | ಸುರಿಸುವೆ || ಹನುಮ || 7

ಅಂಜನೆ ಸುತನೆ | ಪ್ರಭಂಜನ ತನಯನೆ |
ಮಂಜುಳ ಭಾಷಣನೆ ||
ಸಂಜೀವರಾಯನೆ | ಸ್ಮರಣೆ ಮಾಡುವರ |
ಅಂಜಿಕೆ ಕಳೆಯುತ | ರಂಜಿಪ ಗುರುವೆ || 8

ಸಿರಿ ಕಿಂಪುರುಷ ಖಂ | ಡದಿ ಕದಳಿ ವನದಲಿ |
ಸುರರಿಂದರ್ಚನೆ ಗೊಳ್ಳುತ ||
ವರ ನಾಗೇಶ ಶಯನ | ಶ್ರೀರಾಮನ್ನ |
ನಿರುತದಿ ಜಪಿಸುತ | ಹರುಷವ ಪಡುವೆ || 9

"ಶ್ರೀ ವೀಣಾಪಾಣಿ ಮಾರುತಿ ಸ್ತೋತ್ರ, ಪದ್ಮ"

ರಾಗ : ಆನಂದ ಭೈರವಿ ತಾಳ : ಆದಿತಾಳ

ವೀಣೆ ಪಿಡಿದುದೇನೊ | ಮುಖ್ಯಪ್ರಾಣ || || ಪ ||

ವೀಣೆ ಪಿಡಿದುದೇನೊ | ಜಾಣ ಮುಖ್ಯಪ್ರಾಣ |
ಕಾಣದಿದ್ದೆನೊ ಇಂಥ | ಗಾನ ಕೋವಿದನ || || ಅ. ಪ. ||

ಉದ್ಯದ್ರವಿ ಪ್ರಖರ | ಸನ್ನಿಭ ಅಚ್ಯುತನ |
ಪದ್ಮಾಂಕದಿ ಕುಳಿತು | ಬದ್ಧಾಂಜಲಿ (ಕರದಿ) ಗಳಲಿ || 1

ಶ್ರೀ ಭಾರತಿ ಕಾಂತ | ಸುಜ್ಞಾನಿ ಬಲವಂತ |
ಸದ್ಭಕ್ತಿಪ್ರದಶಾಂತ | ಬಲು ವೀರ ಹನುಮಂತ || 2

ಸಕಲ ಜೀವರಲಿ | ಲಕುಮೀಶನಾಜ್ಞೆಲಿ |
ಭಕುತಿಯಿಂ ಹಂಸಮಂತ್ರ | ಜಪಿಪ ಕರಗಳಲಿ || 3

ತ್ರೇತೆಯಲ್ಲಿರಘು | ನಾಥನ್ನ ಸೇವಿಸಿ |
ಪಾತಕರನ್ನು ಕೊಂದ | ಪೂತವಾದ ಕೈಲಿ || 4

ದ್ವಾಪರ ಯುಗದಲಿ | ಪಾಪಿಗಳ ಕೊಲ್ಲಲು |
ಕೋಪದಿಂ ಗದೆ ಪಿಡಿದಾ | ಪದ್ಮ ಕರಗಳಲಿ 5

ಇಳೆಯೊಳು ದುಷ್ಟರ | ಖಳಶಾಸ್ತ್ರ ಜರಿಯುತ
ಸುಲಭದಿಂ ಸತ್‌ಶಾಸ್ತ್ರ | ಬರೆದ ಕರಗಳಲಿ || 6

ಅಗಣಿತ ಗುಣಸಿರಿ | ನಾಗೇಶ ಶಯನನೆ |
ಜಗಕೆಲ್ಲ ಪತಿ ಎಂದು | ಸೊಗಸಾಗಿ ಪಾಡುತ || 7

"ಶ್ರೀ ಭೀಮಸೇನ ಕೀರ್ತನ ಕುರುವಕ"

ರಾಗ : ಶಿವರಂಜನಿ ತಾಳ : ಛಾಪು ತಾಳ

ಜಯ ಭೀಮಸೇನ ಮದ್ಗುರು ವೆ| ಮಹ |
ದ್ಭಯ ನಿವಾರಣ ನಿನ್ನ ಕೂಗಿ ನಾ ಕರೆವೆ || ||ಪಲ್ಲವಿ||

ಕುರುಕುಲ ರಾಜಕುಮಾರ | ಗುರು |
ಹರಿಣಾಕ್ಷಿ ಕುಂತಿ ಕುವರ | ಬಲುಧೀರ ||
ಗಿರಿ ಯೊಡೆಯಿತು ನಿನ್ನ ಭಾರ | ತಾಕಿ |
ಧರಣಿ ನಡುಗಿತು ನಿನ್ನಯ ಬಲಕೆ | ವೀರ || 1

ದುಷ್ಟಕಿಮ್ಮೀರ, ಹಿಡಿಂಬ | ಆ
ಕೆಟ್ಟಬಕನು, ಕೀಚಕ, ಜರಾಸಂಧ
ಒಟ್ಟಲಿ ನೂರು ಕೌರವರ | ಅಸು
ಕುಟ್ಟಿ ಭೂ ಭಾರ ತಗ್ಗಿಸಿದೆಯೊ | ಧೀರ || 2

ಹರಿಯು ಮತವೆ ನಿನ್ನ ಮತವೊ | ವರ
ಗುರುವೇ ನಿನ್ನಯ ಮತವೇ | ಹರಿಯ ಮತವೂ
ಧುರದಲ್ಲಿ ನೀ ಗೈದ ಕಾರ್ಯ | ಹರಿಯು
ಹರುಷದಿ ಅನುಮೋದಿಸಿದ ಉದಾರ || 3

ಕದನ ಯಜ್ಞವ ಗೈದೆನೆಂದೆ | ನೀನು
ಅದನೆಲ್ಲ ಶ್ರೀ ಹರಿಗರ್ಪಿಸಿ | ನಿಂದೆ |
ಸುದತಿ ಕೃಷ್ಣೆಗೆ ಹರುಷ ತಂದೆ | ನೀನು
ಮುದದಿ ಧರ್ಮಜನಿಗೆ | ಪಟ್ಟಗಟ್ಟಿದೆ || 4

ಭಾಗವತರ ಭಾಗ್ಯಸಿಂದು | ಗುರು
ಭಾಗವತಾಗ್ರಣಿ | ಭಕ್ತರ ಬಂಧು
ಬೇಗನೆ ಸಲಹ ಬೇಕೆಂದು | ನೀನೆ
ನಾಗೇಶ ಶಯನಗೆ | ಪೇಳ ಬೇಕೆಂದು || 5

"ಶ್ರೀ ಮಧ್ವಾಚಾರ್ಯರ ಮಹಿಮ ಮಾಧವಿ"

ರಾಗ : ಪೀಲು ತಾಳ : ಆದಿತಾಳ

ಬಾರೋ ಯತಿರಾಜ | ಕರುಣವ |
ತೋರೋ ಸುರ ಭೂಜ
ಸೇರಿದೆ ನಿನ್ನ ರವಿತೇಜ|| || ಪಲ್ಲವಿ ||

ರಜತ ಪೀಠದಲಿ | ವಿಜಯ ಸಖನ ಪದ |
ಭಜನೆ ಮಾಳ್ಪ ಋಜು ರಾಜ|| 1

ವೇದ ವ್ಯಾಸರ | ಪಾದವ ಪೂಜಿಪ |
ಮೋದತೀರ್ಥ | ಗುರುರಾಜ || 2

ಹತ್ತೇಳಿಪ್ಪತ್ತು | ಒಪ್ಪುವ ಗ್ರಂಥವ |
ಭಕ್ತರಿಗಿತ್ತ | ಸು ವಿಪ್ರಜ || 3

ಸೋಽಹಂ ಎನ್ನುವ | ವಾದವಳಿದು, ದಾ
ಸೋಽಹಂ ಎಂದ | ಮುನಿರಾಜ || 4

ನಾಗೇಶ ಶಯನನ | ಬಾಗಿ ಭಜಿಸುವಂಥ |
ಭಾಗವತರ ಭವ | ಭೇಷಜ || 5

"ಶ್ರೀ ಮಧ್ವಾಚಾರ್ಯರ ಸ್ತೋತ್ರ, ಸುಗಂಧಿ."

ರಾಗ : ಪೀಲು   ತಾಳ : ಆದಿತಾಳ

ರಾಯ ಬಾರೊ | ಮಧ್ವರಾಯ ಬಾರೊ |
ಮಾಯ ವಾದವ | ಖಂಡಿಸಿದ | ಮಹರಾಯ ಬಾರೊ || || ಪ ||

ರಾಜ ಬಾರೊ ಮಧ್ವರಾಜ | ಬಾರೊ
ಮೂಜಗಕೆಲ್ಲ ಗುರುವಾಗಿಹ ಘನತೇಜ | ಬಾರೊ || 1

ಶಿಷ್ಟಬಾರೊ ಜೀವೋತ್ಕೃಷ್ಟ | ಬಾರೊ |
ದುಷ್ಟ ಮತಗಳ ಮೆಟ್ಟಿನಿಂದಿಹ ಸುಧಿಟ್ಟ | ಬಾರೊ || 2

ಗುರುವೆಬಾರೊ ಕಲ್ಪತರುವೆ | ಬಾರೊ |
ಹರಿಯೇ ಸರ್ವೋತ್ತಮನೆಂದರುಹಿದ | ಧೊರೆಯೆ ಬಾರೊ || 3

ತಂದೆಬಾರೊ | ವಾಯುಕಂದ | ಬಾರೊ ಆ
ನಂದ ಶಾಸ್ತ್ರವ ರಚಿಸಿದ | ತಂದೆ | ಬಾರೊ || 4

ಶಕ್ತಬಾರೊ ವಿಷ್ಣುಭಕ್ತ | ಬಾರೊ |
ಭಕ್ತರಿಗೆಲ್ಲ ಮುಕ್ತಿಕೊಡಿಸುವ, ವಿರಕ್ತ | ಬಾರೊ || 5

ಸ್ವಾಮಿಬಾರೊ ಸುಜನ | ಪ್ರೇಮಿ ಬಾರೊ |
ರಾಮ, ಕೃಷ್ಣ, ಶ್ರೀ | ವ್ಯಾಸರ ಕಾಮಿ | ಬಾರೊ || 6

ಆರ್ಯಬಾರೊ ಸರ್ವಜ್ಞಾರ್ಯ | ಬಾರೊ |
ತುರ್ಯಾಶ್ರಮದಲಿ ಮೆರೆವ | ಜ್ಞಾನಸೂರ್ಯ | ಬಾರೊ || 7

ದಕ್ಷಬಾರೊ ಸುಜನಾಧ್ಯಕ್ಷ | ಬಾರೊ |
ಲಕ್ಷ್ಮೀದೇವಿಯ ನಿಜ ಕುಮಾರ ಸುಭಿಕ್ಷು | ಬಾರೊ || 8

ಸುಗುಣಿ ಬಾರೊ ಚಿಂತಾಮಣಿಯೆ | ಬಾರೊ |
"ಫೃಣಿ" ಶ್ರೀಹರಿಯ | ಚರಣ ಭಕ್ತಾಗ್ರಣಿಯೆ | ಬಾರೊ || 9

ಕಡಲತೀರದಿ ಮೆರೆವ ಉಡುಪಿ | ಕ್ಷೇತ್ರದಿ |
ಸಡಗರದಿಂದ ಕೃಷ್ಣನ ಪೂಜಿಪ ಒಡೆಯ | ಬಾರೊ || 10

ಚಂಡಬಾ | ರೊ ಅರಿಮದ | ಖಂಡ | ಬಾ | ರೊ
ಪಂಡಿತ ವರ್ಯ, ಕವಿಕುಲ ತಿಲಕ ಪ್ರಚಂಡ ಬಾರೊ || 11

ಕರ್ತಬಾರೊ, ಶ್ವಾಸಕರ್ತ | ಬಾರೊ |
ಹತ್ತು ಇಪ್ಪತ್ತೇಳು ಗ್ರಂಥದ ಕರ್ತ | ಬಾರೊ || 12

ಧೀರ ಬಾರೊ ಬಹು ಉದಾರ | ಬಾರೊ |
ವೀರ ನಾಗೇಶ ಶಯನನ ತೋರು | ಬಾರೊ || 13

" ಶ್ರೀ ಮುಖ್ಯ ಪ್ರಾಣ ದೇವರ ಸ್ತೋತ್ರ ಸರೋಜ "

ರಾಗ : ಶಹಾನ ತಾಳ : ಖಂಡ ಛಾಪುತಾಳ

ಮಾತರಿಶ್ವನೆ ಎನ್ನ | ಪಾತಕವ ಪರಿಹರಿಸಿ |
ಪ್ರೀತಿಯಿಂದಲಿ ಪಾಲಿಸೊ || ||ಪ||

ಮಾತುಳಾಂತಕನ ಪ್ರಿಯ | ಸೋತೆ ಭವಸಾಗರದಿ |
ಆತು ಕೊಂಡೆನ್ನ ಪೊರೆಯೊ || ಗುರುವೆ || || ಅ. ಪ. ||

ನಾನಾ ಸ್ಥಳಗಳಲ್ಲಿ | ನಾನಾ ಯೋನಿಗಳಲ್ಲಿ |
ಹೀನ ತನದಲಿ ತಿರುಗಿದೆ ||
ಸ್ನಾನ, ಮೌನ, ಸುತಪಗ | ಳೊಂದನಾ ಚರಿಸದಲೆ|
ಶ್ವಾನ ನಂದದಿ ಚರಿಸಿದೆ ||

ಜ್ಞಾನವಿಲ್ಲದೆ ಕೆಟ್ಟೆ | ಹೀನ ಜನ ಸಂಗವನು |
ಸಾನುರಾಗದಿ ಪೊಂದಿದೆ ||
ದೀನ ಜನರುದ್ಧಾರ | ಪಾವಮಾನಿಯೆ ಜ್ಞಾನ
ದಾನಿ ನೀನೆಂದು ಬಂದೆ || ತಂದೆ || 1

ಪ್ರಾಣ ಪತಿ ನೀ ದಶ | ಪ್ರಾಣಗಳ ನಿಯಮಿಸುತ |
ಪ್ರಾಣಿಗಳ ದೇಹದಿರುವೆ ||
ಪ್ರಾಣನಾಮಕ ವೈಶ್ವ | ನರನೆಂಬ ಶ್ರೀಹರಿಯು |
ಪ್ರಾಣ ಪ್ರಿಯ ದೂತ ನಿರುವೆ ||
ಪ್ರಾಣಿಗಳು ತಿಂದನ್ನ | ದಾನ ವಾಂತಕಗಿತ್ತು |
ಪ್ರಾಣಧಾರಕ ನೆನಿಸುವೆ ||
ಕಾಣೆ ನಿನ್ಹೊರತು ಅನಿ | ಮಿತ್ತಭಂಧು ಗಳನ್ನು |
ಪ್ರಾಣೇಶ ಗುರುವೆ || ಸಲಹೋ || ಉಳುಹೋ || 2

ಘೋರ ಅಪಮೃತ್ಯಗಳು | ಮೀರಿ ಬರುತಿರೆ ಕಂಡ
ಪಾರ ಭಯದಿಂ ನಡುಗಿದೆ ||
ಕ್ರೂರ ಜನಗಳ ಹಿಂಸೆ | ತಾಳಲಾರದೆ ನೊಂದು |
ಧೀರ ನಿನ್ನನು ಕೂಗಿದೆ ||
ಮೇರು ಪರ್ವತದಷ್ಟು | ಭಾರ ಪಾಪವ ನಿನಗೆ |
ಬಾರಿ ಬಾರಿಗೆ ಅರುಹಿದೆ ||
ಭಾರತಿ ಪತಿ ನೀನೆ | ಭಯವ ಪರಿಹರಿಸೆಂದು |
ಸಾರಿ ಬಿನ್ನೈಸುತಿರುವೆ || ಗುರುವೆ || 3

ಸಾಗರವ ಗೋಷ್ಪದದ | ನೀರಂತೆ ಲಂಘಿಸಿದೆ |
ಯೋಗಿವರ ವೀರ ಹನುಮ ||
ನಾಗವೇಣಿಗೆ ದಿವ್ಯ | ರಾಮಮುದ್ರಿಕೆ ಯಿತ್ತೆ |
ರಾಘವೇಂದ್ರಗೆ ಪ್ರಿಯತಮ ||
ಭೋಗಿ ರಾವಣ | ಕಂದ | ಅಕ್ಷಕುವರನ ಕೊಂದ |
ತ್ಯಾಗ ಮೂರ್ತಿಯೆ ಗುಣತಮ ||
ಬಾಗುವೆನು ನಿಮ್ಮಡಿಗೆ | ಯೋಗಿ ಕುಲವರ್ಯ ಗುರು |
ಯೋಗ ಜ್ಞಾನವ ಕರುಣಿಸೋ || ಉಳಿಸೋ || 4

ದ್ವಾಪರದ ಯುಗದಲ್ಲಿ | ಶ್ರೀಪತಿಯ ಸೇವಿಸಲು |
ಭೂಪ ಪಾಂಡುವಿನಲುದಿಸಿ ||
ತಾಪ ಪರಿಹರಿಪ ಸೌ | ಗಂಧಿ ಪುಷ್ಪವತಂದು |
ದ್ರೌಪದಿಯ ಇಷ್ಟ ಸಲಿಸಿ ||
ಗೋಪಿ ನಂದನನೆ ಜಗ | ದೇಕ ಪತಿ ಯಂತೆಂದು |
ಸ್ಥಾಪಿಸುವ ಯಜ್ಞಗೈಸಿ ||
ಪಾಪಿ ಕೌರವ ಜರಾ| ಸಂಧಾದಿಗಳ ಸವರಿ |
ಆ ಪುಣ್ಯ ಹರಿಗರ್ಪಿಸಿ|| ಒಲಿಸಿ || 5

ತ್ರಿಜಗವಂದಿತನೆ ನೀ | ರಜತ ಪುರದಲ್ಲಿ ಜನಿಸಿ |
ನಿಜವಾದ ಶಾಸ್ತ್ರ ರಚಿಸಿ ||
ಕುಜನ ನಿರ್ಮಿತವಾದ | ದುಶ್ಯಾಸ್ತ್ರಗಳ ಜಯಸಿ (ಜರಿದು)
ಸು ಜನರನು ಹರುಷಗೊಳಿಸಿ ||
ಗಜವರದ ಅಜ ಜನಕ | ನಿಜದಾತ ಜಗಕೆಂದು |
ವಿಜಯ ಡಂಗುರ ಹೊಡೆಸಿದೆ ||
ಅಜನ ಪಟ್ಟಕೆ ಬರುವ | ಋಜುಗಣಾಧಿಪ ನಿನ್ನ |
ಭಜಿಸುವರ ಸಲಹುತಿರುವೆ || ಪೊರೆವೆ || 6

ಮೂರುಯುಗಗಳಲಿ ನೀ| ಮೂರು ಅಶ್ರಮ ವಹಿಸಿ |
ಕ್ರೂರ ದೈತ್ಯರ ಸವರಿದೆ ||
ವೂರ ಜನಕನ ಮಹಿಮೆ | ಸಾರಿ ಪೇಳುತ ಜಗಕೆ |
ವೀರ ವೈಷ್ಣವ ನೆನಿಸಿದೆ ||
ಧೀರ ಮಾರುತಿ, ಭೀಮ | ಮಧ್ವರೇ ಗುರುವೆಂದು |
ಕೀರುತಿಯ ಜಗದಿ ಪಡೆದೆ ||
ಶೂರ ನಾಗೇಶ ಶಯು | ನಸ ಪಾದ ಕಮಲಗಳ |
ಆರಾಧಿಸುತ್ತಲಿರುವೆ || ಗುರುವೆ || 7

" ಶ್ರೀ ಬ್ರಹ್ಮದೇವರ ಮಹಿಮ ಮನೋರಂಜನಿ "

ರಾಗ : ಜುಂಜೂಟಿ   ತಾಳ : ಆದಿತಾಳ

ಅಜರಾಯ ನಿಮ್ಮ ಪಾದವ | ಭಜಿಸುವೆ ಕೊಡು ಮುದವ || ||ಪಲ್ಲವಿ||
ಋಜು ಗಣಾಧಿಪನೆ | ರಜ ತಮಕಳೆಯುತ |

ಸುಜನರ ಸಂಗವ | ನೀಡು ಉದಾರಿ || || ಅ ಪ. ||

ಪದ್ಮ ಕಲ್ಪದ ಮೊದಲು | ಶುದ್ಧ ಜಲಧಿಯೊಳು |
ಪದ್ಮನಾಭನ ನಾಭಿಯೊಳು ||
ಉದ್ಭವಿಸುತ ಅ | ಲ್ಲಿದ್ದ ತಮ ಕಂಡು |
ತಿದ್ದಿ ತಪಗೈದು | ಸಿದ್ಧಿಯ ಪಡೆದೆ || 1

ಹರಿ ಯಾಜ್ಞೆಯನ್ನುಶಿರದಲಿ | ಧರಿಸುತ ಭಕ್ತಿಯಲಿ |
ಸ್ಮರಿಸಿದೆ ಹರಿಯಾ | ಮನದಲಿ ||
ಸೃಜಿಸುತ ಸ್ವರ್ಣದ | ಅಂಡಾಕೃತಿಯ | ವಿ
ಭಜಿಸಿದೆ ಹದಿನಾ | ಲಕು ಲೋಕವನು || 2

ನಾಲ್ಕು ಮುಖಗಳ ಧರಿಸುತ | ಹರಿಯ ಪೊಗಳುತ್ತ |
ನಾಲ್ಕು ವೇದಗಳ | ನುಡಿಯುತ |
ಏಕ ಮೇವನ | ಅನೇಕ ರೂಪಗಳ | ವಿ
ವೇಕದಿ ನೋಡುವೆ | ಕೋಕನದ ಜನೆ | 3

ಮಾನ್ಯ ಮಹ ತತ್ವ | ಕಾರಣ | ಶುದ್ಧ ಸತ್ವಗುಣ |
ಹನ್ನೆರಡೆರ ಡ್ಹತ್ತು | ಲಕ್ಷಣ ||
ಮಾನಿ ಬ್ರಹ್ಮಾಣಿಯ | ಪ್ರಾಣದರಸ | ಭಕ್ತ
ಶ್ರೇಣಿಗೆ ಪೋಣಿಸಿ | ಕಾಣಿಸು ಗತಿಯ || 4

ವಾಣಿಯರಸ ವಿರಿಂಚಿ | ಕಾಣೆನು ಮನಶ್ಯಾಂತಿ |
ಜಾಣನೆ ಕೇಳೊ | ವಿನಂತಿ ||
ಕ್ಷೋಣಿಯೊಳಗೆ ಶ್ರೀ | ಪ್ರಾಣನ ಮತದ ಸು
ಜ್ಞಾನವ ಕೊಟ್ಟ | ಜ್ಞಾನವ ಹರಿಸೊ|| 5

ಹರಿ ಭಕ್ತರಿಗೆ ಸತತ | ಧೀರ್ಘಾಯು ಕೊಡುತ |
ಪರಮೇಷ್ಠಿ ಕಾಯೊ| ವಿಧಾತ ||
ನೆರೆ ನಂಬಿದೆ ನಿಮ್ಮ | ಚರಣ ಕಮಲಗಳ |
ಮರೆಯದೆ ಪಾಲಿಸೊ | ಸುರರಿಗೆ ಗುರುವೆ || 6

ಶರಣು ಶರಣು ಸ್ವಯಂಭು | ದುರಿತಾ ಗ್ನಿಗೆ ಅಂಬು |
ಕರೆದು ಕಾಯೊ ನೀ ಸುರವಿಭು ||
ಗರುಡ, ಅಹಿಪ, ಹರ | ಸುರಪತಿ ಮುಖ್ಯರ |
ಪರಮ ಕರುಣದಲಿ | ಸಲಹುವ ದೊರೆಯೆ || 7

ಕಲ್ಪದರ್ಧವು ಮುಗಿಯಿತು | ಪ್ರಜ್ಞೆಯು ಬರದಾಯ್ತು |
ಅಲ್ಪ ಬುದ್ಧಿಯು | ಎನದಾಯ್ತು ||
ಆಲ್ಪರಿಯುತ ನಿನ್ನ | ಗಾನಮಿಸುವೆ ಅಹಿ
ತಲ್ಪನ ಭಕ್ತಿಯು | ಕಲ್ಪಿಸು ಮನದಿ || 8

ಖಗವಾಹನನ ಪ್ರಿಯಸುತ | ನುತಿಸುವೆ ನನವರತ |
ನಾಗ ಭೂಷಣನ ನಿಜಪಿತ ||
ಪೋಗುತಿರುವೆ ಭವಸಾ | ಗರ ತೊರೆಯಲಿ |
ನಾಗೇಶ ಶಯನನ | ಆಗರಕೊಯ್ಯೋ || 9

" ಶ್ರೀ ರಮಾ ಆವಾಹನ ಅಂಬೋರುಹ "

ರಾಗ : ಮಧ್ಯಮಾವತಿ   ತಾಳ : ಛಾಪು ತಾಳ

ಬಾರಮ್ಮ ಭವ ತಾರಿಣಿ | ಭಾವ ಜನ ಜನನಿ || ||ಪಲ್ಲವಿ||

ಬಾರೆ ಶ್ರೀಹರಿ ರಾಣಿ | ಪನ್ನಗವೇಣಿ, ಕೋಕಿಲವಾಣಿ, ಮೋಹಿನಿ |
ಬಾರೆ, ವಿಧಿ, ಭವ, ಶಕ್ರನುತೆ | ತ್ರಿಗುಣಾಭಿಮಾನಿ, ಕಲ್ಯಾಣಿ, ಅಂಭ್ರಣಿ||
||ಅ. ಪ.||

ಮಾಧವ ನರ್ಧಾಂಗಿ | ಕಾರುಣ್ಯ ಪಾಂಗಿ |
ವೇದವತಿಯೆ ಸ್ವರ್ಣಾಂಗಿ | ವರ ಮೋಹನಾಂಗಿ ||
ಶ್ರೀಧರನ ಮಹಿ | ಮೆಗಳ ಸಂತತ |
ವೇದಗಳ ಸು | ಸ್ವರದಿ ಪಾಡುತ ||
ಮೋದ ಪಡುತಿಹ | ತಾಯೆ ಎನ್ನನು |
ಮೋದತೀರ್ಥರ | ಮತಕೆ ಸಲಿಸಲು || 1

ಪದ್ಮ ಸದನೆ ಹರಿಪ್ರಿಯೆ ಪ | ದ್ಮಜನ ತಾಯೆ |
ಪದ್ಮವದನೆ ಶ್ರೀಮಾಯೆ ಮಂ|ಗಳವ ನೀಯೆ ||
ಪದ್ಮಹಸ್ತೆಯೆ, ಪದ್ಮಲೋಚನೆ |
ಪದ್ಮಮಾಲಿನಿ, ಪದ್ಮಗಂಧಿನಿ ||
ಪದ್ಮನಾಭನ, ಪದ್ಮಪದ ಹೃದ್ |
ಪದ್ಮ ಮಧ್ಯದಿ | ನಿಲಿಸಿ | ತೋರಲು || 2

ಸಾಗರ ವರಜಾತೆ | ಅನಿಮಿಷರ ಮಾತೆ |
ನಾಗೇಶ ಶಯನನ ಹಿತೆ | ಅಭಯ ಪ್ರದಾತೆ ||
ರಾಗದ್ವೇಷಗಳನ್ನು ಓಡಿಸಿ |
ಯೋಗಿ ಜನರ ಸು | ಸಂಗ ಕೂಡಿಸಿ |
ಶ್ರೀಗುರುಗಳನು | ಗ್ರಹವ ಜೋಡಿಸಿ |
ಬೇಗೆ ಹರಿ ಚರ | ಣಗಳ ತೋರಲು || 3

" ಶ್ರೀಲಕ್ಷ್ಮೀಪೂಜ ಪುನ್ನಾಗ "

ರಾಗ : ಮಧ್ಯಮಾವತಿ ತಾಳ : ಛಾಪುತಾಳ

ಹರಿದ್ರಾ ಕುಂಕುಮ ಪ್ರಿಯೆ | ಹರಿನಿಲಯೆ || ||ಪಲ್ಲವಿ||

ಹರಿದ್ರಾ ಕುಂಕುಮ ಪ್ರಿಯೆ | ಹರಿ ವಕ್ಷಸ್ಥಳನಿಲಯೆ ||
ಹರಿಣಾಕ್ಷಿ ಶ್ರೀ ತಾಯೆ | ಭೂದುರ್ಗೆ ಮಾಯೆ || ||ಅ.ಪ.||

ಕ್ಷೀರ ಸಾಗರ ಮಧ್ಯದಿ | ಮಥನವ ಮಾಡೆ |
ನೀರೆ ಲಕ್ಷುಮಿ ಜನಿಸಿದಿ | ಹಾರವ ಪಿಡಿದಿ ||
ತೋರಿ ನ್ಯೂನತೆಗಳ | ಸುರಮುನಿ ನಿಕರಕೆ |
ಸಾರಿ ಹರಿಗೆ ವರ | ಮಾಲೆ ಅರ್ಪಿಸಿದೆ || 1

ಆಸನ, ಪಾದ್ಯಗಳು | ಆಚಮನ, ಅರ್ಘ್ಯವು |
ಮೊಸಲು ಮಧುಪರ್ಕವು ಗೋ ಕ್ಷೀರವು ||
ಭಾಸು ರಾಂಗಿಗೆ ದಧಿ | ಮಧು, ಘೃತ, ಫಲಗಳು|
ಈ ಸಮಯದಿ ಪಂ | ಚಾಮೃತದಭಿಷೇಕ || 2

ನವರತ್ನ ಮಂಟಪದಿ | ಹರಿಯಂಕದಲಿ |
ವರರತ್ನ ದಾಸ ನದಿ | ಕುಳ್ಳಿರಿಸಿ ನಿನ್ನ ||
ಸುರಗಂಗೆ, ವರತುಂಗೆ | ಸರಸ್ವತಿ, ಯಮುನೆಯ
ವರ ಜಲದಿಂದಲಿ | ಅಭಿಷೇಕ ಗೈವೆ || 3

ಕನಕ, ವಸನ, ಕಂಚುಕ | ಅರಿಶಿನ, ಕುಂಕುಮ |
ತಿಲಕ, ಮುತ್ತಿನ ಸೂಸುಕ | ಯಜ್ಞೋ ಪವೀತ ||
ಕನಕಾಂಗಿ ಪರಿಮಳ | ಶ್ರೀಗಂಧ, ಕಾಡಿಗೆ |
ಮನಕೊಪ್ಪುವ ಮಲ್ಲಿಗೆ | ಮಾಲೆ ಇಡುವೆ || 4

ಕರವೀರ, ಚಂಪಕವು | ಕಲ್ಹಾರ, ಕೇದಿಗೆ |
ಸುರ ಪಾರಿಜಾತಗಳು | ಅರವಿಂದ ಸುಮವು |
ಸುರಗಿ ಸೇವಂತಿಗೆ | ಮರುಗು, ಮಲ್ಲಿಗೆ, ಜಾಜಿ |
ತುರುಬಿಗೆ ಮುಡಿಸುವೆ | ಹರುಷವ ನೀಡೆ|| 5

ಪಿಲ್ಲೆ, ಕಾಲುಂಗುರವು | ಘಲ್ಲು ಘಲ್ಲೆಂಬ |
ಲುಲ್ಲುರುಳಿ, ಪೈಘಣವು | ಗೆಜ್ಜೆಯ ಪೆಂಡೆ ||
ಸಲ್ಲಲಿ ತಾಂಗಿಗೆ | ಎಲ್ಲ ಆಭರಣವು |
ನಲ್ಲೆ ರಮೆಯೆ ಮಾಂ | ಗಲ್ಯ ಕಟ್ಟುವೆನೆ || 6

ಕಡಗ, ಕಂಕಣ, ಕರಿಬಳೆ | ಬೆರಳುಂಗುರ
ನಡುವೆಗೆ ವಡ್ಯಾಣವು | ಸರಪಳಿ ಗೆಜ್ಜೆ ||

ಕಡು ಚೆಲ್ವೆ ಕಮಲೆಗೆ | ಕನಕ ಕುಂಡಲಗಳು |
ಮಡದಿ ಮಹ ಲಕ್ಷ್ಮಿಗೆ | ಬೆಡಗಿನ ಮುಖುರ || 7

ಮುಂಗುರುಳು ಸುಳಿಕೂದಲು | ರಂಗನ್ನ ಸತಿಗೆ |
ಶೃಂಗಾರ ವಜ್ರ ಹರಳು | ಸೀಮಂತ ಬೊಟ್ಟು (ಮುತ್ತು)
ಬಂಗಾರ, ಮಾಣಿಕ್ಯ, ಹೆರಳು | ರಾಗಟಿ ಗೊಂಡೆ |
ಶೃಂಗಾರ ಮಾಡುವೆ | ಮಂಗಳೆ ತಾಯೆ || 8

ಅಗರು, ಚಂದನ, ಧೂಪ | ಆನಂದೆಗೆ |
ಮಿಗಿಲಾದ ನೈವೇದ್ಯ | ಫಲ ರಸಗಳು ||
ಚಿಗುರೆಲೆ, ತಾಂಬೂಲ | ನಗು ಮುಖದರಸಿಗೆ |
ಸೊಬಗಿನ ನೀರಾಜಿನ | ಮಂಗಳಾರುತಿ || 9

ಛತ್ರ, ಚಾಮರ, ವ್ಯಜನ | ಪರಿಯಂಕವು |
ನೃತ್ಯ, ಗೀತ, ಗಾಯನ | ನಿತ್ಯ ಶೋಭಾನ ||
ಸತ್ಯಭಾಮೆ, ಸುಶೀಲೆ | ಇಂದಿರ ದೇವಿ |
ಅರ್ಥಿಯಿಂದಲಿ ನೀ | ದರ್ಪಣ ನೋಡೆ || 10

ಪ್ರದಕ್ಷಿಣೆ, ನಮಸ್ಕಾರ | ಒಲುಮೆಯಲಿ ಮಾಡುವೆ |
ಸುದಕ್ಷಿಣೆಗೆ ಮನಸಾರ | ಭಕ್ತಿಯ ಸಾರ ||
ಅಧ್ಯಕ್ಷನಾಮ ಅ | ಧೋಕ್ಷಜ ಹರಿಯನ್ನು |
ಇದೇ ಕ್ಷಣ ತೋರಿ ಸಂ | ರಕ್ಷಿಸು ತಾಯೆ || 11

ಪತಿ, ಸುತ, ಹಿತ, ಮಿತ್ರರು | ನಿನ್ನವರು ಎಂದು (ಎಂಬ) |
ಮತಿಕೊಟ್ಟು ಸಲಹೆ ಬಂದು | ಕಾರುಣ್ಯ ಸಿಂಧು ||
ಶೃತಿ, ಸ್ಮೃತಿ, ತತಿಗಳ | ಸ್ತುತಿಸುತ್ತಲಿರೆ ವೇದ
ವತಿ ನೀನೇ ಬಂದು ಕೈ | ಪಿಡಿದು ಸಂತೈಸೆ || 12

ಶ್ರಾವಣ ಮಾಸದಲ್ಲಿ | ಸಿತ ಪಕ್ಷದಲ್ಲಿ |
ಪೂರ್ವೋಕ್ತ ಭೃಗುವಾರದಿ | ಸಂಧ್ಯಾ ಸಮಯದಿ ||
ಚಾರುಮತಿಗೆ ಒಲಿದು | ಭೂರಿ ದರ್ಶನ ವಿತ್ತ |
ಸಾರಸಾಕ್ಷಿಯೆ ಪಾರಿ | ಜಾತ ವರವೀಯೆ || 13

ಬೊಮ್ಮಾದಿ ದೇವರ್ಕಳು ನಿ | ನ್ನನ್ನು ಪಾಡಿ |
ಸುಮ್ಮನದಲಿ ಇಹರು | ಸ್ತುತಿ ಸುತ್ತಲಿಹರು ||
ಅಮ್ಮ, ಬಾರಮ್ಮ, ತೋರಮ್ಮ | ಹ | ರಿಯ ಪಾದ |
ರಮ್ಮೆ ದಾನವ ಹಾರಿ | ರಾಮನರ್ಧಾಂಗಿ || 14

ಅಂಬರ ಮಾರ್ಗದೊಳು ಸುರ | ನಾರಿಯರು
ಸಂಭ್ರಮ ಕೇಳಿಯೊಳು ಪೂ | ಮಳೆಯ ಗರೆಯೆ ||
ತುಂಬುರು, ನಾರದ | ಗಾಯನ ಪಾಡಲು |
ರಂಭೆ, ಊರ್ವಶಿಯರು | ನರ್ತಿಸುತಿಹರು || 15

ಮಂಗಳ ವಾದ್ಯಗಳು ಭೋ | ರ್ಗರೆಯಲು |
ರಂಗನ್ನ ಮಹಿಮೆಗಳ ಪಾ | ಡುತ್ತಿರಲು ||
ಶೃಂಗಾರ ಮುಖಿ ನರ | ಸಿಂಗ ನೊಡನೆ ಬಂದು |
ಕಂಗಳು ತೆರದು ಕ | ಟಾಕ್ಷದಿ ನೋಡೆ || 16

ಪಾಲ ಸಾಗರ ತನಯೆ ಗೋ | ಪಾಲ ಜಾಯೆ |
ಲೀಲಾವತಿ, ಸುಪ್ರಿಯೆ ಮಾಂ | ಗಲ್ಯವೀಯೆ ||
ಕಾಲ ಕಾಲಕೆ ಹರಿ | ನಾಮವು ಎನ್ನಯ |
ನಾಲಿಗೆಯೊಳು ನಿಲು | ವಂತೆ ಮಾಡಮ್ಮ || 17

ಶ್ರೀ ಮಾಯ, ಜಯೆ, ಶಾಂತಿ ಕೃತಿ, | ವೈಜಯಂತಿ |
ನಾಮಳೆ ಶುಭವಂತಿ ಶತ | ಸೂರ್ಯಕಾಂತಿ ||
ಸಾಮಗಾಯನ ಪ್ರಿಯೆ | ಸುರವಂದ್ಯೆ, ಸುಲಭೆಯೆ |
ಕಾಮ, ಕ್ರೋಧ, ಬಿಡಿಸಿ | ಪ್ರೇಮದಿ ನೋಡೆ || 18

ವಿಮಲ, ಉತ್ಕರ್ಷಿಣಿಯೆ ಜ್ಞಾ | ನ, ಕ್ರಿಯೇಯೇ |
ಅಮಲೆ, ಯೋಗ, ಪ್ರಹ್ವಿಯೆ ಸ | ತ್ಯ ಪ್ರಭೆಯೆ ||
ಕಮಲಾಕ್ಷಿ, ಈಶಾನೆ | ಸುಮನೆ, ಅನುಗ್ರಹ |
ಸಮಾ ಸಮಳೆನಿಸುವ | ಭಾಮೆ ರುಕ್ಮಿಣಿಯೆ|| 19

ಜಾನಕಿ, ಜಯವಂತಿ ಜಯ, | ಹರಿಣಿ, ಭಾರ್ಗವಿ |
ಜಾಣೆರಮೆ, ಜಯಂತಿ ಕಾ | ರುಣ್ಯವಂತಿ ||

ಕಾಣೆ ನಿನ್ಹೊರತು ಕೈ | ಪಿಡಿದು ಸಲಹುವರ |
ಏ ಣಾಕ್ಷಿ ಮನದ ನು | ಮಾನವ ಕಳಯೆ || 20

ಅಕ್ಷರ ನಾಮುಕಳೆ ಪರ | ಶಬ್ಧ ವಾಚ್ಯೆ |
ಇಕ್ಷುಚಾಪನ ಪೆತ್ತಳೆ ಪುರು | ಷ ನಾಮು ಕಳೆ ||
ಸೃಷ್ಟಿಗೊಡೆಯ ಹರಿ | ವಕ್ಷ ನಿವಾಸಿನಿ |
ಮೋಕ್ಷದಾತ ಹರಿಯ | ಪಟ್ಟದ ರಾಣಿ || 21

ತ್ರಿಗುಣಗಳಭಿಮಾನಿ ಪ | ನ್ನಗವೇಣಿ |
ಸುಗುಣಿ, ಕೋಕಿಲವಾಣಿ ವೇ | ದಾಭಿ ಮಾನಿ ||
ಖಗವಾಹನನ ಪ್ರಿಯೆ | ಅಗಣಿತ ಮಹಿಮಳೆ |
ಮಗಳೆಂದು ಎನ್ನಲಿ | ಮಮತೆಯ ತೋರೆ || 22

ಶ್ರೀದೇವಿ, ಶ್ರೀಲಕ್ಷ್ಮಿ, ಶ್ರೀ | ಕಮಲೆ, ಪದ್ಮ |
ಪದ್ಮಿನಿ, ಕಮಲಾಲಯೆ, ಕರು | ಣಾ ನಿಲಯೆ ||
ಮಾಧ ವನರಸಿ ರಮಾ, ವೃಷಾಕಪಿ, ಧನ್ಯ |
ಶ್ರೀದೆ, ಬುದ್ಧಿ, ಯಜ್ಞ | ಇಂದಿರೆ ತಾಯೆ || 23

ಹಿರಣ್ಯೆ ದೇವಿಯೆ, ಹರಿಣೀ ಸ | ತ್ಯಾ, ನಿತ್ಯಾ |
ಕರುಣಾಸಾಗರೆ, ಆನಂದ ಶ್ರೀ | ಅಸ್ತ್ರಜ್ಞ ||
ಸಿರಿ ಸುಖಾ, ಸುಗಂಧಾ | ಸುಂದರಿ, ವಿದ್ಯಾ |
ಸಿರಿ ಸುಶೀಲೆ, ತಾಯೆ | ಶ್ರೀ ಸುಲಕ್ಷಣೆಯೆ || 24

ಪದ್ಮಸದನೆ, ಸುಪ್ರಿಯೆ ಪ | ದ್ಮಾಕ್ಷಿ, ಪದ್ಮಿನಿ |
ಪದ್ಮವದನೆ, ಸುರಪ್ರಿಯೆ ಪ | ದ್ಮಜನ ತಾಯೆ ||
ಪದ್ಮ ಹೃದ್‌ನಿಲಯೆ ಶ್ರೀ | ಪದ್ಮ ನಾಭನ ಪಾದ |
ಪದ್ಮವ ತೋರಿಸೆ | ಪದ್ಮ ಸುಗಂಧಿ || 25

ಅಂಭ್ರಣಿ, ಜಗದಂಬ, ಬ್ರ | ಹ್ಮಾಣಿ, ಭಾರತಿ |
ಶಾಂಭವಿ, ವಾರುಣೇರಿಂದ ಸೌ | ಪರ್ಣಿ ಇಂದ ||
ಜಂಭಾರಿಸತಿ, ರತಿ | ಶ್ಯಾಮಲೆ, ಉಷೇರಿಂದ |
ಸಂಭ್ರಮ ದೋಲಗ | ಕೈಕೊಂಬ ದೇವಿ || 26

ಸಾಗರ ಸುತೆ ನಿನಗೆ | ವರ | ಭೋಗಿ ತಲ್ಪದಿ |
ತೂಗು ಮಂಚವು ಹಾಸಿಗೆ | ಸರ | ಪಣಿ ಪಿಡಿದು ||
ತೂಗುತ್ತ ಪಾಡುವೆ | ಯೋಗ ಭೋಗಗಳೀಯೆ |
ನಾಗೇಶ ಶಯನನ | ಭೋಗದ ಸತಿಯೆ 27

" ಶ್ರೀ ದುರ್ಗಾ ಸ್ತೋತ್ರ ಜಪಾಕುಸುಮ "

ರಾಗ : ಅಭೋಗಿ ತಾಳ : ಆದಿತಾಳ

ದುರ್ಗಾದೇವಿ | ದುರಿತ ವಿದಾರಿ |
ಭಾರ್ಗವಿ ಭಯಹಾರಿ | ಶ್ರೀ ||ಪ||

ದುರ್ಗವು ಭವದಿಂ | ನಿರ್ಗಮ ಗೈಸಿ, ಸ
ನ್ಮಾರ್ಗವ ತೋರಿಸೆ | ಸದ್ಗುಣವಂತೆ || ||ಅ. ಪ.||

ನೀಲಮೇಘ ನಿಭ | ಶಾಮ ಶರೀರೆ |
ನೀಲಾಂಬರ ಬಹು | ನೆರಿಗೆ ವೈಯ್ಯಾರೆ ||
ಮೇಲೆ ಪೊಳೆವ ಪೀತಾಂಬರ | ಧಾರೆ |
ಲೋ ಲೈಸುವ, ಮಣಿ | ಮೌಕ್ತಿಕ ಹಾರೆ || 1

ಧಿಟ್ಟ ನೃಸಿಂಹನ | ಪಟ್ಟದರಾಣಿ |
ಅಷ್ಟಬಾಹುಯುತೆ | ಅಂಬುಜ ಪಾಣಿ ||
ಕಷ್ಟವ ಬಿಡಿಸೌ | ಕೋಕಿಲ ವಾಣಿ |
ಇಷ್ಟಾರ್ಥವ ಕೊಡೆ | ಪರಮ ಕಲ್ಯಾಣಿ || 2

ನಂದ ಗೋಪನ | ನಂದಿನಿ ಮಾಯೆ |
ವೃಂದಾರಕರನು | ರಕ್ಷಿಪ ತಾಯೆ ||
ಸುಂದರ, ಹರಿ, ಗೋ | ವಿಂದನ ಜಾಯೆ |
ವಂದಿಪೆ ಸೌಭಾಗ್ಯ | ವಿತ್ತು ನೀ ಕಾಯೆ || 3

ನಿಖಿಲೇಶ್ವರಿ ಶ್ರೀ | ನಿಗಮ ಸಂಚಾರಿ |
ಶಿಖಿವರ ಪಿಂಛ ಲಾಂ | ಛನೆ ಶುಭಕಾರಿ ||
ಮಕರ ಕುಂಡಲ ಧರೆ | ಅಸುರ ಸಂಹಾರಿ |
ಸಕಲ ಅವಿದ್ಯೆ ಹ | ರಿಸು ದಯ ತೋರಿ || 4

ದೈತ್ಯ, ಮರ್ದಿನಿ, ಆ | ದಿತ್ಯ ಸಮ್ಮೋದಿನಿ |
ಅರ್ಥಿಯಿಂ ಭಜಿಸುವೆ | ಅಹಿವರ ವೇಣಿ ||
ನಿತ್ಯದಿ ಶ್ರೀ ಶಾರ್ಗೇಶ | ಶಯನನಲಿ |
ಭಕ್ತಿಯ ಪಾಲಿಸೆ | ಭಗವತಿ ಜನನಿ || 5

" ಶ್ರೀ ಹರಿ ಸಾಮಿಪ್ಯ ಸೇವಂತಿಕ "

ರಾಗ : ಹಿಂದೂಸ್ಥಾನಿಕಾಪಿ ತಾಳ : ಆದಿತಾಳ

ದೂರಕ್ಕೆ ದೂರನು ರಂಗ | ಸಾರ್‍ಯಕ್ಕೆ ಸಾರ್‍ಯನು ಭವಗಜ ಸಿಂಗ || ||ಪ||

ದೂರಕ್ಕೆ ದೂರನು | ಕ್ರೂರ ಮನುಜರಿಗೆ |
ಸಾರ‍್ಯಕ್ಕೆ ಸಾರ‍್ಯನು | ಸಾರ ಸುಜನರಿಗೆ || ||ಅ. ಪ.||

ವಾರಿ ಜಾಕ್ಷಿಯಳ | ಸೀರೆ ಸೆಳೆಯುತಿರೆ |
ಮಾರಜನಕ ಅ | ಕ್ಷಯವೆಂದ ||
ದೂರವಲ್ಲವೆ ಆ | ದ್ವಾರಕ ಪುರಿಯು |
ನಾರಿ ಕೃಷ್ಣೆ ಕೂ | ಗ್ಧಿಗೆ ಅರಿತನೊ || 1

ಕರಿರಾಜ ಕಷ್ಟದಿ | ಹರಿ ಎಂದು ಕೂಗಲು |
ಸಿರಿಗೆ ಪೇಳದಲೆ | ನಡೆತಂದ ||
ಪರಮಾತ್ಮ, ಪರತತ್ವ | ಪರಮಾಪ್ತ, ಪರಿಪೂರ್ಣ |
ಪರನೆಂದು ತಿಳಿವಗೆ | ನೆರೆಯಲ್ಲೆ ಇರುವನು || 2

ತರಳ ಪ್ರಹ್ಲಾದನು | ಭರದಿಂದ ಮೊರೆ ಇಡೆ |
ವರ ಕಂಭದಲ್ಲೇ | ಕಾಣಿಸಿದ ||
ನರಸಿಂಹ ರೂಪನು | ಸ್ಮರಿಸುವ ಸುಜನರ |
ಕರುಣದಿ ಸಲಹಲು | ಕರೆದಲ್ಲೆ ಬರುವನು || 3

ದುಷ್ಟಮತವ ಪೊಂದಿ | ಶಿಷ್ಟರ ಕಾಡುವ |
ದುಷ್ಟ ಜನಗಳಿಗೆ | ಬಹುದೂರ ||
ಮುಟ್ಟಿ ಪೂಜಿಪರ | ಇಷ್ಟವ ಸಲಿಸುವ |
ಸೃಷ್ಟಿಗೊಡೆಯ ನಮ್ಮ | ವಿಠ್ಠಲ ರಾಯನು || 4

ಮಂಗಳ ಮೂರುತಿ | ತುಂಗ ವಿಕ್ರಮ ಹೃದ |
ಯಂಗಳದಲ್ಲೇ | ನೆಲೆಸಿರುವ ||
ರಂಗ, ಉತ್ತುಂಗ ಶು | ಭಾಂಗ ಎಂದೊದರಲು |
ಕಂಗಳ ಕೊನೆಯಲಿ | ಕಂಗೊಳಿಸುತಲಿಹ || 5

ಕುಜನರ ಸಂಗದಿ | ನಿಜ ಧರ್ಮ ತ್ಯಜಿಸಿದ |
ಅಜಾಮಿಳ ತನ್ನಯ | ಅಂತ್ಯದಲಿ ||
ನಿಜ ಭಕ್ತಿಯಿಂದಲಿ | ಅಜವಂದ್ಯ ಪೊರೆ ಎನ್ನೆ |
ಕಜನಾಭ ಸಲಹಿದ | ನಿಜವನ್ನು ಅರಿತುಕೊ || 6

ನಾಗೇಶ ಶಯನನ | ಬಾಗಿ ಭಜಿಸುತಿಹ |
ಭಾಗವತರಿಗೆಲ್ಲ | ಬಲು ಸುಲಭ ||
ನಾಗಾರಿ ವಾಹನ | ಭೋಗೀಂದ್ರ ಶಯನ | ಚೆ
ನ್ನಾಗಿ ಪ್ರಾರ್ಥಿಸಲು | ಬೇಗದಿ ಒದಗುವ || 7

" ಉತ್ಸವ ಸಂಭ್ರಮ, ಸರಸಿಜ "

ರಾಗ : ಕಾನಡ ತಾಳ : ಆದಿತಾಳ

ಬಾರೊ, ಬಾರೊ ಎನ್ನ ಮನಕೆ (ಮನೆಗೆ) | ಬಾರೊ ಶ್ರೀಹರಿ || ||ಪಲ್ಲವಿ||
ತೋರೊ, ತೋರೊ, ತೋರೊ ದಯವ | ಸತತ ನರಹರಿ || ||ಅ ಪ.||

ಗುರು ಕರುಣದಿಂದ ಎನ್ನ | ಹೃದಯ ಕಮಲ |
ಅರಳಿ ಮಧ್ಯ ಕರ್ಣಿಕೆಯಲಿ | ಸಿಂಹ ವಿಷ್ಟರ ||
ಪರಿ ಪರಿ ಮಣಿಗಳಿಂದ | ಪೊಳೆವಾಲಂಕಾರ |
ಹರಿಯೆ, ನೀನು ಬರಲುಬೇಕು | ಕರೆವೆ ಮನಸಾರ || 1

ವೈಕುಂಠ ಅ | ನಂತಾಸನ | ಶ್ವೇತ ದ್ವೀಪದಿ |
ವೈಭೋಗದಿಂದಲಿಹ | ಮುಕ್ತಗಡಣದಿ ||
ವೈಜಯಂತಿ ನಾಮಳಾದ | ಸಿರಿಯು ಕೂಡಿ |
ವೈನತೇಯ ಗಮನನಾಗಿ | ವಾಯು ಸಹಿತದಿ || 2

ಬ್ರಹ್ಮೇಶಾದಿ, ಸುರರೆಲ್ಲ | ಸೇವಿ ಸುತ್ತಿರಲು |
ಬ್ರಹ್ಮಋಷಿ, ದೇವರ್ಷಿ | ಮುನಿಗಳೆಲ್ಲರು ||
ಸುಮ್ಮನದಿಂ, ವೇದಘೋಷವ | ಗೈಯಲು |
ಅಮ್ಮರಮೆಯೊಡ ಗೂಡಿ | ಅಮರ ಮಾರ್ಗದೊಳು || 3

ವಂದಿ, ಮಾಗಧರೆಲ್ಲ | ಕೊಂಡಾಡುತ್ತಿರಲು |
ತುಂಬುರು, ನಾರದರೆಲ್ಲ | ಪಾಡುತಿರಲು ||
ರಂಭೆ, ಊರ್ವಶಿಯರು | ನಾಟ್ಯವಾಡಲು |
ಅಂಬರದಿ, ಪೂಮಳೆಯು | ಸುರಿಯುತಿರಲು || 4

ಚತುರ ದಿಕ್ಕಿನಲ್ಲಿ ನೆರೆದ | ಅತಿ|ರಥವೀರರು |
ರಥ, ಗಜ, ಪಲ್ಲಕ್ಕಿ, ಹಯ | ವಾಹನಗಳು ||
ಹಿತದಿ, ಮಾರುತಿ, ಸಾರಥ್ಯ | ದಲ್ಲಿ ಕುಳಿತಿರಲು |
ರತಿಪತಿ, ಪಿತನೆ ನೀ | ರಥಿಕನಿರಲು || 5

ವಿನಯದಿ, ಲಕ್ಷಣ ಶ್ವೇತ | ಛತ್ರ ಪಿಡಿದಿರೆ |
ಅನುಜರೀರ್ವರು ಚಾ | ಮರವ ಬೀಸೆ ||
ದನುಜ ವರ ವಿಭೀಷಣ | ಸ್ತುತಿ ಸುತಿರಲು |
ವನಜ ಮುಖಿ ಜಾನಕಿಯು | ತೊಡೆಯಲ್ಲಿರಲು || 6

ಹದಿನಾರು, ಸಾಸಿರದ | ಶತವು ಒಂದಿರೆ |
ಸುದತೇರು, ರಥದ ಬಳಿ | ಬಳಸಿ ನಿಂದಿರೆ ||
ಪದು ಮಜೆ, ರುಕ್ಮಿಣಿ, ಭಾಮೆ | ಆರು ಸತಿಯರು |
ಮುದದಿ, ನಾನಾ ವಿಧದಿಂದ | ಸೇವಿಸುತ್ತಿರಲು || 7

ಅಂಧಕ, ವೃಷ್ಣಿಗಳೆಲ್ಲ | ಬಲದಿ ಬರಲು |
ಛಂದದಿ ಯಾದವರು | ಎಡದಲಿರಲು ||
ಸುಂದರಿ ದ್ರೌಪದಿ ದೇವಿ | ಪಾಂಡವರೈವರು |
ಮುಂದೆ ನಿನ್ನ ಪದಕೆ ಪ | ರಾಕು ಎನ್ನಲು || 8

ಸುತ್ತಲು ಪತಾಕೆಗಳು | ಹಾರುತಿರಲು | ನೌ
ಬತ್ತು, ನಗಾರಿಗಳು | ಮೊಳಗುತಿರಲು ||
ಭಕ್ತರ, ಮೇಳ, ತಾಳ | ಸಂಭ್ರಮದೊಳು |
ಚಿತ್ತಸೂರೆಗೊಳ್ಳುವ, ಸು | ರೂಪ ತಳೆದು || 9

ದೇವಕಿ, ವಸುದೇವ ಭೂಪ | ನಂದಗೋಪನು ||
ದೇವಿ, ಯ ಶೋದೆತಾಯಿ | ಕುಂತಿ ದೇವಿಯು ||
ದೇವ ನಿನ್ನ, ವೈಭವವ | ನೋಡುತಿಹರೊ |
ಭಾವಾ ನಂದದಲಿವ್ಮೈ | ಮರೆಯುತಿಹ ರೊ|| 10

ದ್ವಾರಕಪುರಿಯ ರಾಜ | ಬೀದಿಯೊಳು |
ಭಾರಿ ಬಾಣ ಬಿರುಸುಗಳು | ಮೆರೆಯುತ್ತಿರಲು
ನಾರಿಯರು ಮುತ್ತಿನಾರತಿ | ಬೆಳಗುತಿರಲು
ವೀರ ನಾಗೇಶ ಶಯನ | ಎನಗೆ ಒಲಿಯುಲೂ || 11

★ ★ ★

"ಶ್ರೀಹರಿ ಆಗಮನ ಅರವಿಂದ"

ರಾಗ : ಖರಹರಪ್ರಿಯ ತಾಳ : ಆದಿತಾಳ

ಬಂದನು ಬಂದನು | ಭವಹಾರಿ |
ನಿಂದನು ಹೃದಯದಿ | ಅಸುರಾರಿ || ||ಪ||

ಬಂದನು ಶ್ರೀ ಗೋವಿಂದ | ಮುರಾರಿ |
ಇಂದಿರೆ ಸಹಿತ ಮು | ಕುಂದ ಮೈದೋರಿ || ||ಅ. ಪ||

ಹರಿ, ಗುರು, ಕರುಣದಿ | ಹೃತ್ಕಮಲ | ಬಹು
ಅರಳಿತು ತೋರುತ | ಅಷ್ಟದಳ ||
ಕರಣಿಕೆ ಮಧ್ಯದಿ | ಸಿಂಹ ಸು ವಿಷ್ಟರ|
ಮರಕತ ಮಣಿ ಮಾ | ಲೆಯ ಶೃಂಗಾರ || 1

ಅಷ್ಟಭುಜಗಳಿಂದ | ಶೋಭಿಸುವ | ಹರಿ
ಅಷ್ಟ ಆಯು ಧಗಳ | ಪಿಡಿದಿರುವ ||
ಅಷ್ಟ ಭಾವಗಳ | ಪ್ರೇರಿಸುವ | ನ
ಮಿಷ್ಟ ದೈವ ಹರಿ | ಕರುಣಿಸುವ || 2

ಸರ್ವರ ಹೃದಯದಿ | ನೆಲಸಿಹನು | ಹರಿ
ಸರ್ವರ ಬಿಂಬತಾ | ನಾಗಿಹನು
ಗುರ್ವಂತರ್ಗತ | ನಾಗೇಶ ಶಯನ |
ಕರುಣದಲ್ಲೆನ್ನಘ | ಗಳ ಕಳೆವುದಕೆ || 3

" ಶ್ರೀ ಕೃಷ್ಣಾಗಮನ ಕರವೀರ "

ರಾಗ : ನೀಲಾಂಬರಿ ತಾಳ : ಆದಿತಾಳ

ಬಂದ ಕೃಷ್ಣ ಬಂದ ರಂಗ | ಬಂದ ನೋಡೆ ||
ಬಂದು ಎನ್ನ ಹೃದಯದಲಿ | ನಿಂದ ನೋಡೆ || ||ಪ||

ನಂದ ಗೋಪಾಲ ಮನೆಗೆ | ಬಂದ ನೋಡೆ |
ಬಂದು ನಾಗೇಶ ಶಯನ | ನಿಂದ ನೋಡೆ || ||ಅ.ಪ.||

ಕಾಲ ಲಂದಿಗೆ, ರುಳಿ | ಗೆಜ್ಜೆ ಪೆಂಡೆ |
ಮೇಲುಡಿದಾರ, ಗುಂಡು | ಕಿರುಗಂಟೆ ||
ತೋಳ ಬಂಧುರ, ಅಸ | ಲಿಯ ಕಂಡೆ |
ಬಾಲ ದೊಡಿಗೆಯು, ತುಲ | ಸಿಯ ದಂಡೆ || 1

ಕರದ, ಕಂಕಣ, ಬಳೆ | ಉಂಗು ರವು |
ಕೊರಳ ಕೌಸ್ತು ಭವು | ಹು ಲಿಯು ಗುರು ||
ಗುರುಳಿನ ಸುಳಿಯಲಿ | ಅರಳೆಲೆಯು |
ಮೆರೆಯುವ ಪಾಗಾಯ್ | ಸರಪಳಿಯು || 2

ಕರ್ಣಕುಂಡಲವು ಓ | ಲ್ಯಾಡು ತಿರೆ |
ಬಣ್ಣದ ನವಿಲುಗರಿ | ನಲಿಯುತಿರೆ ||
ಸ್ವರ್ಣದುಡಿಗೆಯು ಉಲಿ | ದಾಡುತಿರೆ |
ಕಣ್ಣಿನ ನೋಟ ಬಹು | ಹೊಳೆಯುತಿರೆ || 3

ಒಂದು ಕೈಯಲಿ ನೇಣ್ | ಕಡೆಗೋಲು, ಇ
ನ್ನೊಂದು ಕರದಲಿ ನವ | ನೀತ ದೊಲವು ||
ಇಂದಿರೆ ರಮಣನ ಸು | ಮುಖ ಚೆಲುವು |
ಬಂದು ನೋಡಿ ನುತಿಸಿರೆ | ಸುದತಿಯರು || 4

ಇಷ್ಟು ಶೃಂಗರಿಸಿ ಗೋಪಿ | ಬಿಟ್ಟಳೀತಕೆ |
ದಟ್ಟಡಿ ಇಡುತ ಕೃಷ್ಣ | ಬಂದ ಹೊರಗೆ||
ಕೆಟ್ಟ ದುಷ್ಟರ ಕಣ್ಣು | ಬೀಳದ್ಹಾಗೆ |
ದೃಷ್ಟಿ ತಾಗೀತೆಂದು | ಬಚ್ಚಿಟ್ಟಿ ಒಳಗೆ || 5

" ಶ್ರೀ ಹರಿ ಪಾದ ಮಹಿಮ ಮಂದಾರ "

ರಾಗ : ಶಿವರಂಜನಿ ತಾಳ : ಆದಿತಾಳ

ಎಂಥಾ | ಪಾ | ವನ ಪಾದ | ವೋ ಹ | ರಿಯೆ ನಿನ
ದೆಂಥಾ ಮಂ | ಗಳ ಪದ | ವೊ || ||ಪ||

ಎಂಥಾ ಪ | ವಿತ್ರ ಪದ | ಕಾಂತಿ ಲ | ಕುಮಿ, ಏ
ಕಾಂತದಿ | ತೊಡೆಯ | ಲ್ಲಿಟ್ಟು | ಒ | ತ್ತುತಿಹ || ದೆಂಥಾ|| ||ಅ. ಪ.||

ಅಜನು ತೊ |ಳೆದ ಪಾದ | ವೊ ಸು | ಜನರಿಗೆ |
ನಿಜಗತಿ | ಪ್ರದ ಪಾದ | ವೋ ||
ಕುಜನ ರೆ | ದೆ ಯನ್ನು | ಮೆಟ್ಟಿ ನಿ | ಲ್ಲುವ ಪಾದ |
ಧ್ವಜ, ಪದ್ಮ, | ವಜ್ರಾಂ | ಕುಶ ಚಿಹ್ನೆ | ಉಳ್ಳುದು || ದೆಂಥಾ|| 1

ಅರುಣ ಪ | ಲ್ಲವ ಪಾದ | ವೋ ಗ | ರುಡ ತನ್ನ
ಕರದಲ್ಲಿ | ಟ್ಟಿಹ ಪಾದ | ವೋ ||
ಸುರಗಂಗೆ | ಜನಿಸಿದ | ವರಪುಣ್ಯ | ಪಾದವೊ |
ಗುರು ಮುಖ್ಯ | ಪ್ರಾಣರು | ಶಿರದಲ್ಲಿ | ಧರಿಸಿಹ || ದೆಂಥಾ|| 2

ಬಲಿಯ ತು | ಳಿದ ಪಾದ | ವೊ ಅವ | ನ, ಬಾ
ಗಿಲ ಕಾಯು | ತಿಹ, ಪಾದ | ವೋ ||
ಶಿಲೆಯಾ | ದಹಲ್ಯೆಯ | ಕುಲಕೆ ತ | ಂದ ಪದ |
ನಳಿ ನನಾ | ಭ ನಾಗೇಶ ಶ | ಯನ ನಿನ || ದೇಥಾ || 3

" ಶ್ರೀಹರಿಯರ್ಚನ, ಅಂಬುಜ "

ರಾಗ : ಮಧ್ಯಮಾವತಿ ತಾಳ : ತಿಶ್ರ ಆದಿತಾಳ

ಅರ್ಚಿಸುವೆನು ನಾನು | ಆನಂದಮುಖನ || ||ಪ||

ಸಚ್ಚಿದಾನಂದ ಸ್ವ | ರೂಪ ವಿಗ್ರಹನ || ||ಅ. ಪ.||

ಆಸನ, ಆಚಮನ | ಅರ್ಘ್ಯ, ಮಧುಪರ್ಕ |
ಮೀಸಲು ಪಂಚಾ | ಮೃತದ ಅಭಿಷೇಕ ||
ಭಾನು ರಾಂಗಿ ಗಂಗೆ, | ಯ ಮುನೆಯರುದಕ |
ಶ್ರೀಶಗೆ ಶುದ್ಧೋ | ದಕದ ಅಭಿಷೇಕ || 1

ಪೀತಾಂಬರ ಧರಗೆ | ನೂತನ ವಸ್ತ್ರ |
ಮಾತುಳ ವೈರಿಗೆ | ಯಜ್ಞೋಪವೀತಾ ||
ಸೀತಾನಾಯಕನಿಗೆ | ಶ್ರೀ ಗಂಧ ಲೇಪಾ ||
ವಾತಜ ವರದಗೆ | ವನಸ್ಪತಿ ಧೂಪ || 2

ಕಾಮ ಜನಕನಿಗೆ | ಕಸ್ತೂರಿ ತಿಲಕ |
ಅಮಹಾ ಫಾಲಕ್ಕೆ | ಮುತ್ತಿನ ಪದಕಾ ||
ಪ್ರೇಮದಿಂದಿಡುವೆನು | ರತ್ನ ಕಿರೀಟ |
ಸ್ವಾಮಿಗೆ ಸರಿಗೆ ಕೌ | ಸ್ತುಭದ ಓಲ್ಯಾಟ || 3

ಕೊರಳಿಗೆ ನವರತ್ನ | ಮಣಿಗಳ ಹಾರ |
ಬೆರಳಿಗೆ ಉಂಗುರ | ತೋಳ ಬಂಧುರ |
ಕಿರು ನಡುವಿಗೆ ಕ | ಟ್ಟುವೆ ಉಡಿದಾರ |
ಚರಣಕ್ಕೆ ಕಿರುಗೆಜ್ಜೆ | ಸರ್ವಾಲಂಕಾರ 4

ಸುರಗಿ ಮಲ್ಲಿಗೆ ಚಂ | ಪಕ ತುಳಸಿಯಿಂದ |
ಸರ್ವಾಂಗ ಸುಂದರನ | ಅರ್ಚಿಸಾನಂದ |
ಸರ್ವ ನಾಮಾವಳಿ | ಪಾಡಿ ಮುದದಿಂದ |
ಸರ್ವೇಶ್ವರನಿಗೇ | ಕಾರತಿ ಯಿಂದ || 5

ಸಾಲು ದೀಪವ ಹಚ್ಚಿ | ಸಂತೋಷ ಪಡುವೆ |
ಶಾಲ್ಯಾನ್ನ ಭಕ್ಷಗಳ | ನೈವೇದ್ಯಕಿಡುವೆ |
ಶ್ರೀಲೋಲನಿಗೆ ಮಂಗ | ಳಾರುತಿ ಗೈವೆ
ಮೇಲಾದ ತನುವ ಸ | ಮರ್ಪಣೆ ಗೈವೆ || 6

ಬಲವೊಂದು ಮಾಡುವೆ | ಬಹು ನಮಸ್ಕಾರ |
ಬಲದಲ್ಲಿ ನಿಂತು ಬೀ | ಸುವೆನು ಚಾಮರ |
ಬಲ ವರದಗೆ ನೃತ್ಯ | ಸಂಗೀತ ಸಾರ |
ಲಲಿತ ದರ್ಪಣ ತೋ | ರುವೆ ಮನಸಾರ|| 7

ಮುತ್ತು ರತ್ನದ ಹಂಸ | ತೂಲಿಕತಲ್ಪ |
ಮಿತ್ರ ಲಕ್ಷ್ಮಿಯು ಕುಳಿ | ತಿಹಳು ಸಮೀಪ |
ಸುತ್ತಲು ಬಹ್ಮಾದಿ | ಗಳ ಸ | ಲ್ಲಾಪ |
ಅರ್ಥಿಯಿಂ ಪಾಡುವೆ | ಹರಿಯ ಪ್ರತಾಪ | 8

ಯೋಗಿ ಶ್ರೀ ಮಧ್ವರ | ಹೃದಯದಲ್ಲಿಹನ |
ಭಾಗವತರ ಪ್ರಿಯ | ಲಕ್ಷ್ಮಿ ವಲ್ಲಭನ |
ಭಾಗೀರಥಿ ಪಿತ | ಗರುಡ ವಾಹನನ |
ನಾಗೇಶ ಶಯನ ಶ್ರೀ | ಹರಿಮೋಹನನ | 9.

" ಶ್ರೀ ಕೇಶವನಾಮ ಕೀತ೯ನೆ "

ರಾಗ : ಖರಹರ ಪ್ರಿಯ ತಾಳ : ರೂಪಕತಾಳ

ಜಯ, ಜಯ, ಹರಿ | ಜಯ ನರಹರಿ |
ಜಯ ಸಿರಿಹರಿ | ಸುಖದ || ||ಪ||
ಜಯ ಜಯ ಹರಿ | ಜಯ ನರಹರಿ |
ಜಯ ಸಿರಿಹರಿ | ಫಲದ || ||ಅ.ಪ.||

ಚತುರ್ವಿಂಶತಿ | ತತ್ವಗಳಲಿ
ಸ್ಥಿತನಾಗಿಹ | ಹರಿಯೇ |
ರತಿ ಪತಿ ಪಿತ | ವಾಸುದೇವ |
ಗತಿ ಪಾಲಿಸು | ಧೊರೆಯೇ || 1

"ಕೇಶವ" ಎನ್ನ ಕರುಣಿಸಿ ಬಹು | ಕ್ಲೇಶವ ನೀ ದಹಿಸೊ |
ದೋಷರಹಿತ "ನಾರಾಯಣ" | ಆಸೆಯ ನೀ ಸಲಿಸೊ || 2

"ಮಾಧವ" ಮಂಗಳ ಮಹಿಮನೆ | ಆದರವಲಿ ನೋಡೋ |
ಶ್ರೀಧವ "ಗೋವಿಂದನೆ" ಬಹು | ಮೋದವ ನೀ ನೀಡೊ|| 3

"ವಿಷ್ಣುವೆ" ನಾಮಾಡಿದಂಥ | ದುಷ್ಕರ್ಮವಕ್ಷಮಿಸೊ ||
ವೃಷ್ಣಿವರ್ಯ, "ಮಧು ಸೂದನ" | ಕಷ್ಟವ ಪರಿಹರಿಸೊ || 4

"ತ್ರಿವಿಕ್ರಮನೆ" ತ್ರಿವಿಧ ಗುಣವ | ಜವದಿಂದಲಿ ಕಳೆಯೊ |
ಭವಭಯಹರ "ವಾಮನ" ಎನ | ಹವಣೆಯ ನೀ ನರಿಯೊ || 5

"ಶ್ರೀಧರ" ಶೃಂಗಾರ ನಿಲಯ | ಶೋಧಿಸು ಭವ ಕಲುಷ |
ಭೂಧರ "ಹೃಷಿಕೇಶ" ನೀಡು | ಜ್ಞಾನದ ಪೀಯೂಷ || 6

"ಪದ್ಮನಾಭ" ಮಧ್ವವರದ | ಅದ್ಭುತ ಮಹ ಮಹಿಮ |
ಮುದ್ದು ಮೂರ್ತಿ "ದಾಮೋದರ" | ಉದ್ಧರಿಸೆಲೊ ಎನ್ನ || 7

"ಸಂಕರ್ಷಣ" ಸಂಕಟ ಹರ | ಪಂಕೇರುಹ ನಯನ |
ಶಂಕರನುತ "ವಾಸುದೇವ" ಪಂಕಜ ನಿಭ ವದನ || 8

"ಪ್ರದ್ಯುಮ್ನನೆ" ಹೃದ್ಗತದ ಅ | ವಿದ್ಯೆಗಳನು ತರಿಯೊ |
ಮದ್ಕುಲ ದೈವನೆ "ಶ್ರೀ ಅನಿ | ರುದ್ಧ" ನೆ ಎನ ಪೊರೆಯೊ 9

"ಪುರುಷೋತ್ತಮ", ಸರ್ವೋತ್ತುಮ | ಕರುಣದಿ ಕೈಪಿಡಿಯೊ |
ಕರಿವರದನೆ ಅಗಿದಮನ "ಅ | ಧೋಕ್ಷಜ" ಭವ ಕಡಿಯೊ|| 10

"ನರಸಿಂಹನೆ" ದುರುಳನ ಉರು | ಕರುಳನು ಬಗೆದವನೆ |
ಮುರಹರ "ಅಚ್ಯುತ" ಮಧುರೆಯ | ಕುಬ್ಜಿಗೆ ಒಲಿದವನೆ || 11

ಜನಕಜ ಮುಖ ಕುಮುದೇಂದು "ಜ | ನಾರ್ಧನ" ಅಸುರಾರಿ |
ಮನಸಿಜ ಪಿತ ಮಾ ರಮಣ "ಉ | ಪೇಂದ್ರ"ನೆ ಭಯ ಹಾರಿ || 12

"ಹರಿ, ಹರಿ." ಭವತಾಪ ಹರಣ | ಹರುಷದಿ ಮೈದೋರೊ |
ನಿರುಪಮ ಸುಂದರ "ಕೃಷ್ಣನೆ" | ಮೊರೆ ಇಡುವೆನು ಬಾರೊ|| 13

ಮರುತಾಂತ | ರ್ಗತ ನಾಗಿಹ | ಪುರುಷೋತ್ತುಮ ಹರಿಯೆ |
ಚರ ಸ್ಥಾವರ | ಗಳಲಿ ವ್ಯಾಪ್ತ | ಸರುವದ ಪೊರೆ ಧೊರೆಯೆ|| 14

ಇಪ್ಪತ್ನಾಲಕು ನಾಮವ | ತಪ್ಪದೆ ನೆನೆವರನು |
ಒಪ್ಪದಿ ನಾಗೇಶ ಶಯನ | ರಕ್ಷಣೆ ಗೈಯುವನು || 15

" ನಿನ್ನಾಶ್ರಯ ನೀರಜ "

ರಾಗ : ರೀತಿಗೌಳ ತಾಳ : ಛಾಪುತಾಳ

ನಿನ್ಹೊರತು | ಎನಗನ್ಯರಿಲ್ಲ || ಸ್ವಾಮಿ ||
ಮನ್ನಿಸಿ ಪಾಲಿಸೊ | ಭಕ್ತವತ್ಸಲ || ||ಪಲ್ಲವಿ||

ಹದಿನಾಲ್ಕು ಲೋಕಕೆ ದಾತ | ನೀನು |
ವಿಧಿ, ಭವ, ಸುರರಿಗೆ | ಜ್ಞಾನ ಪ್ರದಾತ ||
ಪದುಮಜೆ ಲಕ್ಷ್ಮಿಗೆ | ಪ್ರೀತ | ಸ್ವಾಮಿ |
ಯದುಕುಲ ಪತಿ | ದ್ರೌಪದಿ | ಮಾನದಾತ || 1

ಚಂಚಲವಾದೆನ್ನ ಮನಸು | ತಿದ್ದು |
ಮುಂಚಿನ ರೀತಿ ಸಂ | ಸಾರದ ಕನಸು ||
ಸಂಚಿತಾ ಗಾಮಿಯ | ದಹಿಸು | ವಿ
ರಂಚಿ ಜನರ ಕೈ | ಪಿಡಿದು ಉದ್ಧರಿಸು || 2

ಪತಿ, ಪುತ್ರರ, ನಿತ್ಯ ಕಾವ | ಭಾರ |
ಸತತ ನಿನ್ನದು ಎಂದು | ತಿಳಿದೆನೋ ದೇವ ||
ಪತಿತ ಪಾವನ | ಸುರಜೀವ ನಿನ್ನ |
ಸ್ತುತಿಸಿ ಬೇಡುವೆನು | ಮಹಾನು ಭಾವ || 3

ಇಂದ್ರಿಯಂಗಳು ಮನ | ವಾಕ್ಕು | ಬುದ್ಧಿ |
ಕುಂದದೆ ನಿನ್ನೆಡೆ | ತಿರು | ಗಿರಬೇಕು ||
ಎಂದು ಬೇಡುವೆ | ವರ | ಸಾಕು |
ಇಂದಿರೆ ಪತಿ ಕಾ | ಪಾಡಲು ಬೇಕು || 4

ಬಳಲಿ, ಬಳಲಿ, ಬಹುನೊಂದೆ | ಸ್ವಾಮಿ |
ಸುಳಿವು ಸಿಗಲಿಲ್ಲ | ನಿನ್ನದು ತಂದೆ ||
ಕಳವಳ ಪಡುತಲಿ | ನಿಂದೆ | ಸುಜನ
ಕುಲಗುರು ಮಧ್ವರ ನಾಶ್ರೈಸಿ ಬಂದೆ || 5

ತತುವಾಭಿ ಮಾನಿ | ನಿರ್ಜರರು | ಅಲ್ಪ
ಮತಿಯಾದ ಎನ್ನನು | ಪೇಕ್ಷೆ ಮಾಡಿಹರು ||
ಪತಿ ನಿನ್ನಾಜ್ಞೆಯ | ಕಾಯುತಿಹರು | ಲಕ್ಷ್ಮಿ
ಪತಿ ನೀನು ಪೇಳೆ | ಕ್ಷಣದಿ ಉದ್ಧರಿಪರೋ|| 6

ಭಾಗವತರ ಹೃದಯ ವಾಸ | ಸ್ವಾಮಿ |
ನೀಗು ಎನ್ನಂತರಂಗದ | ಬಹು | ಕ್ಲೇಶ ||
ಸಾಗಿತು ಕಾಲ | ಸರ್ವೇಶ || ಸ್ವಾಮಿ |
ನಾಗೇಶ ಶಯನನೆ | ಕಾಯೊ ನಿರ್ದೋಷ || 7

★ ★ ★

" ಅನುದಿನ ಅನು ಸಂಧಾನ ನಂದ್ಯಾವರ್ತ "

ರಾಗ : ಕೇದಾರ ತಾಳ : ಛಾಪು ತಾಳ

ಅನುದಿನದಲಿ ನಿನ್ನ | ನೆನೆಯುವ ಸೌಭಾಗ್ಯ |
ವನು ಕೊಡು ಶ್ರೀಹರಿಯೇ || ||ಪಲ್ಲವಿ||

ಕನಸಿಲಿ, ಮನಸಿಲಿ | ಅನುಗಾಲ ನಿನ್ನಯ |
ಘನಪಾದ ಧ್ಯಾನಿಪ | ಮನಕೊಡು ಹರಿಯೆ || ||ಅ ಪ||

ಒಳಗೆ ಹೊರಗೆ ಎಲ್ಲ | ಸ್ಥಲದಲ್ಲಿ ನೀನಿಹ |
ನೆಲೆಯ ತಿಳಿಸೊ | ಹರಿಯೇ ||

ಕಲಿಮಲಗಳೆ ಎನ್ನ | ಹೃದಯ ದಿಂದೋಡಿಸಿ |
ಕಳವಳ ಬಿಡಿಸೆನ್ನ | ಕಾಯೊ ಶ್ರೀ ಹರಿಯೆ || 1

ನಾನಾ ವಿಧಧ ರಜ | ತಮದಲ್ಲಿ ಬಿದ್ದುನಾ |
ಹೀನ ನಾದೆನೋ | ಹರಿಯೇ ||
ಜ್ಞಾನಿ ವರ್ಯರ ಸಂಗ | ಸಾನು ರಾಗದಲ್ಲಿತ್ತು |
ಪ್ರಾಣನ ಮತ ಪೊಂ | ದಿಸಿಕಾಯೊ ಹರಿಯೇ || 2

ಸೂರ್ಯ, ಚಂದ್ರಾಗ್ನಿ, ನಕ್ಷತ್ರ, ಜಲವು, ಭೂ |
ಶರಧಿ, ಗಗನ, ದಿಕ್ಕುಗಳು |
ಸರಸಿ ಜಾಕ್ಷನಿನ್ನ | ವೀರ್ಯದಿಂಧರಿಸಿಹ |
ಪರಮ ಸಂಭ್ರಮ ಜ್ಞಾನ | ತಿಳಿಸೊ ಶ್ರೀ ಹರಿಯೆ | 3

ದೇವ, ದಾನವ, ಯಕ್ಷ | ಗಂಧರ್ವರುರಗರು |
ಸರ್ವ ಚರಾಚರವು ||
ಶರ್ವವಂದ್ಯನೆ ಸರ್ವ | ಜಗವು ನಿನ್ನೊಶದಲಿ |
ನಿರ್ವಾಹವಾಗುವು | ದನು ತಿಳಿಸು ಹರಿಯೆ || 4

ಇಂದ್ರಿಯಂಗಳು, ಮನ | ಬುದ್ಧಿ, ಸತ್ವವು, ಧೃತಿ
ಕುಂದದ ಬಲ, ತೇಜವು ||
ಇಂದಿರೆಪತಿ ಕ್ಷೇತ್ರ | ಕ್ಷೇತ್ರಜ್ಞ ನೀನೆಂಬ |
ಚಂದದ ವಿಶ್ವಾಸ | ಧೃಡ ಮಾಡು ಹರಿಯೇ || 5

ಸಾಕಾರ, ರೂಪ, ಜಗ | ದೇಕ ವ್ಯಾಪಕನಿರೆ |
ಕಾಕು ಭೂತಗಳನೊಲ್ಲೆ ||
ಏಕೋ ವಿಷ್ಣುರ್ಮಹ | ಧ್ಭೂತ, ಅವ್ಯಯ ನೆಂಬ |
ವಾಕು ಮನದಿ ನಿಲಿಸಿ | ಕಾಪಾಡು ಹರಿಯೆ || 6

ನಾಗೇಶ ಶಯನನೆ | ಯೋಗೀಶ ಕೃಷ್ಣನೆ |
ಸಾಗರ ಸುತೆ ಪ್ರಿಯನೇ ||
ಜಾಗರ, ಸ್ವಪ್ನ ಸು | ಷುಪ್ತಿಯ ಕಳೆದು ನಿ |
ನ್ನಾಗಾರ ದಾರಿಯ | ತೋರೋ ಶ್ರೀಹರಿಯೇ || 7

"ನೀನೊಲಿಯದ ಕಾರಣವೇನು, ಕಲ್ಹಾರ"

ರಾಗ : ಕಾಂಭೋದಿ ತಾಳ : ಆದಿತಾಳ

ವನಜಾಕ್ಷ ನೀನೆನ್ನ | ಮನದಲಿ ನಿಲ್ಲದಿಹ |
ಘನ ಕಾರಣ ಪೇಳಲೊ || ಶ್ರೀಹರಿ || ||ಪಲ್ಲವಿ||

ಸನಕಾದಿ ವಂದ್ಯನೆ | ಇನಕುಲ ತಿಲಕನೆ |
ಕನಕ ಕುಂಡಲ ಧರ | ಮನಕೆ ಸಂಶಯವೇ || ||ಅ.ಪ.||

ಮನದಲ್ಲಿ ನೀನಿದ್ದು | ಮನದ ವೃತ್ತಿಗಳ |
ಅನುಸರಿಸಿ ಫಲ ಕೊಡುವೆ ||
ಮನ ನಿನ್ನದು ಸ್ವಾಮಿ | ತನು ನಿನ್ನದು ಎನ್ನ |
ಮನ ತಿದ್ದಿ ಹೃದಯದ ಸದನದಿ ನಿಲ್ಲೆ ಏಕೆ ? || 1

ದಿನಗಳು ಕಳೆಯಿತು | ತನು ಬಲ ಉಡುಗಿತು |
ಮನ ಶಾಂತಿ ಸಿಗದಾಯಿತು || ಕೇಳೋ ||
ಕ್ಷಣ ಕಾಲವಾದರು | ಘನಪಾದ ಕಮಲದಿ |
ಅನುರಾಗ ಕಾಣುವ | ಅನುಭವ ಕೊಡೆ ಏಕೆ ? || 2

ಜನ್ಮ ಜನ್ಮಾಂತರ | ಕರ್ಮವು ಸವೆಯದ |
ಮರ್ಮವ ತಿಳಿದಿರುವೆ | ಶ್ರೀಹರಿ
ಮನ್ಮಥ ಜನಕನೆ | ಮಮತೆಯ ತೋರಿ,ದು
ಷ್ಕರ್ಮ ಕಳೆದು ನೀ | ಮನ್ನಿಸಿ ಬಾರೆ ಏಕೆ ? || 3

ಮನಸಿಗಭಿಮಾನಿ | ಮನಸಿಜ ವೈರಿಯು |
ಮನವ ನಿಯಂತ್ರಿಸುವ ||
ಮನಶುದ್ಧಿಗೊಳಿಸಲು | ನಿನ್ನಾಜ್ಞೆ ಕಾಯುವ |
ವಿನತಜ ವಾಹನ | ಆಜ್ಞೆಯ ಕೊಡೆ ಏಕೆ ? || 4

ಪತಿ, ಪುತ್ರ, ಸಂಸಾರ | ಅತಿ ಭಾಗ್ಯ, ವೈಭವ |
ರತಿಪತಿ ಪಿತ ನಿನ್ನದೊ | ಶ್ರೀಹರಿ
ಸತತವು ಎನ್ನಯ | ಹಿತ ಚಿಂತಕನು ನೀ |
ಮತಿಯನ್ನು ಕೊಡದಿರೆ | ಗತಿಯಾರು ಪೇಳಯ್ಯ || 5

ಸಕಲ ಇಂದ್ರಿಯಗಳ | ಅಖಿಳ ವ್ಯಾಪಾರ |
ಲಕುಮೀಶ ನೀ | ಗೈಯುವೆ || ಶ್ರೀಹರಿ
ಸುಖ ತೀರ್ಥ ಮುನಿಗಳ | ಸುಖ ಮಾರ್ಗವ ತೋರಿ |
ಶಕುತಿ, ಯುಕುತಿ ಕೊಟ್ಟು | ಭಕುತಿ ಕೊಡೆ ಏಕೆ || 6

ಯೋಗೀಶ ಕೃಷ್ಣನೆ | ವಾಗೀಶ ಜನಕನೆ
ಭಾಗವತ ಪ್ರಿಯನೇ || ಶ್ರೀಹರಿ
ನೀಗಿ ಮನ ಚಿಂತೆ | ಸಾಗಿಬಂದು ಹೃದ
ಯಾಗಾರದಲಿ ನಿಲ್ಲೊ | ನಾಗೇಶ ಶಯನ || 7

" ಮನಸಿನ ಮರ್ಮ ನಳಿನ "

ರಾಗ : ಚಕ್ರವಾಕ್ ತಾಳ : ರೂಪತಾಳ

ಮನಸಿನ ಮರ್ಮವ ನರಿಯೊ | ಸರಸಿ ಜಾಕ್ಷ ನೀನೇ ಪೊರೆಯೊ|
ಮನದಿ ಬೆರೆತ ಬಹು ಕಲ್ಮಷ | ಹರಿಸೊ ಬೇಗ ಆದಿಪುರುಷ || ||ಪಲ್ಲವಿ||

ಜನನಿ ಜನಕ | ನೀನೆ ಎಂದು |
ಮನಕೆ ತಿಳಿಸಿ | ಕಾಯೊ ಬಂದು ||
ಎಣಿಸ ಬೇಡ | ಎನ್ನ ಕುಂದು |
ದಣಿಸ ಬೇಡ | ದೀನ ಬಂಧು || 1

ಇನಿಯ, ತನಯ | ಬಹು ವೈಭವ |
ಇನಕುಲ ಪತಿ | ನಿನದೆನ್ನಿಸೊ ||
ಮನದ ವ್ಯಾಕು | ಲಗಳ ಹರಿಸೊ |
ಹನುಮ ನೊಡೆಯ | ಇಷ್ಟ ಸಲಿಸೊ || 2

ದಿನವು ಕಳೆಯೆ | ಎನಗೆ ಜ್ಞಾನ |
ಮನದಿ ನಿಲುವು | ದೆನುತ ಲಿದ್ದೆ ||
ದಿನವು ಕಳೆದು | ಮನ ಸೋತಿತು |
ಜ್ಞಾನದ ನೆಲೆ | ತಿಳಿಯ ದಾಯ್ತು || 3

ಪರರ ಸಂಗ । ಬೇಡವಾಯ್ತು ।
ಪರದ ದಾರಿ । ಅರಿಯ ದಾಯ್ತು ॥
ಮರೆಗಿ ಮನವು । ಬರಡು ಆಯ್ತು ।
ಮೊರೆಯು ನಿನಗೆ । ಕೇಳದಾಯ್ತು ॥ 4

ಸಾಧು ಜನರ । ಸಂಗ ಕೊಡಿಸೊ ।
ಭೇದ, ಜ್ಞಾನ । ವನ್ನೆ ತಿಳಿಸೊ ॥
ಮೋದ ಮುನಿಯ । ಮಾರ್ಗ ಹಿಡಿಸೊ ।
ಸಾಧು ವಂದ್ಯ । ದಯ ತೋರಿಸೊ ॥ 5

ಹೃದಯ ಗ್ರಂಥಿ । ಬಿಡಿಸಿ ಎನ್ನ ।
ಹೃದಯ ಸದನ । ದಲ್ಲಿ ನಿನ್ನ ॥
ಮಧುರ, ಚೆಲುವ । ರೂಪವನ್ನು ।
ಮುದದಿ ನಿಲಿಸೊ । ಸು ಪ್ರಸನ್ನ ॥ 6

ಸಾಗರ ಸುತೆ । ಪತಿ ದಯಾಳೊ ।
ಬೇಗ ಎನ್ನ । ದುರಿತ ಸೀಳೋ ॥
ನಾಗವೈರಿ ಧ್ವಜನೆ । ಕೇಳೋ ।
ನಾಗೇಶ ಶ । ಯನ ಕೃಪಾಳೊ ॥ 7

" ಶ್ರೀ ಹರಿ ಸೃಷ್ಟಿ ಕರ್ತೃತ್ವದ ಆಶ್ಚರ್ಯ ಜಾಜಿ "

ರಾಗ : ಹಿಂದೂಸ್ಥಾನಿಕಾಪಿ ತಾಳ : ಆದಿತಾಳ

ಶಿಲ್ಪಕಾರ ನ್ಯಾರೇ ? ಹೇ ಸಖೀ ।
ಶಿಲ್ಪಕಾರ ನ್ಯಾರೇ ? ॥ಪ॥

ಶಿಲ್ಪಿಯಾಗಿ ಜಡ, ಪ್ರಕೃತಿ । ನಿಯಂತ್ರಿಸಿ ।
ಕಲ್ಪ ಕಲ್ಪದಲಿ । ಜಗವ ಸೃಜಿಸುತಿಹ ॥ ॥ಅ.ಪ.॥

ಪಕ್ಷಿ, ಮೃಗವ, ಕ್ರಿಮಿಯ । ಜಲಚರ।
ವೃಕ್ಷ, ಗುಲ್ಮ, ಲತೆಯ ॥
ಸ್ವಚ್ಛ ಜಲದ ನದಿ । ಕಡಲ ಪರ್ವತವ ।
ಇಚ್ಛೆಯಿಂದ ನರ । ತನುಗಳ ತಿದ್ದುವ ॥
ಶಿಲ್ಪಕಾರ ನ್ಯಾರೇ ? ಹೇಸಖಿ ಶಿಲ್ಪಕಾರನ್ಯಾರೆ ? ॥ 1

ಚಿತ್ರ, ಚಿತ್ರ, ಪುಷ್ಪ | ಪತ್ರವ |
ಚಿತ್ರಿಸಿರುವನ್ಯಾರೆ ?
ಮುತ್ತು, ಪವಳ ಲತೆ, | ರತ್ನದ ಮಣಿಗಳ |
ರತ್ನಗರ್ಭದಲಿ | ಬಿತ್ತಿಹ ನ್ಯಾರೇ ?
ಚಿತ್ರಕಾರನ್ಯಾರೇ ? ಹೇ ಸಖೀ | ಚಿತ್ರಕಾರ ನ್ಯಾರೇ ? || 2

ವರ್ಣ, ವರ್ಣ, ಕುಸುಮ | ದ್ರುಮಕೆ |
ಬಣ್ಣ ಬಳಿದ ರ್ಯಾರೇ ?
ಚೆನ್ನ ನವಿಲು, ಗಿಣಿ | ಸಿಂಹ, ಹುಲಿ, ಭ್ರಮರ ||
ಸ್ವರ್ಣಕೆ, ರನ್ನಕೆ | ಬಣ್ಣವ ಹಾಕುವ |
ಬಣ್ಣಗಾರ ನಾರೇ ? ಹೇ ಸಖೀ | ಬಣ್ಣಗಾರ ನ್ಯಾರೇ ? || 3

ಸ್ವರ್ಣದಲ್ಲಿ ಇರುವ | ಮಲವನು |
ಚೆನ್ನಾಗಿ ತಾ ತೊಳೆವ |
ಸ್ವರ್ಣಕಾರ ತಾನೆನಿಸಿ | ಸಜ್ಜನರ ||
ಕಲ್ಮಷ ಕಳೆದತಿ | ನಿರ್ಮಲ ಗೈಯುವ |
ಸ್ವರ್ಣಕಾರನ್ಯಾರೇ ? ಹೇ ಸಖೀ | ಸ್ವರ್ಣಕಾರನ್ಯಾರೆ ? || 4

ಸುಂದರ ಸಮುಗಳಿಗೆ | ದಿವ್ಯಸು
ಗಂಧ ಬಳಿವರ್ಯಾರೇ ?
ಕಂದ, ಮೂಲ, ಫಲ, ಧಾನ್ಯಕೆ | ಕ್ಷೀರಕೆ ||
ಕುಂದದ ರುಚಿಯನು | ತುಂಬಿಹ ರ್ಯಾರೇ
ತಂದೆ, ಗುರುವುಯಾರೇ ? ಜಗಕೆ ತಂದೆ, ಗುರುವು ಯಾರೇ ? || 5

ಗಗನದ ಮಧ್ಯದಲಿ | ಮಿನುಗುವ |
ಅಗಣಿತ ತಾರೆಗಳ ||
ಜಗವ ರಕ್ಷಿಸುವ | ತರಣಿಯು, ಧರಣಿಯು ||
ಜಗಕತಿ ತಂಪನು | ಎರೆವ ಹಿಮಾಂಶುವ |
ನಿಲ್ಲಿಸಿರುವ ನ್ಯಾರೇ ? ಗಗನದಿ ನಿಲ್ಲಿಸಿರುವನ್ಯಾರೇ || 6

ಕುಕ್ಷಿಯಲ್ಲಿ ಜಗವ | ಧರಿಸುತ |
ರಕ್ಷಿಸುತಿಹನ್ಯಾರೇ ? ||

ಪಕ್ಷಿಗಮನ ನಾ | ಗೇಶ ಶಯನ ಹರಿ |
ಲಕ್ಷ್ಮೀರಮಣ ಸ | ರ್ವೋತ್ತಮ ನಲ್ಲದೆ || || ಪಲ್ಲವಿಯಂತೆ ||
ಸರ್ವಕರ್ತನ್ಯಾರೇ ? ಹೇ ಸಖೀ | ಸರ್ವಕರ್ತನ್ಯಾರೇ ? || 7

ಸ್ವರ್ಣಕಾರನವ | ಶಿಲ್ಪಕಾರನವ |
ಬಣ್ಣಗಾರನವ | ಚಿತ್ರಕಾರನೆ |
ಸರ್ವಕರ್ತನವನೇ | ಶ್ರೀಹರಿ |
ವಿಶ್ವವ್ಯಾಪ್ತನವನೇ || 8

" ಶ್ರೀ ತುಳಸಿ ಕೃಷ್ಣ ಸ್ತೋತ್ರ' ತುಲಸಿ "

ರಾಗ : ಕೀರವಾಣಿ ತಾಳ : ಮಿಶ್ರ ಛಾಪುತಾಳ

ತುಲಸಿ ಮಂದಿರದಲ್ಲಿ | ನೆಲೆಸಿಹ ಶ್ರೀಕೃಷ್ಣ |
ಬಲವಂದು ಪ್ರಾರ್ಥಿಸುವೆ | ಕೈಮುಗಿವೆ || ||ಪಲ್ಲವಿ||

ಕನಸಿನಂತಿಹ ದೇಹ | ನೆನೆಸಿವೆ ನಿನ ಪಾದ |
ಮನಸಾರ ನೆನೆವಂತೆ | ಮಾಡೊ ಶ್ರೀಹರಿಯೆ || ||ಅ.ಪ.||

ಅಮರ ತತಿಗಳೆಲ್ಲ | ನಮಿಸುತ್ತಲಿರುವರು |
ವಿಮಲೆ ಮಹಾಲಕ್ಷ್ಮೀ | ಉರದಲ್ಲಿಹಳು ||
ಕಮಲಾಕ್ಷಿ ಶ್ರೀತುಲಸಿ | ಕಮ ನೀಯ ರೂಪದಿ |
ರಮೆಯು ಆವೇಶದಿ | ಓಲೈಸುತಿಹಳು || 1

ತುಲಸಿಯ ಮೂಲದಿ | ಸಕಲ ತೀರ್ಥಗಳು |
ತುಲಸಿಯ ಮಧ್ಯದಲಿ | ಆದಿತ್ಯರು ||
ತುಲಸಿಯ ಅಗ್ರದಿ | ಸಕಲ ವೇದಗಳು |
ತುಲಸಿ ಇಲ್ಲದ ಪೂಜೆ | ವ್ಯರ್ಥವೆನ್ನಿಪುದು || 2

ಅಜ್ಞಾನ, ಭಯ, ದುಃಖ | ಆದಿ, ವ್ಯಾಧಿಗಳನ್ನು |
ಭಗ್ನವ ಗೊಳಿಸುವಳು | ಈ ತುಲಸಿಯು ||
ಸುಜ್ಞಾನ, ಸೌಭಾಗ್ಯ | ಸುಜನ ಸಂಗವಿತ್ತು |
ಪ್ರಜ್ಞಾತೀರ್ಥರ ಮತ | ಪೊಂದಿಸಿ ಕಾವಳು || 3

ಹರಿ ಧನ್ವಂತರಿ ನಿನ್ನ | ಕಲಶ ದಂಮೃತ ಬಿಂದು
ಇಳೆಗೆ ಬೀಳಲು ಅದರಿಂ | ಜನಿಸಿರುವಳು
ಹರಿದಿನ ದ್ವಾದಶಿ | ಸಿರಿ ಜಾಂಬ ವತಿಯು |
ಹರುಷದಿಂದವಳಲ್ಲಿ | ಆವೇಶಿಸುವಳು || 4

ಸಾಗರಸುತೆ ನಾಥ | ಸುರಮುನಿಗಣ ಪ್ರೀತ |
ಯೋಗಿ ಹೃದಯ ಸಂ | ಸ್ಥಿತ ಶ್ರೀ ಜಗನ್ನಾಥ ||
ಭಾಗವತರ ಪ್ರಿಯ | ನಾಗೇಶ ಶಯನನೆ |
ಬೇಗನೆ ದಯ ಮಾಡೊ | ತುಳಸಿ ಸಮೇತ || 5

" ಶ್ರೀ ಚೆನ್ನಕೇಶವ, ದರ್ಶನ ದವನ "

ರಾಗ : ಹಿಂದೂಸ್ಥಾನಿಕಾಪಿ ತಾಳ : ಆದಿತಾಳ

ಚನ್ನಕೇಶವ ನಿನ್ನ | ಘನ್ನ ಸುಪಾದವ |
ಇನ್ನು ನಂಬಿದೆ ಕಾಯೋ | ವರವೀಯೊ || ||ಪಲ್ಲವಿ||

ಪನ್ನಗಶಯನ ಪ್ರ | ಪನ್ನ ರಕ್ಷಕ ಜಗ
ಧ್ಭಿನ್ನ ಸ್ವರೂಪನೆ | ನೀ ಪೊರೆಯೊ || ||ಅ.ಪ.||

ಶ್ರೀಪತಿ ನೀನಿಲ್ಲಿ | ಸ್ಥಾಪಿತನಾಗಲು |
ಗೋಪ ಕನ್ನಿಕೆಯರು | ಬೆಂಬಿಡದೆ ||
ಈಪರಿ ಶಿಲೆಗಳ | ರೂಪವ ತಾಳುತ |
ಗೋಪಾಲ ನಿನ್ನನು | ಸೇವಿಪರೊ || 1

ಸಿರಿ ವಾದಿರಾಜರು | ವೈಕುಂಠದಾಸರು |
ಪುರಂದರದಾಸರು | ಕನಕಾರ್ಯರು ||
ಪರಿಪರಿ ಭಕ್ತಿಯ | ಭಾವದಿ ನಿನ್ನನು |
ಸರಸದಿ ಆಡಿಸಿ | ನಲಿ ದಿಹರೊ || 2

ಬೇಲೂರು ಪುರವಾಸ | ಶ್ರೀ ಲಕುಮೀಶ |
ನೀಲವರ್ಣನೆ ಶ್ರೀ ಶ | ಸರ್ವೇಶ ||
ಪಾಲ ಸಾಗರದಿ | ಲೀಲೆಯಿಂದಿರುವ, ಮಾ |
ಲೋಲ ಶ್ರೀ ನಾಗೇಶ | ಶಯನ ನಿರ್ದೋಷ || 3

" ಶ್ರೀ ಹರಿಯ ಜಯ ಘೋಷ, ಜಲಜ "

ರಾಗ : ಅಮೃತ ವರ್ಷಿಣಿ ತಾಳ : ಆದಿತಾಳ

ಜಯ–ಜಯ–ನಿನ್ನ–ನಂಬಿದಗೆ |
ಭಯ–ಭಯ–ನಿನ್ನ–ಮರೆತವಗೆ || ||ಪ||

ದಯಾ–ಮಯಾ–ನೀ–ಶರಣರಿಗೆ |
ಮಹಾ–ಭಯ–ನೀ–ದುರುಳರಿಗೆ || ||ಅ.ಪ.||

ಚರಾ–ಚರ–ಜಗತ್‌ಕಾರಣನೇ |
ಸುರಾ–ಸುರ–ಫಲ–ದಾಯಕನೇ ||
ಧರಾ–ಧರ–ಭವ–ಬಂದಕನೆ |
ಪರಾ–ತ್ಪರ–ಭವ–ಮೋಚಕನೆ || 1

ಜರ–ಜರ–ಜರೆ ಎಳೆಯುತಿದೆ |
ಗಿರ–ಗಿರ–ಮತಿ–ತಿರುಗುತಿದೆ ||
ಸರ–ಸರ–ದಿನ–ಪೋಗುತಿದೆ |
ಪೊರೆ–ಪೊರೆ–ಎಂದು–ಕೂಗುತಿಹೆ || 2

ಕ್ಷರಾ–ಕ್ಷರ–ರಿಗಿಂ | ದುತ್ತಮನೆ |
ಮರಾ–ಮರಾ–ಎಂದ–ಗೊಲಿದವನೆ ||
ಮರೆ–ಮರೆ–ಎನ್ನ–ಪಾಪವನೆ |
ಹರಿ–ಹರಿ–ಭವ–ಪಾಶವನೆ || 3

ಸುಡು–ಸುಡು–ದುರ್ಷರ್ವವನು |
ಕೊಡು–ಕೊಡು–ಸುಜ್ಞಾನವನು ||
ಬಿಡು–ಬಿಡು–ಅನು–ಮಾನವನು |
ಇಡು–ಇಡು–ಬಹು–ಪ್ರೇಮವನು || 4

ಸುಳಿ–ಸುಳಿ–ಮೂಲಾ–ಬ್ಜದಲಿ |
ಹೊಳೆ–ನೀ–ನಾಭಿ–ಕಮಲದಲಿ ||
ಮೊಳೆ–ಮೊಳೆ–ಹುಜ್ಜಲಜದಲಿ |
ಪೊಳೆ–ನೀ–ತಾಲು–ವನಜದಲಿ || 5

ತೋರು–ನೀ–ಭ್ರೂ–ನಳಿನದಲಿ |
ಏರಿ–ಬಾ–ಸಹ | ಸಹಸ್ರಾರದಲಿ
ಸಾರಿ–ಬಾ–ಎನ–ಬುದ್ಧಿಯಲಿ |
ಯಾರು–ಇಲ್ಲ–ಮೊನಿ ನಿನಗೆಸರಿ || 6

ಬೇಗ–ಬೇಗೆ–ನ್ನ–ಮೊರೆಕೇಳು |
ನೀಗು–ನೀಗೆ–ನ್ನ–ಮನದಳಲು ||
ಸಾಗಿ–ಬಾ–ಎನ್ನ–ಹೃದಯದೊಳು |
ನಾಗೇಶ–ಶಯ–ನ–ಕರುಣಾಳು || 7

" ಶ್ರೀ ಕಡಗೋಲು ಕೃಷ್ಣಲೀಲ ಕಮಲ "

ರಾಗ : ಬಿಲಹರಿ ತಾಳ : ಆದಿತಾಳ

ಬಿಡು, ಬಿಡು, ಬಿಡು ಸೆರಗ | ಗೋಪಾಲ
ಕೊಡು, ಕೊಡು, | ಕಡಗೋಲ || ||ಪಲ್ಲವಿ.||

ಬಿಡು, ಬಿಡು, ಸೆರಗನು | ಕಡೆದು ಮೊಸರನೀಗ |
ಕಡುರುಚಿ ಬೆಣ್ಣೆಯ | ಕೊಡುವೆ ನಿನ್ನ ಕೈಗೆ || ||ಅ.ಪ.||

ಪೊಳೆವ ಮುಖವ ತೊಳೆವೆ | ರಂಗಯ್ಯ ನಿನ್ನ |
ಸುಳಿಗೂದಲನು | ಹಿಕ್ಕುವೆ (ಬಾಚುವೆ) ||
ನಲಿವ ಅರಳೆಲೆ ಮಾ | ಗಾಯ್ಗಳ ಕಟ್ಟಿ |
ಚಲುವ ಮುಖಕೆ ನಾ | ತಿಲುಕವ ತಿದ್ದುವೆ || 1

ನೀಲದಂಗಿ ತೊಡಿಸಿ | ರಂಗಯ್ಯ ನಿನಗೆ |
ತೋಳ ಬಾ | ಪುರಿ ಇಡಿಸಿ||
ಕಾಲಿಗೆ ಗೆಜ್ಜೆ ಕಟ್ಟಿ | ಕೈಗೆ ಉಂಗುರ ವಿಟ್ಟು |
ನೀಲವರ್ಣನೆ ನಿನ್ನ | ತೋಳ ಮೇಲೆತ್ತುವೆ || 2

ಹಸಿರು ಅಂಗಿಯು ತೊಡಿಸಿ | ಕೃಷ್ಣನೆ ನಿನಗೆ |
ಕುಸುರು ಬಾ | ಪುರಿ ಇಡಿಸಿ ||
ಹಸನಾದ ನವನೀತ | ಹಸಿಹಾಲ ನೊರೆಯನ್ನು |
ಬಿಸಿ, ಬಿಸಿ, ಕಜ್ಜಾಯ | ಹಸುಕಂದ ತರುವೆನು || 3

ಚಕ್ಕುಲಿ, ಗಿಲಗಂಚಿಯು | ಅತಿರಸವು |
ಸಕ್ಕರೆ ಪಾಯಸವು ||
ಚೊಕ್ಕ ಬೆಣ್ಣದ ಹರಿ | ವಾಣದಲ್ಲಿ ತಂದು |
ಅಕ್ಕರದಲಿ ನಿನ್ನ | ಚಿಕ್ಕ ಬಾಯಲ್ಲಿಡುವೆ || 4

ಚಂದವಾಮನ ತೋರುವೆ | ಸುಂದರ ಕೃಷ್ಣ |
ಛಂದದಿ ಪೊಲೆಯೂಡುವೆ ||
ಇಂದಿರೆ ರಮಣ ಶ್ರೀ | ನಾಗೇಶ ಶಯನ ಹೃ –
ನ್ಮಂದಿರದಲಿ ನಿನ್ನ | ಪೊಂದಿ ಮುದ್ದಾಡುವೆ || 5

" ಶ್ರೀಮೂಲರಾಮದೇವರ ಪ್ರಾರ್ಥನ ರಾಜೀವ "

ರಾಗ : ಭೈರವಿ ತಾಳ : ಆದಿತಾಳ

ಶ್ರೀ ಮೂಲ ರಾಮ ಪ್ರಭೊ | ಸೀತಾ ವಿಭೊ || ||ಪ||

ಶ್ರೀರಾಮ ಜಯರಾಮ | ಶ್ರೀ ದಿಗ್ವಿಜಯ ರಾಮ |
ಶ್ರೀವಂಶ ರಾಮ ಗುಣ | ಧಾಮ ಮಾರುತಿ ಪ್ರೇಮ || 1

ಗಜ ಪತಿಯ ಕೋಶದಿ | ಅಜವಂದ್ಯ ನೀನಿರೆ |
ನಿಜಗುರು ಮಧ್ವರು | ಭಜಿಸಲಿಚ್ಛಿಸಿದರು || 2

ಉತ್ಥಾನ ದ್ವಾದಶಿ | ಉತ್ತಮ ನರಹರಿ |
ತೀರ್ಥರು ನಿನ್ನನು | ಭಕ್ತಿಲಿ ತಂದರೊ || 3

ಬ್ರಹ್ಮ ಕರಾರ್ಚಿತ | ಸುಮ್ಮನಸರ ಹಿತ |
ರಮ್ಮೆಯರಸ ಭವ | ಬ್ರಹ್ಮಾದಿ ವಂದಿತ || 4

ಭುವಿ ಭಾರ ಹರಣನೆ | ಅವನಿಜೆ ರಮಣನೆ |
ಪವಮಾನ ನೊಡೆಯನೆ | ಕವಿ ಜನ ಗೇಯನೆ || 5

ಸುಖತೀರ್ಥ ಸೇವಿತ | ಜಯತೀರ್ಥ ಪೂಜಿತ |
ಅಕಳಂಕ ಸುಚರಿತ | ಅಖಿಲ ಜಗತ್ಪಿತ || 6

ಸತ್ಯಜ್ಞಾನ ಹಿತ | ಸತ್ಯ ಧ್ಯಾನನುತ |
ಸತ್ಯ ಪ್ರಮೋದರ | ಚಿತ್ತದಿ ಪೊಳೆಯುವ | 7

ನಿತ್ಯ ತೃಪ್ತನೆ ನಿನ್ನ | ಸತ್ಯ ಪ್ರಮೋದರು |
ಅತ್ಯಂತ್ಯ ವೈಭವ | ಭಕ್ತಿಯಿಂ ಸ್ತುತಿಪರು || 8

ವಾಗೀಶ ಜನಕನೆ | ನಾಗೇಶ ಶಯನನೆ |
ಯೋಗಿ ಹೃದ್ ನಿಲಯ ಚೆ | ನ್ನಾಗಿ ರಕ್ಷಿಸೊ ಎನ್ನ || 9

" ಶ್ರೀಯಾದವನು ಮಾಧವನೆ, ಮಲ್ಲೆ "

ರಾಗ : ನಾಟಿಕುರಂಜಿ   ತಾಳ : ಆದಿತಾಳ

ಮಾನವ ನೆಂಬರೆ | ಮಾಧವನ |
ದಾನವ ದಮನ ಶ್ರೀ | ಯಾದವನ || ||ಪಲ್ಲವಿ||

ಜ್ಞಾನಾನಂದ ಅ | ಪ್ರಾಕೃತ ದೇಹನ |
ದೀನ ರಕ್ಷಕ ಗೋ | ಪಾಲ ಬಾಲನ || ||ಅ.ಪ.||

ಶಿಶುವಿದ್ದಾಗಲೆ | ವಿಷ ಉಂಡವನ |
ಎಸೆವ ಬಾಯಲಿ | ಜಗ ತೋರಿದವನ ||
ಹಸುಳೆ ಇದ್ದಾಗಲೇ | ಅಸುರರ ತರಿದನ |
ವಿಷ ಉಗುಳುವ ಕಾ | ಳಿಂಗ ದಮನನ || 1

ಆರು ವರ್ಷದ ಶಿಶು | ನಾರೇರ ನಾಳ್ವುದು |
ತೋರಿದುದುಂಟೆ ಈ | ಭುವಿಯಲ್ಲಿ ||
ಈರೆಂಟು ಸಾಸಿರ | ನೂರೆಂಟು ಸತಿಯರ |
ಸೇರಿ ನಲಿದ ನವ | ಏಕ ಸಮಯದಿ || 2

ರಾಜ ಸೂಯದ | ರಾಜಿಪ ಸಭೆಯಲ್ಲಿ |
ರಾಜಾಧಿ ರಾಜರು | ಇರುತಿರಲು |
ರಾಜೀವಾಕ್ಷನೆ | ಮೂಜಗ ಧೊರೆ ಎಂದು |
ಪೂಜೆ ಸಲ್ಲಿಸಿದನು | ರಾಜ ಧರ್ಮಜನು || 3

ಕುರು ಸಭೆಯಲಿ ಆ | ದುರುಳ ಕೌರವ |
ಭರದಿಂ ಹರಿಯನು | ಬಿಗಿಯೆ ರೆನೆ ||
ಮುರಹರ, ನಗಧರ | ವಿಶ್ವರೂಪದಲಿ |
ಮೆರೆದ ಅದ್ಭುತದ | ಪರಿ ನೀನರಿಯಾ || 4

ಕುರು ಪಿತಾಮಹನು | ಅರಿತಿಹ ಹರಿ ಎಂದು |
ಕುರುಕುಲ ಸುತ ಭೀಮ | ಅರಿತಿಹನೊ ||
ತರಳೆ ದ್ರೌಪದಿಯು | ಅರಿತು ಕೂಗಿದಳು |
ಮರುಳು ಮಾತಾಡೆ | ನರಕ ವೆಂದರಿಯಾ ? || 5

ಈಪರಿ ಮಹಿಮೆ ಲ | ಕ್ಷ್ಮೀಪತಿಗಲ್ಲದೆ |
ಪ್ರಾಪ್ತ ವಪ್ಪುದೆ | ಇತರರಿಗೆ ||
ಗೋಪಿಯ ಸುತನೇ | ಶ್ರೀಪತಿ ಎಂಬುದು |
ಸ್ಥಾಪಿತ ವಾಗಿದೆ | ಜಗವೆಲ್ಲ ಅರಿಯೆ || 6

ಆಗಮ, ಶೃತಿಗಳು | ಅರಸಿ ಬೆಂಡಾದುವು |
ಯೋಗಿ ಕೃಷ್ಣನ ಈ | ಮಹಿಮೆಗಳ ||
ಸಾಗರಸುತೆ ಪತಿ | ನಾಗೇಶ ಶಯನನ |
ಭಾಗವತರ ಪ್ರಿಯ | ಭವರೋಗಹರನ || 7

" ಶ್ರೀಹರಿ ಗುಣ ಗಣ ಸ್ತವನ ತಾವರೆ "

ರಾಗ : ಗೌಳಿಪಂತು ತಾಳ : ಆದಿತಾಳ

ಎಣಿಸಲಳವೆ ನಿನ್ನ | ಸುಗುಣ ಗಣ |
ಎಣಿಸುವೆ ನೈ ನಿನ್ನ | ಘನ ಕರುಣ || ||ಪ||

ಶರಧಿಯು ಪೊಕ್ಕುದು | ಬಲ್ಲೆ ನಾ | ದೊಡ್ಡ
ಗಿರಿಯನು ಪೊತ್ತುದ | ಅರಿತಿಹೆ | ನಾ ||
ಧರಣಿಯ ನೆಗಹಿದ | ತರಳನ ಸಲಹಿದ |
ಕರುಣಾಕರನೆಂದು | ಬಂದೆ ನಿನ್ನೆಡೆಗೆ || 1

ಪಾರ್ಥಗೆ ಬೋವನಾ | ದುದ ಕೇಳಿ | ಬಹು
ದೈತ್ಯರ ಮೋಹಿಸಿ | ದುದ ಕೇಳಿ |
ಉತ್ತುಮ ಹಯವೇರಿ | ದುಷ್ಟರ ಸವರಿದ |
ಭಕ್ತವತ್ಸಲನೆಂದು | ಬಂದೆ ನಿನ್ನೆಡೆಗೆ || 2

ಬಲಿಯ ಕದವ ಕಾ | ಯ್ದುದ ಕೇಳಿ | ತಾಯ
ತಲೆಯನುಳುಹಿದಂತ | ಬಗೆ ಕೇಳಿ ||
ಶಿಲೆಯಾದ ಗೌತಮು | ಸತಿಯಳ ಸಲಹಿದ |
ಬಲು ಕರುಣವ ಕೇಳಿ | ಬಂದೆ ನಿನ್ನೆಡೆಗೆ || 3

ಅಜಮಿಳಗೊಲಿದ ಆ | ಕಥೆ ಕೇಳಿ | ಆ
ಗಜವರನನು ಪೊರೆ | ದುದ ಕೇಳಿ ||
ಭುಜಗವೇಣಿ ಪಾಂ | ಚಾಲಿಯ ಸಲಹಿದ |
ನಿಜ ಕರುಣವ ಕೇಳಿ | ಬಂದೆ ನಿನ್ನೆಡೆಗೆ || 4

ಶರಣರ ಪೊರೆವುದ | ದೊಂದು ಬಗೆ | ನೀ
ದುರುಳರ ಸವರುವ | ದೊಂದು ಬಗೆ |
ಸಿರಿ ನಾಗೇಶ ಶ | ಯನ ಗುಣ ಪೂರ್ಣನೇ |
ಕರುಣವ ತೋರೋ ಬಂ | ದಿಹೆ ನಿನ್ನೆಡೆಗೆ || 5

" ಶ್ರೀ ಕಪಿಲ ದೇವರ ಸ್ತುತಿ ತೋಯಜ "

ರಾಗ : ಪೂರ್ವಿ ಕಲ್ಯಾಣಿ ತಾಳ : ರೂಪಕತಾಳ

ಕಪಿಲ ದೇವ | ನೀನೇ ಪಾಲಿಸೊ |
ಕರ್ದಮ ಸುತ || ||ಪ||

ವಿಪುಲ ಮತಿಯ | ನೆನಗೆ ಇತ್ತು |
ಕೃಪೆಯ ತೋರು | ಕರುಣಾಕರ || ||ಅ.ಪ.||

ಮಾತೆ ದೇವಹೂತಿಗೆ | ಸುವಿ
ನೀತನಾಗಿ | ಆತ್ಮಜ್ಞಾನ |
ಪ್ರೀತಿ ಇಂದ | ಭೋಧಿಸಿ, ಸುಪ
ವಿತ್ರಳನ್ನು | ಗೈದ ಹರಿಯೆ || 1

ಜ್ಞಾನಯೋಗ | ಕರ್ಮಯೋಗ
ಧ್ಯಾನಯೋಗ | ಭಕ್ತಿಯೋಗ ||
ಮಾನಸದಲಿ | ನಿನ್ನನಿಲಿಸಿ
ಧ್ಯಾನಿಪ ಸು | ಜ್ಞಾನ ವಿತ್ತ || 2

ಶುದ್ಧಾತ್ಮನೆ | ನೀನಿದ್ದ | ಪ್ರ |
ಸಿದ್ಧಕ್ಷೇತ್ರ | ಸಿದ್ಧಾಶ್ರಮ ||
ಅಧ್ಯಾತ್ಮಸು | ವಿದ್ಯೆ ತಿಳಿಸೊ |
ಸಿದ್ಧನಾ | ಗೇಶ ಶಯನ 3

★ ★ ★

" ಶ್ರೀ ಯಜ್ಞನಾಮಕ ಹರಿ ಸ್ತೋತ್ರ ಹೇಮ ಪುಷ್ಪಿಕ "

ರಾಗ : ಆರಭಿ ತಾಳ : ಆದಿತಾಳ

ಯಜ್ಞಪಾಲಕ | ತೇಜೋಮುಖ |
ಯಜ್ಞದೇವ ಎ | ನ್ನ ಜ್ಞಾನವ ಕಳೆ |
ಸುಜ್ಞಾನವ ಕೊಡು | ಸುಮನಾರ್ಚಿತ || ||ಪಲ್ಲವಿ||

ಹವ್ಯವಾಹನ | ನಂತರ್ಗತ
ಭವ್ಯ ಭಾವನ ||
ದಿವ್ಯವಾದ ಒಂದಾ | ಹುತಿ ಕೊಡುವೆನು |
ಸವ್ಯಸಾಚಿ ಸಖ | ಕೊಡು ಸೌಭಾಗ್ಯ || 1

ಸರ್ವಪಾಪಹರ | ಹರಿಣಿ ವರ |
ಸರ್ವ ಭೋಕ್ತಾರ ||
ಸರ್ವ ಸುರರಿಗಾ | ಹಾರವ ಕೊಡಿಸುವ |
ನಿರ್ವಿಕಾರ ನಿಗ | ಮಾಗಮ ಗೋಚರ || 2

ಬುದ್ಧಿ, ಪ್ರಜ್ಞಾಬಲ | ಆರೋಗ್ಯವ |
ವಿದ್ಯೆ, ಆಯುಗಳ ||
ಶ್ರದ್ಧ ಮೇಧ ಐಶ್ವರ್ಯ, ತೇಜ, ಯಶ |
ಶುದ್ಧ ಭಕ್ತಿಕೊಟ್ಟುದ್ಧರಿಸೊ ನೀ || 3

ಬಾಣ, ಕೋದಂಡ | ಪರಶು ಧರ
ನೀನೆ, ಬ್ರಹ್ಮಾಂಡ ||
ಸ್ಥಾನ ದೊಳ ಹೊರಗೆ | ಜ್ವಲಿಪ ಅಗ್ನಿತೆರ |
ಕಾಣುತ ವ್ಯಾಪಿಸಿ | ಸುಜನರ ಪೊರೆಯುವ || 4

ನೀನೆ ಪರದೈವ | ದ್ವಿಜರಿಗೆಲ್ಲ |
ನೀನೆ ಕುಲ ದೈವ ||
ನೀನೆ ಎನ್ನಪತಿ | ಪುತ್ರರ, ಸಲಹುವ |
ಶ್ರೀ ನಾಗೇಶ | ಶಯನ ಮಾಧವ || 5

" ಶ್ರೀ ಮೋಹಿನೀ ಅವತಾರ, ಇಂದೀವರ "

ರಾಗ : ತೋಡಿ

ಅಂದು ಪಾ | ಲ್ಗಡಲಿಂದ | ಬಂದ ಧ | ನ್ವಂತರಿ |
ತಂದು ತೋ | ರಿದ ಸುಧೆ | ಕಲಶ ವೆ | ಲ್ಲರಿಗು |
ಮಂದ ಬುದ್ಧಿಯ ಅಸುರ | ರೆಲ್ಲ ಸೆಳೆ | ದೊಯ್ಯಲು |

ಕಂದರ್ಪ | ಪಿತನಾಗ | ಧರಿಸಿ ಮೋಹಿನಿ ರೂಪ |
ಅಂದದ ಜರಿಗೆ | ಪೀ | ತಾಂಬರ ಕಂಚುಕ |
ಕುಂದಿದ | ನಡುವಿಗೆ | ನವರತ್ನ | ದ ಪಟ್ಟಿ |
ಕುಂದಣ | ಕೆತ್ತಿದ | ನಾನಾ | ಭರಣವು |
ಚಂದ್ರನ್ನ | ಪೋಲುವ | ಮುಖದಲಿ | ತಿಲಕವು |
ಚಂದ್ರಮು | ರುವು ಬುಗುಡಿ | ಚಳತುಂಬು | ಓಲೆಯು
ಸುಂದರ | ಮುಖುರ ಬು | ಲಾಕು ನಾ | ಸಿಕದಲ್ಲಿ |
ಮಂದಾರ | ಮಲ್ಲಿಗೆ | ಮುಡಿದ | ಸೂಸುಕ ದಿಂದ |
ಗಂಧವಾಹನ | ಬೀಸೆ | ಪರಿಮಳ | ಪಸರಿಸೆ |
ಮಂದಗ | ಮನ ದಿಂದ | ಕಂತುಕ | ವಾಡುತ್ತ |
ನಿಂದಲ್ಲಿ | ನಿಲ್ಲದೆ | ಪದವಿ | ನ್ಯಾಸದಿ |
ಅಂದುಗೆ | ಕಿರುಗೆಜ್ಜೆ | ಘಲ್ಲುಘ | ಲ್ಲೆನ್ನಲು |
ಸೌಂದರ್ಯ | ಸಾರನು | ಮುಂದೆ | ಬರುತ ಲಿರೆ |
ನಿಂದು | ನೋಡುತ ಆ | ನಂದ | ಬಡುತ | ದೈತ್ಯ |
ವೃಂದವು | ಮೋಹ ಪರ | ವಶರಾಗಿ | ಆ ಅರ |
ವಿಂದ | ಲೋಚನೆಗಿ | ತ್ತರು ಸುಧೆ ಕಲಶ |
ಇಂದು ಮು|ಖಿಯೆ ನೀನೇ | ಉಣಿಸೆಂ | ದೆ ನ್ನಲು |
ನಂದದಿ | ಶ್ರೀಹರಿ ಕಲಶ ಕೈ | ಯಲಿ ಪಿಡಿದು |
ಸುಂದರ | ಪುರುಷರೆ | ಕಣ್ಣಮು | ಚ್ಚುತ ನೀವು |
ಅಂದದಿಂ | ಬಾಯ್ಗಳ | ತೆರೆಯೆ | ಉಣಿಪೆ ನೆನಲು |
ಸಂದಣಿ ಸೇರುತ | ಅಸುರ | ದಿವಿಜರೆಲ್ಲ |
ಛಂದದ | ಮನದಿಂದ | ಗಡಿಬಿಡಿ | ಮಾಡುತ್ತ |
ಒಂದೊಂದು | ಪಂಙ್ತಿಯಾ | ಗುತ ಕು | ಳ್ಳಿರೆ ನಯದಿ |
ಇಂದಿರೇ | ಶ ಶ್ರೀ | ನಾಗೇಶ | ಶಯನನು |
ಮಂದ ದನು | ಜರ ಬಿಟ್ಟು | ವೃಂದಾರ | ಕರಿಗಿತ್ತ ||

" ವೇದವ್ಯಾಸರ ಸ್ತೋತ್ರ ತಾಮರಸ "

ರಾಗ : ಶುದ್ಧ ಬಂಗಾಳ ತಾಳ : ಝಂಪೆ

ವೇದವ್ಯಾಸ ನಿಮ್ಮ | ಪಾದ ಪದುಮಗಳ |
ಮೋದದಿಂ | ಭಜಿಸುವೆನು || ||ಪ||

ವೇದಗಳ ಸು ವಿ | ಭಾಗ ಮಾಡುತ |
ಮೇದಿನಿಯ ಸುಜ | ನರನು ಸಲಹಿದ ||
ಸಾಧುವಂದಿತ | ಬಾದರಾಯಣ |
ಆದರದಿ ನೀ | ನೆನ್ನ ಪಾಲಿಸೊ | ||ಅ.ಪ.||

ದ್ವಾಪರದಲಿ ವಿಪ್ರ | ಶಾಪ ಒದಗೆ ಜ್ಞಾನ |
ಲೋಪ ವಾ | ಗಲು ಜನಕೆ ||
ತಾಪ ಕಳೆಯುವ | ಯಮುನೆ ದ್ವೀಪದಿ |
ಆ ಪರಾಶರ | ಸತ್ಯವತಿಯಲಿ |
ಶ್ರೀಪತಿಯೆ ನೀಧನುದಿಸಿ ಬುಧರ-ನು |
ತಾಪ ಕಳೆದೆ ದ | ಯಾಪ ಯೋನಿಧೆ || 1

ಬದರಿಕಾಶ್ರಮದಿ | ಬದರಿ ವೃಕ್ಷದ ಅಡಿ |
ಪದುಮ ದಾ | ಸನ ದಿಂದ ||
ಮುದದಿ ಕುಳಿತಿಹ | ಪದುಮನಾಭನೆ |
ಪದುಮಜೆಗು, ಸು | ಜ್ಞಾನ ದಾತನೆ |
ಉದಿತ ಭಾಸ್ಕರ | ತೇಜ ಎನ್ನಯ |
ಹೃದಯ ತಮವನು | ಹರಿಸೊ ಶ್ರೀಹರಿ || 2

ಭಾನುಕೋಟಿ ಸಂ | ಕಾಶ ಸಂತಸ ಪ್ರದ |
ಆನಂದಮುನಿ | ವರದ
ಜ್ಞಾನ, ಅಭಯದ | ಮುದ್ರೆ ತೋರುತ |
ಸಾನುರಾಗದಿ | ಸುಜನ ಮನದನು |
ಮಾನಗಳ ಕಳೆ | ದೊಗೆದು ಕಾಯುವ |
ಪ್ರಾಣಪತಿ ನಾ | ಗೇಶ ಶಯನನೆ || 3

ಧನ್ವಂತರಿ ಮಂತ್ರಾರ್ಥ

ರಾಗ : ಮಧ್ಯಮಾವತಿ "ಮಾಲತಿ"

ಧನ್ವಂತ್ರಿ ದೇವ ನೀ ದಯಮಾಡೋ |
ಕರುಣದಲಿ ನೋಡೋ ||ಪ||

ನಿನ್ನನು ನಂಬಿದೆ | ಅನ್ಯರನರಿಯೆನೋ |
ಬಿನ್ನಪ ಲಾಲಿಸು | ಘನ್ನ ಮಹಿಮನೆ || ||ಅ.ಪ.||

ಆಯುಷ್ಯ, ಆರೋಗ್ಯ, ಐಶ್ವರ್ಯ |
ನಿನ್ನ ಭಕುತರಿಗೆ |
ಆವಶ್ಯವಾಗಿರುವುದು ಸಾಧನಕೆ | ನಿನ್ನನು ಸ್ತುತಿಪುದಕೆ ||
ಆನಂದವ ಕೊಡುತಿಹ ಮಧ್ವರ ಮತಕೆ | ಸೇರಿಸು ಎನ್ನ ನಿಜಕೆ
ಅನತಜನಗಳ ಆಪದಗಳ ಕಳೆ
ಆನಮಿಸುವೆ ಸುರಧೇನು ದಯಾಳೊ || 1

ಆದಿ ವ್ಯಾಧಿಗಳು ಕಾಡುತಿರಲು | ವಿಭ್ರಮ ಉನ್ಮಾದ
ಕಾದು ಭಕುತರನು ಭಾದಿಸುತಿರಲು | ನಿನಗೆ ಮೊರೆ ಇಡಲು |
ಮಾಧವ ಭಕುತರ ಅಘವನೆ ಹರಿದು | ಔಷಧಿಗಳನೆರೆದು |
ಮೋದದಿ ನೀ ದಯಮಾಡಿ ಸಲಹದಿರೆ
ಸಾಧನೆ ನಡೆಯದು ಮಾಧವ ಹರಿಯೆ || 2

ಚಂದ್ರ | ನುರುಕಾಂತಿಲಿ | ಶೋಭಿಸುತಿರುವೆ | ಅಮೃತಕಿರಣಗಳಿಂ
ಸಂಭ್ರಮದಿಂದಲಿ ಜಗವನು ಪೊರೆವೆ | ಹರ್ಷಾತ್ಮನಿರುವೆ
ಕುಂದದ ಭಕ್ತಿ, ಜ್ಞಾನವ ಕೊಡುವೆ | ಕಾಪಾಡುತಿರುವೆ
ಛಂದದ ಕಲಶದಿ ಸುಧೆಯನು ಧರಿಸುತ (ಸುರಿಸುತ)
ಸಂದದ ಜ್ಞಾನವ ಭಕುತರಿಗೆರೆವೆ || 3

ಶಿರದ್ವಾರದಿಂದ ಭ್ರೂವಿಗೆ ಇಳಿದು ತಾಲುವಿಗೆ ಸರಿದು
ಉರದಿಂದ ನಾಭಿಗೆ ಅಧರಕೆ ಹರಿದು | ಪಾಪಗಳನ್ನು ತರಿದು
ಭರದಿಂದ ಭಕುತರ ಮನವನೆ ಅರಿದು | ಸಲಹುವುದದು ಹಿರಿದು
ಉರುತರ ಪಾಪಗಳ್ಹರಿಸುತ ಅಮೃತವು
ಹರುಷವನೀಯುತ ಪೊರೆವುದು ಸುಜನರ || 4

ಅಜ್ಞಾನ, ದುಃಖ, ಭಯ, ವಿಷಗಳನು | ಪರಿಹರಿಸುತಲಿರುವೆ
ಸುಜ್ಞಾನ ಪರಸುಖ ಆನಂದಗಳ | ಅನುಭವಕೆ ಕೊಡುವಿ
ಭಗ್ನಗೈಸುತ ಉನ್ಮಾದವನು | ಬಹುವಿದ ರೋಗವನು
ಪ್ರಜ್ಞಾಪೂರ್ಣರ ಮತವನೆ ಪೊಂದಿಸಿ
ವಿಜ್ಞಾನವ ಕೊಡು ನಾಗೇಶಶಯನ || 5

" ಭಕ್ತಿ ನೈವೇಧ್ಯ ನೈದಿಲೆ "

ರಾಗ : ಚಕ್ರವಾಕ ತಾಳ : ಆದಿತಾಳ

ಏಕೆ ಊಟವನೊಲ್ಲೆ | ಗೋಕುಲ ಕೃಷ್ಣ ||ಪ||

ಬೇಕಿಲ್ಲವೆ ಈ, ಪ್ರಾಕೃತದೂಟ ||ಅ.ಪ.||

ಕಾಗೆಗೆ ಒಂದು ತುತ್ತು || ಕಪಿಲೆ ಗೊಂದು ತುತ್ತು
ಕೋಗಿಲೆ, ನವಿಲೆಗೆ ತುತ್ತೊಂದು ||
ಕೂಗುವ ಮಾರ್ಜಾಲಕೆ ಒಂದು ತುತ್ತು |
ಬೇಗನೆ ಬಾಯ್ತೆಗೆ | ಬಾಲಕೃಷ್ಣಯ್ಯ || 1

ಮಿತ್ರೆ ದ್ರೌಪದಿ ಇತ್ತ | ಅಕ್ಷಯ ದೂಟ
ಭರ್ತಿಯಾಯಿತೆ ನಿನ್ನ ಹೊಟ್ಟೆಯಲಿ ||
ಭಕ್ತೆ ಶಬರಿ ಕೊಟ್ಟ |ಪಕ್ವಫಲದ ಊಟ
ತೃಪ್ತಿಯಾಯ್ತೆ ನಿನಗೆ | ಭಕ್ತವತ್ಸಲನೆ || 2

ವಿಶ್ವಕೆ ಅನ್ನನೆ | ವಿಶ್ವವ ಭುಜಿಪನೆ |
ವಿಶ್ವವ ಪಾಲಿಪ | ಅವ್ಯಯನೆ ||
ನಿಶ್ಚಲ ಭಕ್ತಿ ಎಂಬನ್ನವನುಣಿಸುವೆ
ಈಕ್ಷಣ ಬಾಯ್ತೆಗೆ | ನಾಗೇಶ ಶಯನ 3

" ಭಕ್ತಿ ನೈವೇದ್ಯ ಧವಳೋತ್ಫಲ "

ರಾಗ : ಸಾವೇರಿ ತಾಳ : ಏಕ

ಏನ ಕೊಡಲಿ ಗೋವಿಂದ | ಸ್ವಾಮಿ
ದೀನ ರಕ್ಷಕ ಹರಿ ಸಚ್ಚಿದಾನಂದ || ||ಅ.ಪ.||

ಶಬರಿ ಕೊಟ್ಟಳು ಪಕ್ವ ಫಲವ | ಆ
ಸುಭಗೆ ದ್ರೌಪದಿ ಕೊಟ್ಟಳು ಶಾಖದಳವ ||
ಇಭರಾಜಇತ್ತ ಕಮಲವ | ಆ
ಕುಬುಜೆ ತಂದಿತ್ತಳು ಗಂಧ ಪರಿಮಳವ || 1

ವಿಪ್ರ ಅರ್ಪಿಸಿದ ಅವಲಕ್ಕಿ | ಅದ
ಒಪ್ಪಿಡಿಯಲಿ ತಿಂದು | ಕೊಟ್ಟಿಯೊ ಅರ್ಥಿ ||
ವಿಪ್ರ ಮಡದಿಯ ರಿತ್ತ ಬುತ್ತಿ | ತಿಂದು
ತೃಪ್ತನಾಗಿ ಕೊಟ್ಟಿಯೊ | ನೀನು ಮುಕ್ತಿ || 2

ಹದಿನಾಲ್ಕು ಲೋಕದೈಶ್ವರ್ಯ | ನಿನ್ನ
ಸುದತಿ ಶ್ರೀ ಲಕ್ಷ್ಮಿಯು | ಕೈಯೊಳಗೈಯು ||
ಪದುಮಜೆ ನಿನ್ನೊಶಳೈಯು | ಸ್ವಾಮಿ
ಅದುಭುತ ಶಕ್ತ ಸ | ರ್ವವು ನಿನ್ನದೈಯ || 3

ಎನ್ನ ಪತಿ ಪುತ್ರರು ಅರ್ಥ | ವೆಲ್ಲ
ನಿನ್ನನುಗ್ರಹದಿಂ | ದಿರುವುದೆಂಬರ್ಥ |
ಇನ್ನು ಪಾಲಿಸೊ ಸುಸಮರ್ಥ | ಎನ್ನ
ಕಣ್ಣಿನ ಭಕ್ತಿ ಬಿಂ | ದುಗಳೀವೆ ಮಾತ್ರ || 4

ಭೋಗ, ಭಾಗ್ಯಗಳ ಕೊಟ್ಟಿರುವೆ | ಎನಗೆ
ಯೋಗ ಮಾರ್ಗವ ತೋ | ರಲು ಮರೆತಿರುವೆ ||
ಈಗ ಅದನೆ ಬೇಡು ತಿರುವೆ | ಹರಿ
ನಾಗೇಶ ಶಯನನೆ | ಬೇಗ ನೀಡೆನಗೆ || 5

63

" ಆರೋಗಣೆ ಅರ್ಕಸುವು "

ರಾಗ : ಅಭೇರಿ ತಾಳ : ಆದಿತಾಳ

ಆರೋಗಣೆಯ ಮಾಡು | ಆನಂದ ನಿಲಯ ||ಪ||

ನೀರೆ ಲಕ್ಷುಮಿ ಒಡೆಯ | ವಾರಿಧಿಗೆ ಅಳಿಯ ||ಅ.ಪ.||

ಜನಕನರಮನೆಯಲ್ಲಿ | ಜಾನಕಿ ವಿವಾಹ | (ಯ ಸಹಿತ)
ಕನಕಮಯ ಹರಿವಾಣ | ದಲಿ ಭೋಜನ ||
ಇನಕುಲೋತ್ತುಮ ನಿನಗೆ | ದಿನಸು ದಿನಸಿನ ಭಕ್ಷ್ಯ |
ವನಿತೆಯರು ಹರುಷದಲಿ | ಬಿಡಿಸುತಿಹರೇಳು 1

ದ್ವಾರಕಾ ಪುರದಿ ಹದಿ | ನಾರು ಸಾಸಿರ ಮೇಲೆ |
ನೂರೆಂಟು ಮಹಿಷಿಯರು | ನಲವಿನಿಂದ ||
ಕ್ಷೀರಪರಮಾನ್ನ, ಶಾ | ಲ್ಯಾನ್ನ, ಸೂಪಗಳು ಸಾಂ
ಭಾರ ಪಕ್ವಾನ್ನಗಳ | ಬಡಿಸಿಹರು ಹರಿಯೆ 2

ಉಪ್ಪು, ಉಪ್ಪಿನಕಾಯಿ | ಕೋಸಂಬರಿಯು, ಪಲ್ಯ
ಉಪ್ಪೇರಿ, ಪಳದ್ಯ, ಬಹು | ಶಾಖಕೂಟ ||
ಹಪ್ಪಳಾಂಬೋಡೆ ಹೋ|ಳಿಗೆಯು ಮಂಡಿಗೆ ಫೇಣಿ |
ಅಪ್ಪ, ಅತಿರಾಸ, ಅರ | ಳಿನಉಂಡೆ ಉಣ್ಣೋ || 3

ರಾಜಸೂಯಾಧ್ವರದಿ | ರಾಜ ಧರ್ಮಜನು ತಾ |
ರಾಜಿಸುವ ಅಗ್ರಪೂ | ಜೆಯ ಗೈಯಲು ||
ರಾಜ ನರ್ಧಾಂಗಿ ದ್ರೌ | ಪದಿದೇವಿ ಭಕ್ತಿಯಿಂ |
ಭೋಜನಕೆ ಬಡಿಸಿಹಳು | ಮೂಜಗದ ಧೊರೆಯೆ || 4

ಸಾಗರನ ಭವನದಲಿ | ಭಾಗೀರಥಿಯು ಬಡಿಸೆ |
ಭೋಗದೂಟವ ನುಂಡು | ಲಕುಮಿ ಯೊಡನೆ ||
ಮಾಗಿದ ಸುಫಲಗಳನು | ಪೂಗಿಫಲ ವೀಳ್ಯವನು |
ಬೇಗನೀ ಸವಿಯೊ ಶ್ರೀ | ನಾಗೇಶಶಯನ || 5

★ ★ ★

" ಶ್ರೀ ರುಕ್ಮಿಣಿ ಕೃಷ್ಣ ಸರಸ ಸೌಗಂಧಿಕ "

ರಾಗ : ಸೌರಾಷ್ಟ್ರ ತಾಳ : ಆದಿತಾಳ

ನಾಗವೇಣಿಯರ | ನಡುವೆ ಬರುತಲಿಹ
ಯೋಗಿ ಕೃಷ್ಣನನು ಕಂಡಳು | ಸತಿ
ಬೇಗ ಮುದ್ರೆಯನು | ಜಡಿಸಿದಳು ||ಪ||

ಭೋಗಿ ಶಯನ ಹರಿ | ಭೋಗದರ ಮನೆಯ |
ಬಾಗಿಲ ಬಳಿ ನಿಂದು ನೋಡಿದ | ಹರಿ
ಭೋಗಿ ವೇಣಿಯನು ಕೇಳಿದ || ||ಅ.ಪ.||

ಬಾಗಿಲ ಬಿಗಿದಿದ್ದೀ | ಕೆಲೆ ಭಾಮಿನಿ
ಕೂಗಿ ಕರೆಯುತಿಹೆ ಬಾರೆ | ನೀ
ಬಾಗಿಲ ತೆರೆಯಲೆ ನೀರೆ ||
ರಾಗದಿ ಬೆರೆತಿಹೆ | ನಾಗವೇಣಿಯರ
ಕೂಗದೆ ಅವರೊಡ ನಾಡೈ | ರಂಗ
ಬೇಗನೆ ಇಲ್ಲಿಂದ ಸಾಗೈ || 1

ಮಣಿಯನು ಹುಡುಕುತ | ವನದಲಿ ತಿರುಗಿನಾ
ಸೆಣಸಿದೆ ಕರಡಿಯೊಳ್ | ಭಾಮಿನಿ ನಾ
ದಣಿದು ಬಂದಿಹೆನೆ ಕಾಮಿನಿ ||
ದಣಿದು ತಂದಿರುವ ಕರಡಿಯ ಮಗಳಿಗೆ
ಉಣಿಸು ಸುಖವ ನೀ ಪೋಗೈ | ರಂಗ
ರಮಿಸುತ ಅವಳನು, ಸಾಗೈ || 2

ಸತ್ರಾಜಿತ ನಿಗೆ | ಶ್ಯಮಂತ ಮಣಿ ಕೊಡೆ
ಪುತ್ರಿಯ ಕೊಟ್ಟನೆ ರಾಜ | ಈ
ಸತ್ಯೆಯ ನಿತ್ತನೆ ಭೋಜ ||
ಸತ್ಯಭಾಮೆಯನು | ಅರ್ಥಿಲಿ ಕೂಡುತ
ನಿತ್ಯದಿಸುಖಿಸಲು | ಪೋಗೈ ರಂಗ
ಉತ್ತುಮ ಸ್ತ್ರೀಯಳ ಸಾರ್ಕೈ || 3

ಲಕ್ಷಣ ವಂತಿಯು | ಲಕ್ಷುಮಿ ಆವೇಶ
ಲಕ್ಷಿಸಿ ನೋಡೆಲೆ | ನಾರಿ, ಇವಳ
ರಕ್ಷಣೆ ಮಾಡಲೆ | ಸಾರಿ ||
ಲಕ್ಷಣ ವಂತಿಯು | ಲಕ್ಷೆಗೆ ತಾರೆನು
ಇಕ್ಷುಶರನ ಜನನೀ | ನಾ | ಕೇಳ್
ಪಕ್ಷಿಗಮನ ನಿನ್ನ ರಾಣಿ || 4

ಕಾಳಂದಿಯು ಬಲು | ಕಠಿಣ ತಪದಿ ಎನ್ನ
ಓಲೈಸಿಹಳೆ ಕೇಳೆ | ಆ
ಬಾಲೆಯು ಕರುಣದಿ ನೋಡೆ ||
ಕಾಳಿಂಗ ದಮನ | ಕಾಳಂದಿಯನು
ಆಳಲು ಹರುಷದಿ | ಪೋಗೈ | ರಂಗ
ಕಾಳಾಹಿ ವೇಣಿಯ ಕೂಡೈ || 5

ಬಾಲಕತನದಲಿ | ಭಕುತಿಯ ಮಾಡುತ
ಬಾಲೆ ಭದ್ರೆ ಬಳಿ ಬಂದಳೆ | ಸತಿ
ನೀಲ ವೇಣಿ ನಿನ್ನ ಕಂಡಳೆ ||
ಬಾಲೆ ಭದ್ರೆಯಳ | ಲಾಲನೆ ಮಾಡು
ವ್ಯಾಳೆ ಯಾಯಿತು ಪೋಗೈ | ರಂಗ
ಏಳ ಲ ಮಾಡದೆ ಸಾಗೈ || 6

ಏಳು ಘೂಳಿಗಳ | ಸಾಲು ಕಟ್ಟಿನಾ
ನೀಲೆಯ ತಂದೆನೆ | ರುಕ್ಮಿಣಿ | ನಾ
ಬಳಲುತ ಬಂದೆನೆ | ಪದ್ಮಿನಿ ||
ಏಳು ಘೂಳಿಗಳ | ಬೀಳಿಸಿ ದಾತನೆ
ಬಾಳು ಅವಳೊಡನೆ | ಪೋಗೈ | ರಂಗ
ಕೀಳು ನುಡಿಯುದಲೆ | ಸಾಗೈ || 7

ಸೋದರ ಮಾವನ | ಮೋದದ ಮಗಳನು
ಆದರ ದಿಂದಲಿ ಕೊಟ್ಟರೆ | ಸತಿ
ಖೇದವಾಗುವುದು ಬಿಟ್ಟರೆ ||

ಮಾಧವ ಈಗಲೆ | ಮಿತ್ರವಿಂದೆಯು
ಸಾದರದಿಂದಲಿ ಸೇರೊ | ಹರಿ
ವಾದವ ಮಾಡದೆ ಸಾರೊ || 8

ಷೋಡಶ ಸಹಸ್ರ ಮೇಲೆ ನೂರು ಜನ
ಮಾಡಿದರು ತಪ ಕೇಳೆ | ಸತಿ
ಓಡಿ ಬಂದಿಹರು ನೋಡೆ ||
ಓಡಿ ಬಂದಿರುವ ಮೋಹದ ಸ್ತ್ರೀಯರ
ಕೂಡಿ ಸುಖವಪಡು | ಪೋಗೈ ನಲಿ
ದಾಡು ಅವರೊಡನೆ | ಸಾಗೈ || 9

ಗೋಕುಲದಲ್ಲಿಹ | ಗೋಪ ಬಾಲೆಯರು
ಆಕಳ ಪಾಲ್ಮೊಸ ರಿಟ್ಟರೇ | ಸಖಿ
ವ್ಯಾಕುಲ ಪಡುವರು ಬಿಟ್ಟರೇ ||
ಗೋಕುಲ ನಂದನ | ಗೋವರ್ಧನ ಗಿರಿ
ಜೋಕೆ ಯೆಂದೆತ್ತಲು | ಪೋಗೋ | ರಂಗ
ವಾಕು, ಸಾಕು ನೀ | ಸಾಗೋ|| 10

ಮತ್ಸರ ಬೇಡವೆ | ಮತ್ಸ್ಯನಯನೆ ನಿನ್ನ
ಮೆಚ್ಚಿಸಿ ನಡೆವರೆ ನೀರೆ | ಕೇಳ್
ಇಚ್ಛೆಯ ಪೇಳು ನೀಬಾರೆ ||
ಮತ್ಸರ ವಿಲ್ಲವೋ ಮತ್ಸ್ಯವ ತಾರನೆ
ನಿತ್ಯ ತೃಪ್ತ ನಿನ ರಾಣಿ | ಅ
ವ್ಯಕ್ತ ತತ್ವಧಭಿಮಾನಿ || 11

ಸೃಷ್ಟಿಗೊಡೆಯ ಎನ್ನ | ಕಟ್ಟಿ ಆಳುವನೆ
ಸಿಟ್ಟು ಮಾಡದೆ ಬಾರೈ | ಕೃಪ
ದೃಷ್ಟಿ ಇಂದ ಎನ ನೋಡೈ
ಇಷ್ಟುಮಾತೇಕೆ | ಅಷ್ಟು ಸ್ತ್ರೀಯರೊಳು
ಪಟ್ಟದರಸಿ ನೀ ಕೇಳೆ | ಸತಿ
ಇಟ್ಟೆ ಪ್ರೀತಿ ನಿನ ಮೇಲೆ || 12

ಹೀಗೆ ನುಡಿಗಳನು | ನುಡಿಯುತ ಭಕ್ತಿಲಿ
ಬಾಗಿಲು ತೆರೆದಳು | ರುಕ್ಮಿಣಿ |
ಬಾಗಿ ನಮಿಸಿದಳು | ಪದ್ಮಿನಿ ||
ನಾಗೇಶ ಶಯನ | ಸಾಗರ ಸುತೆಯನು
ರಾಗದಿ ಅಪ್ಪಿದ ನಾಗ | ಸಹ
ಭೋಗವ ಕೊಟ್ಟನು ಬೇಗ || 13

" ಕೃಷ್ಣ, ರುಕ್ಮಿಣಿ ಉರುಟಣೆ ವಾರಿಜ "

ರಾಗ : ಕುರಂಜಿ ತಾಳ :

ಕೃಷ್ಣ ಕಲ್ಯಾಣ | ವೈಭೋಗವೆ | ||ಪ||
ಭೈಷ್ಮಿ ಕಲ್ಯಾಣ | ವೈಭೋಗವೆ || ||ಅ.ಪ.||

ರುಕ್ಮಿಣಿಯು | ಕೃಷ್ಣನಿಗೆ | ಗೈವ ಉರುಟಣೆಯ
ಅಕ್ಕ ಬಾ ನೋಡೋಣ ವೈಭೋಗವ ||

ಮಸ್ತಕಕೆ ಇಟ್ಟಳು | ಮುತ್ತಿನ ಕಿರೀಟ
ಕಸ್ತೂರಿ ತಿಲಕ ವಿ | ಟ್ಟಳು ಫಣೆಗೆ ನಗುತ |
ರತ್ನದ ಬಟ್ಟಲಲಿ | ತಂದು ಶ್ರೀಗಂಧ
ವಿಸ್ತಾರ ದೆದೆಗೆ ಹ | ಚ್ಚಿದಳು ಮುದದಿಂದ || 1

ಹಸ್ತಿವರದನ ಕಿವಿಗೆ | ರತ್ನಕುಂಡಲವ
ಮಿತ್ರೆ ಹಾಕಿದಳು ವರ | ಮುತ್ತಿನ್ಹಾರಗಳ
ಹತ್ತು ಬೆರಳಿಗೆ ಚಿತ್ರ | ದುಂಗುರವ ತೊಡಿಸಿ
ಮತ್ತೆ ಕಂಕಣಗಳನು | ಕಟ್ಟಿ ಅಲಂಕರಿಸಿ || 2

ಉತ್ತಮ್ಮ ಪುರುಷನಸು | ಕಂಧರಕೆ ಸುರಗಿ
ನಿತ್ಯಮಲ್ಲಿಗೆ ಜಾಜಿ ಸೇವಂತಿಗಿ
ಕಿತ್ತಲೆ ಮಗಿಮಾವು | ಸುತ್ತು ವೀಳ್ಯಗಳ
ನಿತ್ಯ ತೃಪ್ತನ ಕೈಗೆ | ಇತ್ತು ತಾಂಬೂಲ 3

ಭುಜಗವೇಣಿಯು ಭೈಷ್ಮಿ | ಬೆಳಗಿ ಆರತಿಯು
ಧ್ವಜ, ವಜ್ರ, ಅಂಕುಶವ, ಪದ್ಮರೇಖೆಗಳ
ನಿಜ ಪದಗಳಲಿಕಂಡು | ಪೊಂದಿಸಂತಸವ
ಅಜ ವಂದ್ಯ ಹರಿಗೆ ಮಾ | ಡಿದಳು ವಂದನೆಯು 4

ಹಸ್ತಿನಿಯು ಪದ್ಮಿನಿ | ಮಿತ್ರೆಯರು ಕೂಡಿ
ಚಿತ್ರಿನಿ ಶಂಕಿನಿ | ಸುದತಿಯರು ಪಾಡಿ
ಅರ್ಥಿ ಇಂದಲಿ ಹಂಸ | ತೂಗು ತಲ್ಪ ದಲಿ
ಚಿತ್ತಜನ ಜನಕನ್ನ | ಭೈಷ್ಮಿ ಸಹಿತದಲಿ 5

ಸ್ತುತಿಸಿ ತೂಗುತಲಿರಲು | ನಾಗೇಶ ಶಯನ
ಹಿತದಿ ನೀಡಿದನು ವರ | ಗಳನು ಸುಖಪೂರ್ಣ

" ಡೋಲೋತ್ಸವ ನೀಲೋತ್ಪಲ "

ರಾಗ : ಕುರಂಜಿ ತಾಳ :

ತೂಗಿ ಪಾಡಿರೆ ಬೇಗ | ನಾಗವೇಣಿಯರು |
ಭೋಗಿ ತಲ್ಪದಿ ಹರಿಯ | ಶ್ರೀದೇವಿ ಸಹಿತ || ಜೋ ||ಪ||
ಅಖಿಲ ಬ್ರಹ್ಮಾಂಡವನು | ತೊಟ್ಟಿಲನು ಮಾಡಿ |
ನಿಖಿಲ ವೇದಗಳನ್ನು | ಸರಪಳಿಯ ಮಾಡಿ ||
ಬಕುಲ, ಕಮಲಗಳಿಂ | ದಲಂಕಾರ ಮಾಡಿ
ಅಕಳಂಕ ಮಹಿಮನ್ನ | ರಮೆ ಯೊಡನೆ ಕೂಡಿ || ಲಾ || 1

ಜಲಧಿ ರೂಪದಲಿ ಶ್ರೀ ದೇವಿ ತಾನಿರಲು |
ಎಲೆಯ ರೂಪದಿ ಭೂ | ದೇವಿ ಧರಿಸಿರಲು|
ಲಲನೆ ದುರ್ಗೆಯು ವೇದ | ಸ್ವರ ಪಾಡುತಿರಲು |
ಜಲಜಾಕ್ಷ ಶ್ರೀಹರಿಯ | ತೂಗುತ್ತಲಿರಲು || ||ಲಾಲಿ|| 2

ಶ್ರೀಮಾಯ, ಜಯ, ಕೃತಿ | ಶಾಂತಿ ದೇವಿಯರು |
ಸಾಮ ಗಾಯನದಿಂದ | ಹಾಡುತ್ತಲಿರಲು ||
ಆ ಮಹಾ ಬ್ರಹ್ಮಾದಿಗಳು | ಸ್ತುತಿಸುತಿರಲು |
ಕಾಮ ಜನಕನೆ ಮಲಗು | ಭಾಮೆ ರಮೆ ಸಹಿತ || ||ಜೋ|| 3

ವಿಮಲ ಉತ್ಕರ್ಷಿಣಿ | ಎಂಬ ನವರೂಪ |
ಕಮಲೆ ಧರಿಸುತ ತನ್ನ | ಹೃದಯದ ಮಧ್ಯ |
ಸುಮುದ ತೊಟ್ಟಿಲ ಗೈದು | ಹರಿಯು ಬಹುರೂಪ |
ನಮಿಸಿ ಪಾಡುತಲಿಹಳು | ಅಮಿತ ಪ್ರತಾಪ || 4

ದಶರಥನ ಸುತನಾಗಿ | ಕೌಸಲ್ಯೆ ಗುದಿಸಿ |
ಹಸುಳೆ ತನದಲಿ ತಾ | ಟಕಿಯು ಗೋಣ್ ಒರಸಿ ||
ಬಿಸಜ ಲೋಚನೆ ಜಾ | ನಕಿಯನ್ನು ವರಿಸಿ |
ಅಸಮ ದೈತ್ಯರ ಅಸುವ | ಹೀರಿ ಮೆರೆದವನೇ || ||ಲಾಲಿ|| 5

ಉಲ್ಲುರುಳಿ, ಪೈಝಣಿಯು | ಸುಸ್ವರಗಳಿಂದ |
ಘಲ್ಲು ಘಲ್ಲೆಂತ್ಹೆಜ್ಜೆ | ಇಡುತ ಮುದದಿಂದ ||
ಮಲ್ಲಿಗೆಯ ಮಾಲೆ ಪರಿ | ಮಳ ಲೇಪ ದಿಂದ
ಚೆಲ್ವಕಂಗಳ ಸೀತೆ | ಅಪ್ಪಿರುವ ಅಂದ || ||ಜೋ|| 6

ಝುಗಿಝುಗಿಪ ಸೌಭಾಗ್ಯ | ದರಸುಮನೆಯಲಿ|
ಬಗೆ ಬಗೆಯಲಂಕೃತದ | ಅತಃಪುರದಲ್ಲಿ ||
ಮಿಗೆ ಪೊಳೆವ ಕನಕನವ | ರತ್ನತಲ್ಪದಲಿ |
ಸುಗುಣೆ ಜಾನಕಿ ಯೊಡನೆ | ಮಲಗು ಹರುಷದಲಿ || ||ಲಾಲಿ|| 7

ವಸುದೇವ ದೇವಕಿಯ | ಗರ್ಭದಲಿ ಜನಿಸಿ |
ಶಿಶುವುತನದಲಿ ಪೂ | ತನಿಯ ಸಂಹರಿಸಿ ||
ಸಾಸಿರವು ಹದಿನಾರು | ನೂರೆಂಟು ಮಹಿಷಿ |
ಬಿಸ ಜಾಕ್ಷಿಯರ ವರಿಸಿ | ಹರುಷದಲಿ ಮೆರೆದೆ || ||ಜೋ|| 8

ರುಕ್ಮಿಣಿ, ಭಾಮೆಯರು | ಪಕ್ಕದಲ್ಲಿರಲು |
ಸಕ್ಕರೆ, ಫಲ, ಕ್ಷೀರ, | ಅರ್ಥಿಯಿಂ ಕೊಡಲು ||
ಮಿಕ್ಕ ರಾಣಿಯರು ತಾಂ | ಬೂಲ ಪಿಡಿದಿರಲು ||
ರಕ್ಕಸಾಂತಕ ಕೃಷ್ಣ | ಮಲಗೆನ್ನುತಿಹರೂ || ||ಲಾಲಿ|| 9
ಹದನಾಗಿ ನಿರ್ಮಿಸಿದ | ದ್ವಾರಕೆಯ ಲಿರ್ಪಿ |
ಹದಿನಾರು ಸಾವಿರದ | ನೂರೆಂಟು ರೂಪಿ ||
ಸುದತೇರು ಬಹಳೆಂಬ | ಅಚ್ಚರಿಯ ವಾರ್ತೆ |
ಮುದದಿಂದ ಕೇಳಿದೆನು | ಹರಿ ನಿನ್ನ ಕೀರ್ತಿ || ||ಜೊ|| 10

ಜೀವರರೊಳ ಹೊರಗೆ ಈ | ಜಗದ ಒಳ ಹೊರಗೆ |
ಸರ್ವಕಾಲದಲಿ ನೀ | ಎಚ್ಚರದಲಿರುವೆ||
ಭಾವಜನ ಪಿತನಿನಗೆ | ಎಲ್ಲಿಹುದು ನಿದ್ರೆ |
ಕೋವಿದರು ಆನಂದ | ಕಾಗಿ ತೂಗುವರೊ || ||ಲಾಲಿ|| 11

ಮತ್ಸ್ಯ ಕೂರ್ಮ, ವರಾಹ | ನರಸಿಂಗ ಲಾಲಿ |
ಅಚ್ಯುತ, ವಾಮನ | ಭಾರ್ಗವನೆ ಲಾಲಿ ||
ಇಕ್ಷ್ವಾಕುಕುಲ, ರಾಮ | ಶ್ರೀಕೃಷ್ಣ ಲಾಲಿ |
ಆಶ್ಚರ್ಯ ಬೌದ್ಧ, ಶ್ರೀ ಕಲ್ಕಿಯೆ ಲಾಲಿ || ||ಲಾಲಿ|| 12

ಭೋಗಿ ವೇಣಿಯರು ಆ | ವಾಣಿ, ಭಾರತಿಯು |
ನಾಗಾರಿಸತಿಸೌಪರ್ಣಿ | ವಾರುಣಿಯು ||
ನಾಗಭೂಷನ ಪ್ರಿಯೆ | ನೀರೆ ಪಾರ್ವತಿಯು |
ನಾಗೇಶ ಶಯನನ್ನ | ತೂಗಿಪಾಡಿದರು || 13

" ಸುಪ್ರಭಾತ ಸುರಗಿ "

ರಾಗ : ಬಿಲಹರಿ ತಾಳ :

ಉಪ್ಪನಡಿಸು ಶ್ರೀಹರಿಯೆ | ||ಪ||

ಸರ್ಪ ಶಯನ ಸ್ವಾಮಿ | ಶ್ರಿ ಲಕ್ಷ್ಮಿ ಧೊರೆಯೆ ||ಅ.ಪ.||

ಪಾಲ ಸಾಗರದಿಂದ | ಪಾವನ ಎದ್ದೇಳು |
ಮೇಲುಪ್ಪರಿಗೆಯಿಂ | ಮಾಧವ ಏಳು ||
ಸಾಲು ಮಂಚಗಳಿಂದ | ಸಾವಧಾನದಿ ಏಳು |
ಮಾಲಕುಮಿಯ ಕೂಡಿ | ಲೀಲೆ ಇಂದೇಳು 1

ಪುರುಷನೆಂಬುವ ಮೂರು | ರೂಪದಿಂದೇಳು
ವರ ವಾಸುದೇವ ರೂಪಕ | ಪಂಚದಿಂದ ||
ಹರಿ, ವಿಶ್ವಾದಿ ಅಷ್ಟರೂಪ | ದಿಂದೇಳು |
ಸಿರಿಮತ್ಸ್ಯ ಮೊದಲಾದ | ದಶರೂಪ ದಿಂದ || 2

ಹಂಸವೊದಲು ಅಷ್ಟಾ | ದಶರೂಪದಿಂದೇಳು |
ಕಂಸಾರಿ ಚತುರ ವಿಂಶತಿ | ರೂಪದಿಂದ|
ವಂಶಿ ಧರನೆ ಅಜಾದಿ | ರೂಪಗಳಿಂದ |
ವಿಶ್ವಾದಿ ಸಾಸಿರ ರೂಪಂಗಳಿಂದ || 3

ಶ್ರೀದೇವಿ, ಭೂದೇವಿ | ವರ ದುರ್ಗೆ ದೇವಿಯು |
ಶ್ರೀ ಮಾಯ | ಜಯಕೃತಿ | ಶಾಂತಿದೇವಿಯರು |
ಪರಮಮಂಗಳ ವೇದ | ಸ್ವರದಿಂಪಾಡುತ |
ಪುರುಷೋತ್ತುಮ ನಿನ್ನ | ನೆಬ್ಬಿಸುತಿಹರೊ || 4

ವಿಮಲ ವೊದಲು ನವ | ರೂಪಗಳನೆ ಧರಿಸಿ |
ಕಮಲಾಕ್ಷಿಯು ಪೂಜಾ | ಸಾಧನ ಪಿಡಿದು |
ಅಮಲ ಭಕ್ತಿಲಿ ನಿನ್ನ | ಸ್ತೋತ್ರಗೈಯುತಿರೆ
ಕಮಲ ನಯನ ಹರಿ | ಸುಖದಿಂದೇಳು || 5

ಪ್ರಿಯನಾಮದಿಂದೆನ್ನ | ಪ್ರಾಣದಲ್ಲಿರುವನೆ |
ಹಯ ಮುಖಹರಿ | ನೀ ಹರುಷ ದಿಂದೇಳು ||
ನಯವಾಗಿ ಎನ್ನ ಹೃ | ದಯ ಮಧ್ಯದಲ್ಲಿಹ |
ಭಯ ನಿವಾರಣ ಹೃದಯ | ನಾಮಕ ಏಳು || 6

ಬಾಗಿ ಪಾಡುತಿಹರು | ನಾರದ ತುಂಬುರು |
ನಾಗೇಶ ಶಯನನೆ | ನಗುತ ನೀನೇಳು ||
ನಾಗಾರಿ ವಾಹನ | ನಾಗ ತಲ್ಪ ಶಾಯಿ |
ಸಾಗರ ಸುತೆ ಸಹಿತ | ಬೇಗನೆ ಏಳು || 7

★ ★ ★

" ಸದುಪಾಸನಾಮಾರ್ಗ ಗಿರಿ ಕರ್ಣಿಕಾರ "

ರಾಗ : ಖರಹರ ಪ್ರಿಯ ತಾಳ : ಆದಿತಾಳ

ಕೋಲು ಕೋಲೆನ ಕೋಲೆ | ರನ್ನದ
ಕೋಲು ಕೋಲೆನ ಕೋಲೆ ||ಪ||
ಶ್ರೀಲೋಲನ ಸದುಪಾಸನೆ ಗೈಯುವ | ಮಾರ್ಗವ ತಿಳಿ ಕೋಲೆ ||

ಶ್ರೀಮಾತೆಯು ಹರಿಯ | ತನ್ನಯು
ಪ್ರೇಮದ ಪತಿ, ಗುರುವು ||
ಸ್ವಾಮಿ ಎಂದರಿದು ಪಾಸನೆ ಗೈವಳು | ಕೋಲೆನ ಕೋಲೆ | 1

ಅಜ, ಪ್ರಾಣರು, ಹರಿಯ | ತನ್ಮಯು
ನಿಜ ಗುರು, ಪಿತನೆಂದು ||
ಭಜಿಸುತ ಮೋಕ್ಷವ ಪೊಂದಿ | ಸುಖಿಸುವರು || ಕೋಲೆನ ಕೋಲೆ | 2

ವಾಣಿ, ಭಾರತಿಯರು | ಹರಿಯನು
ಜಾಣ ಗುರುವು ಎಂದು ||
ಮಾನಿ ಸ್ವಶುರ ನೆಂದೆನುತಲು ಪಾಸನೆ | ಗೈವರು ತಿಳಿ | ಕೋಲೆ 3

ಗರುಡ, ಶೇಷ, ರುದ್ರಾದಿಗಳು |
ಪರಮ ಪುರುಷ ಹರಿಯ ||
ಪರಮ ಗುರು, ಪಿತಾಮಹನೆನ್ನುವರು || ಕೋಲೆನ ಕೋಲೆ || 4

ಶಕ್ರಾದ್ಯಮರಗಣ | ಪರಮನು
ಭಕ್ತಿ ಇಂದ ಭಜಿಸಿ ||
ಶಕ್ತಸ್ವಾಮಿ, ಗುರು, ಪಿತಾಮಹನು ಎಂದರಿವರು ತಿಳಿಕೋಲೆ || 5

ಕೆಲವು ಅಪ್ಸರಿಯರು | ಕಾಮದ
ಲಲಿತ ಭಕ್ತಿ ಇಂದ ||
ಜಲರು ಹೇಕ್ಷಣನ ಪತಿ ಭಾವದಲಿ ಭಜಿಪರು ತಿಳಿ ಕೋಲೆ || 6

ಗೋಪಿಕೆಯರು ಆಗಿ | ಸತಿಯರು
ಗೋಪ ಸುತನ ಕೂಡಿ ||
ಶ್ರೀಪತಿ ಎಂದೇ ತಿಳಿದು ರಮಿಸಿದರು || ಕೋಲೆನ ಕೋಲೆ 7

ಆ ಸಮಯದಿ ಸಿರಿ ಆ | ವೇಶದಿ
ಆ ಸತಿಯರೊಳಿದ್ದು||
ಶ್ರೀಶನಿಂದ ಸುಖಪಡೆದು, ಅವರಿಗದ | ನುಣಿಪಳು ತಿಳಿ || ಕೋಲೆ 8

ಶ್ರೀರಮೆಗಲ್ಲದಲೆ | ಹರಿ ರತಿ |
ಯಾರಿಗು, ಸಲ್ಲದದು ||
ಮಾರ ಪಿತನು ತಾ, ಸ್ವರಮಣ | ಸುಖನಿಧಿ ರಮೆಗೆ
ಸುಖದ || ಕೋಲೆ || 9

ಭೂತಳ ದೊಳಗಿರುವ | ಸುಜನರು |
ಖ್ಯಾತ ಹರಿಯ ಧ್ಯಾನ ||
ದಾತ, ಗುರುವು, ಪ್ರಪಿತಾಮಹನೆನ್ನುತ ಭಜಿಪುದು ತಿಳಿ ಕೋಲೆ || 10

ಪ್ರಮದೆಯರೆಲ್ಲರಿಗು | ಉಪಾಸನೆ |
ರಮೆಯುರಸನ ಧ್ಯಾನ ||
ಕ್ರಮವದು ಪ್ರಪಿತಾಮಹನೆನ್ನುತ ಧ್ಯಾನಿಪುದು ವಿಹಿತ || ||ಕೋಲೆ|| 11

ಸದ್ಗುರುಗಳ ಪಡೆದು | ಉಪಾಸನೆ
ಮಾರ್ಗವನ್ನು ಅರಿದು ||
ಯೋಗ್ಯತೆ ಮೀರದು ಪಾಸನೆ ಗೈಯಲು ಒಲಿವ ಹರಿಯು ||ಕೋಲೆ|| 12

ಜ್ಞಾನಗಮ್ಯ ಹರಿಯ | ಉಪಾಸನೆ |
ಜ್ಞಾನದಿಂದ ಗೈಯೆ ||
ಶ್ರೀನಾಗೇಶ ಶಯನನು ಕರುಣದಿ ಕೊಡುವ ಮೋಕ್ಷ ಕೋಲೆ || 13

" ಕರಾವಲಂಬನ ಸ್ತೋತ್ರ "

ರಾಗ : ಉದಯ ರವಿಚಂದ್ರಿಕ ತಾಳ : ಆದಿತಾಳ

ಕ | ರಾವಲಂಬನವ ಕೊಡೊ | ಕೇಶವ ಪುರುಷೋತ್ತಮ |
ಕ | ರಾವಲಂಬನವ ಕೊಡೊ | ಮಾಧವ ಮಧು ಸೂಧನ || ||ಪ||

ಕ | ರಾವಲಂಬನವ ಕೊಡೊ | ಕಪೀಂದ್ರವರದ ರಾಘವ |
ಕ | ರಾವಲಂಬನವ ಕೊಡೊ | ಕುಚೇಲ ವರದ ಯಾದವ || 1

ಪದುಮೆಯುರಸ | ಎನ್ನಹೃದಯ | ಸದನದಲ್ಲಿರುವನೇ |
ಮದನಕೋಟಿ | ಸುಂದರ ರವಿ | ಉದಯವಾಯ್ತು | ಬೇಗನೆ || 2

ಘೋರ ಭವಾಂಬುಧಿಯ ಮಧ್ಯ | ತೂರಿ ಪೋಗುತ್ತಿರುವೆನೊ | ಅ
ಪಾರ ಕರುಣನಿಧಿ ಎನ್ನ,ಸು | ತೀರ ಸೇರಿಸುವುದಕೆ || 3

ದ್ವಾರಕೇಶ ನಿನ್ನ ಪಾ | ದಾರವಿಂದ ಭಜಿಪ | ವಿ
ಸ್ತಾರಮತಿಯ ಕರುಣಿಸಿ, ಸಂ | ಸಾರ ಭಯುವ ಹರಿಸಲು || 4

ಕ | ರಾರವಿಂದವನ್ನು ಗಂ | ಭೀರ ಎನ್ನ ಶಿರದೊಳಿಡು,
ಸು | ವೀರ ನಾಗೇಶ ಶಯನ | ಸಾರ ಸುಗುಣ ಸಾಂದ್ರನೀ || 5

" ಭೀಮರಥಿ ಶಾಂತಿ ಪ್ರಾರ್ಥನಾ "

ರಾಗ : ಆನಂದ ಭೈರವಿ ತಾಳ : ಛಾಪುತಾಳ

ಎನಗಾಯ್ತು – ಎಪ್ಪತ್ತು ವರ್ಷ | ಕೇಳೊ ಪುರುಷ |
ಮನದಿ ಪುಟ್ಟದು ವೈರಾಗ್ಯ ಅರೆ ನಿಮಿಷ | ||ಪ||

ಪತಿ, ಪುತ್ರರಲಿ ಬಹು ಮೋಹ | ಬಹು ಪ್ರೇಮ |
ರತಿ, ಪತಿ, ಪಿತ ಮರೆತೆನೊ ನಿನ್ನ ಧ್ಯಾನ ||
ಪತಿತ ಪಾವನ ನಿಮ್ಮ ನಾಮ | ಪಾಡ್ವ ನೇಮ |
ಮತಿಕೊಟ್ಟು ಸಲಹಯ್ಯಾ ಶ್ರೀರಘು ರಾಮ || 1

ಮಧ್ವ ಶಾಸ್ತ್ರವ ನೋಡಲಿಲ್ಲ | ಕೇಳಲಿಲ್ಲ |
ಬಿದ್ದು ಅಡಗಿತು ಅರಿಯುವ ಶಕ್ತಿ ಎಲ್ಲ ||
ರೌದ್ರ ರೋಗವು ಬಂದಿ ತಲ್ಲ | ಬಿಡದಲ್ಲ |
ಪದ್ಮಿನಿ ಪತಿ ನೀನೆ ಸಲಹ ಬೇಕಲ್ಲ || 2

ಧನ, ಧಾನ್ಯ, ಸಂಪತ್ತುಗಳನು | ಕೊಟ್ಟೆ ನೀನು |
ಅನುವಾಗಿ ಸಾಧನ ಮಾಡದೆ ನಾನು ||
ಕನಸಿನಂತಿಹ ದೇಹವನ್ನು | ನಂಬಿ ಇನ್ನು |
ಕನಲಿ ಬೆಂಡಾದೆನು ಕಾಪಾಡು ಇನ್ನು || 3

ಸುಜನರ ಸಂಗದಲ್ಲಿರಿಸೊ | ಭಯ ಬಿಡಿಸೊ |
ನಿಜವಾದ ಭಕ್ತಿ ಜ್ಞಾನಗಳನ್ನು ಕೊಡಿಸೊ ||
ವಿಜಯ ಸಾರಥಿ ಪಾಪ ದಹಿಸೊ | ಎನ್ನ ಕ್ಷಮಿಸೊ |
ಗಜರಾಜ ವರದ ಕೈಪಿಡಿದು ಉದ್ಧರಿಸೊ || 4

ನಾಗಾದ್ರಿ ವಾಸ ನರಹರಿಯೆ | ಕೇಳೊ ಧೊರೆಯೆ |
ನೀಗು ಎನ್ನ ದೋಷ | ಅನ್ಯರನ್ನರಿಯೆ ||
ನಾಗೇಶ ಶಯನನೆ ಸರಿಯೆ | ಎನ್ನ ತೊರೆಯೆ |
ನೀ ಮಾಡಿದುಪಕಾರ ಎಂದಿಗೂ ಮರೆಯೆ || 5

" ಎಚ್ಚರಿಕೆ ಚೋರಪುಷ್ಪ "

ರಾಗ : ಕಾಂಬೋಧಿ ತಾಳ :

ಎಚ್ಚರಿಕೆ ನಿನಗೇಕೆ | ಬರಲಿಲ್ಲ ಮನವೆ | ||ಪ||

ಅಚ್ಯುತಾನಂತ ಹರಿ | ಸರ್ವ ಕರ್ತನು ಎಂಬ || ||ಅ.ಪ.||

ಜನನಿ, ಪಿತ, ಭೂ, ವಾರಿ | ದಾಂಬರದಿ ನೆಲೆಸಿದ್ದು |
ಅನಿರುದ್ಧ ನಿನ್ನನ್ನು | ತಂದ ಧರೆಗೆ ||
ಅನುವಾಗಿ ಗರ್ಭದಲಿ | ಉಣಿಸಿ ರಕ್ಷಿಸುತಿಹನು |
ಜನಿಸಿದಾಕ್ಷಣದಿ ಆ | ಶ್ರಿಯ ನೀವನೆಂತೆಂಬ || 1

ಮೇಲ್ಹೊದೆದ ಚರ್ಮದಲಿ | ತಾನೆ ವ್ಯಾಪ್ತನು ಆಗಿ |
ಮೂಳೆ, ಮಾಂಸಗಳಲ್ಲಿ | ತಾನೆ ಇದ್ದು ||
ಕೀಲುಗಳು, ರಕ್ತ, ನರ | ಕೇಶಕೂಪಗಳಲ್ಲಿ |
ಏಳು ಧಾತುಗಳಲ್ಲಿ | ಸ್ಥಿತ ನಿರುವನೆಂತೆಂಬ || 2

ಪಿತ, ಮಾತೆಯರಲಿದ್ದು | ಪತಿ, ಪುತ್ರರೊಳಗಿದ್ದು |
ಸತತ ಹಿತಗೈವ ಗುರು | ವಿನಲಿ ಇದ್ದು ||
ಮತಿ, ಧನವು, ಧಾನ್ಯ | ಸಂತಾನಗಳ ಕೊಟ್ಟು, ಸ
ದ್ಗತಿಯ ಪೊಂದಿಸಲು ಶ್ರೀ | ಪತಿ ಇರುವನೆಂತೆಂಬ || 3

ಪತಿಸೇವೆ ಗೈವಾಗ | ಸುತರ ಲಾಲಿಸುವಾಗ |
ಅತಿಥಿಗಳ ಸತ್ಕಾರ | ಮಾಡುವಾಗ ||
ಹಿತದ ಭೋಜನ, ಪಾನ | ದಾನ, ಧರ್ಮದ ವ್ಯಾಖ್ಯ |
ರತಿಪತಿಯ ಪಂಚರೂ | ಪವ ಸ್ಮರಿಸಬೇಕೆಂಬ || 4

ಈ, ತನುವ ಬಿಡುವಾಗ | ಮಾತರಿಶ್ವನ ಕೂಡಿ |
ಶ್ರೀತರುಣಿ ವಲ್ಲಭನು | ನಿನ್ನ ಬಿಡದೆ ||
ಆತುಕೊಂಡೇ ಇದ್ದು | ಕಾಲ, ಸ್ಥಳ, ದೇಹದಲಿ |
ಆತುರದಿ ಪೊರೆವ ನಾ | ಗೇಶ ಶಯನನು ಎಂಬ || 5

" ಸ್ಥಿರ ಭಕ್ತಿಯ ಬೇಡಿಕೆ ಭಂಡೂಕ ಪುಷ್ಪ "

ರಾಗ : ಉದಯರವಿ ಚಂದ್ರಿಕ ತಾಳ : ಆದಿತಾಳ

ನಿಲ್ಲದೊ ಎನ್ನಮನ | ನಿನ್ನ ಪದದಲ್ಲಿ | ||ಪ||
ಎಲ್ಲೆಲ್ಲೊ ಅಲೆದಾಡಿ | ಬಳಲುತಿದೆ ಬಲ್ಲಿ || ||ಅ.ಪ.||

ತನುವು ಆವರಿಸುತಿದೆ | ಎನ್ನ ಹೃದಯದಲಿ |
ಮಮತೆಯಲಿ ಪೋಷಿಸುವ | ಗುರು ಸರಿದ ಬಲ್ಲಿ ||
ಸುಮನಸರು ಮೌನದಿಂ | ದಿಹರು ದೇಹದಲಿ |
ರಮೆಯರಸ ಎನ್ನ ಮೊರೆ | ಕೇಳು ತ್ವರಿತದಲಿ || 1

ಕಂತುಪಿತ ಕೇಳು ದು | ರ್ವಾಕುಲ ಗಳಿಂದ |
ಚಿಂತಿಸುತ ಬಳಲಿ ಬೆಂ | ಡಾದೆನೊ ಮುಕುಂದ ||
ಅಂತರಂಗದ ಬಹಳ | ಅನುಮಾನ ಹರಿದು |
ಸಂತವಿಸು ಶ್ರೀಕೃಷ್ಣ | ಜ್ಞಾನಸುಧೆ ಎರೆದು || 2

ಅಜ್ಞಾನ ವಿಪರೀತ | ಜ್ಞಾನ ಸಂಹರಿಸೊ |
ಸುಜ್ಞಾನ ವಿಜ್ಞಾನ | ನೀನೊಲಿದು ಉಳಿಸೊ |
ಯಜ್ಞಪತಿ ಎನ್ನ, ಕ | ರ್ಮಗಳ ಸ್ವೀಕರಿಸೊ |
ಪ್ರಜ್ಞಾಪತಿಯೆ ಕೈ | ಪಿಡಿದು ಉದ್ಧರಿಸೊ || 3

ಸಂಶಯು ವಿಪರ್ಯಗಳು | ಬಾಧಿಸುತಲಿಹವೊ |
ಹಿಂಸೆ ಪಡಿಸುತಲಿಹುದು | ಅಧಮ ಸಂಸ್ಕಾರ |
ಕಂಸ ಮರ್ದನ ಕೃಷ್ಣ | ಕರುಣದಿಂ ನೋಡು |
ಹಂಸವಾಹನ ಜನಕ | ನೀ ದಯವ ಮಾಡು || 4

ದುರಭೀಷ್ಟ ಸಂತಾಪ | ಕಳೆವ ಚಂದಿರನೆ |
ಉರುತರದ ಹೃತ್ತಮವ | ಹರಿವ ಭಾಸ್ಕರನೆ |
ಕರುಣದಿಂ ಪೊರೆವ, ಗುರು | ಜನನಿ, ಪಿತ, ನೀನೆ |
ವರದ ನಾಗೇಶ ಶಯ | ನನೆ ಪೂರ್ಣಗುಣನೆ || 5

" ವೈರಾಗ್ಯ ವಿರಜಾಜಿ "

ರಾಗ : ಸುವ್ವಿ ಮಟ್ಟು ತಾಳ :

ಜಯ ಜಯತು ಶ್ರೀಲೋಲ | ಜಯ ಜಯತು |
ವನಮಾಲ | ಜಯ ಜಯತು ಸುರಪಾಲ ಜಯತು ವಿಮಲ || ||ಪ||

ಜಗದ ಸೃಷ್ಟ್ಯಾದ್ಯಷ್ಟ್ಯಕರ್ತ | ಜಗದೀಶ ಹರಿಯೆ ನಿನ್ನ |
ಮಗಳೆಂದು ಎನ್ನನುಡಿ | ಬಗೆಯ ಲಾಲಿಸೊ || 1

ಘನ್ನವಾದ ರಜವು, ತಮವು | ಎನ್ನುವ ಆವರಣವನ್ನು |
ಮುನ್ನ ಸುಟ್ಟು ಬೂದಿಮಾಡಿ | ಎನ್ನರಕ್ಷಿಸೊ || 2

ಚಿನ್ಮಯಾನಂದ ಹರಿಯೆ | ನಿನ್ನ ಸ್ತೋತ್ರಮಾಡುವಂಥ |
ಮಾನ್ಯಜನರ ಸಾನ್ನಿಧ್ಯ | ವನ್ನು ಕಲ್ಪಿಸೊ || 3

ದೇವ ಶ್ರೀಹರಿಯೆ ನಾನು | ಜೀವನದಿ ಮಾಡಿದಂಥ |
ಯಾವ ಯಾವ ಕಾರ್ಯವಿರಲಿ | ನಿನಗೆ ಅರ್ಪಿತ || 4

ಭಾವಶುದ್ಧಿ ಇಲ್ಲದಿರಲು | ಸಾವಿಗಂಜಿಕೆ ಬಹುದು |
ದೇವ, ಹೃದಯ ಶುದ್ಧಿಮಾಡಿ | ಭಯವ ತಪ್ಪಿಸೋ || 5

ಎನ್ನ ಮರಣ ಕಾಲದಲ್ಲಿ | ಸನ್ನುತಾಂಗ ಎನ್ನಸುತ್ತ |
ನಿನ್ನ ಭಕ್ತಿ ಎಂಬ ಆ | ಆವರಣ ಕಲ್ಪಿಸೊ || 6

ಪ್ರಾಣ ಸರಿವಕಾಲ ಮುಖ್ಯ | ಪ್ರಾಣಾಂತರ್ಗತ ನಿನ್ನ |
ಕಾಣುವಂಥ ಭಾಗ್ಯವನ್ನು | ನೀನೆ ಕರುಣಿಸೊ || 7

ಮಾರುತನು ಹರಿಯೆ ನಿನ್ನ | ಬಲದ ಭುಜದಿಧರಿಸಿ, ಎನ್ನ |
ಕಾರುಣ್ಯದಿಂದ ಎಡದ | ಹೆಗಲಲ್ಲೇರಿಸಿ || 8

ಕೂಡ್ರಿಸಿಕೊಳ್ಳುತ್ತ ಈ | ಗೂಡು ಬಟ್ಟು ಪೋಗುವಾಗ |
ನೋಡಿ ಎನ್ನ ಕಡೆಗೆ ನೀ | ನೀಡು ಜ್ಞಾನವ || 9

ಯಾವಯಾವಕಾಲಕ್ಕು | ದೇವನೀನೆ ಜನಕ, ರಾ |
ಜೀವ ಸದನೆ ಲಕ್ಷ್ಮಿಎನ್ನ | ಪೊರೆವ ಜನನಿಯು || 10

ಕಾವ, ಕೊಲ್ಲುವುದೆಲ್ಲ | ಶ್ರೀ ವರನೆ ನಿನ್ನ ಕಾರ್ಯ |
ಈ ವಿಧದ ವಿಶ್ವಾಸ | ಧೃಡವಗೈಸೆಲೊ || 11

ರಾಜಾಧಿ ರಾಜನೆ | ರವಿ ಕೋಟಿ ತೇಜನೆ |
ಮೂಜಗವ ರಕ್ಷಿಸುವ | ವಾಜಿ ವದನನೆ || 12

ದಿನದಿನಕೆ ಎನ್ನ ಕಾಯ | ಸವೆದು ಪೋಗುತ್ತಲಿದೆ|
ಕೊನೆಗೆ ನೀನೆ ಕಾಯೊ ನಾ | ಗೇಶ ಶಯನ || 13

" ಮಂಗಳ ಅರ್ಕಸುಮ "

ರಾಗ : ಸುರಟಿ ತಾಳ : ಛಾಪುತಾಳ

ಮಂಗಳಂ ಜಯ ಮಂಗಳಂ ||ಪ||

ಆರುತಿ ಎತ್ತಿರೆ | ಅರವಿಂದ ನಾಭಗೆ |
ಆರುತಿ ಬೆಳಗಿರೆ | ಅನಪೇಕ್ಷಗೆ ||
ನೀರಜಮುಖಿಯರು | ನೀರಾಜನ ಹಚ್ಚಿ |
ಮಾರ ಜನಕನಿಗೆ | ಮಹಲಕ್ಷುಮಿಗೆ || 1

ಏಕಮೇವನಿಗೆ | ಏಕಾರತಿ ಮಾಡಿ |
ಜೋಕೆ ಇಂದಲಿ ಜೋ | ಡಾರುತಿಯ ||
ರಾಕೇಂದು ವದನಗೆ | ಓಕುಳಿಯಾರುತಿ |
ಸಾಕಾರೆಗೆ ಮಾಡಿ | ಶೇಷಾರತಿಯ || 2

ಹಸ್ತಿ, ವರದನಿಗೆ | ಮುತ್ತಿನ ಆರುತಿ |
ಸತ್ಯ ಸಂಕಲ್ಪಗೆ | ಮತ್ಸ್ಯಾರುತಿ ||
ನಿತ್ಯ ತೃಪ್ತನಿಗೆ | ಕಚ್ಛಪ ದಾರುತಿ |
ಮುತ್ತೈದೆಯರು ಪಾ |ಡುತ ಭಕ್ತಿಯಲಿ || 3

ನಂದನ ಸುತಗೆ ಬೃಂ | ದಾವನ ದಾರುತಿ |
ಇಂದಿರೆ ಪತಿಗೆ ಗಿಂ | ಡಿ ಆರುತಿ ||
ಸುಂದರ ಶ್ರೀ ನಾ | ಗೇಶ ಶಯನನಿಗೆ |
ನಿಂದು ಬೆಳಗಿರೆ, ಕ | ರ್ಪೂರದಾರುತಿಯ|| 4

" ಮಂಗಳಂ ಶಿವಮಲ್ಲೀ "

ರಾಗ : ಮಧ್ಯಮಾವತಿ   ತಾಳ : ಛಾಪುತಾಳ

ಆರುತಿ ಬೆಳಗಿರೆ | ಅನಿರುದ್ಧಗೆ || ಮಂಗ
ಳಾರುತಿ ಎತ್ತಿರೆ | ಅಂಭ್ರಣಿಗೆ|| ||ಪ||

ಆರುತಿ ಮಾಡಿರೆ | ಅಚ್ಯುತನಿಗೆ, ಕದ
ಲಾರುತಿ ಬೆಳಗಿರೆ | ಆದಿ ಲಕ್ಷುಮಿಗೆ || ||ಅ.ಪ.||

ಅರುಣಾಬ್ಜ ಪೋಲುವ | ಚರಣಕ್ಕೆ ಆರುತಿ |
ವರಜಾನು ಜಂಘೆಗೆ | ಮೆರೆವಾರತಿ ||
ಮೆರೆವ ಊರು ಕಟಿ | ತ್ರಿವಳಿಯ ಉದರಕ್ಕೆ |
ಸರಸಿಜನಾಭಿಗೆ | ಜೋಡಾರತಿಯ || 1

ಕೌಸ್ತುಭ ಹಾರಾಲಂ | ಕಾರದ ವಕ್ಷಕ್ಕೆ |
ಭಕ್ತರ ಪೊರೆಯುವ | ಭುಜಗಳಿಗೆ ||
ಅರ್ಥಿಇಂದ ಚಕ್ರ | ಶಂಖ, ವರಾಭಯ |
ಹಸ್ತಗಳಿಗೆ, ಎ | ತ್ತಿರೆ ಆರುತಿಯ || 2

ಶ್ರುತಿಗಳು ನೆಲೆಸಿಹ | ಶುಭವಾದ ಕಂಠಕೆ |
ಅತಿ ಶೋಭಿಸುತಿಹ | ಅಂಬಕಕೆ ||
ಸ್ಮಿತವದನಕೆ, ಭಕ್ತ | ಸಂತಾಪ ಕಳೆಯುವ |
ಅತಿ ಕಾರುಣ್ಯ ಸೂ | ಸುವ ಕಂಗಳಿಗೆ|| 3

ಕಂದರ್ಪ ಕೋದಂಡ (ಕಾರ್ಮುಕ) | ನಿಭ ಸುಭ್ರೂವಿಗೆ |
ಗಂಧವ ಬೀರುವ | ನಾಸಿಕಕೆ ||
ಸುಂದರ ಕುಂಡಲ | ವಿಟ್ಟ ಕರ್ಣಗಳಿಗೆ |
ಕುಂದ ಕುಟ್ಮಲದಂ | ತಿಹ ದಂತಗಳಿಗೆ || 4

ಕಸ್ತೂರಿ ತಿಲಕ ಸು, | ಶೋಭಿತ ಫಾಲಕೆ |
ರತ್ನಪ್ರಭಾನ್ವಿತ | ಮುಕುಟಕ್ಕೆ ||
ಮಿತ್ರೆ ಲಕ್ಷುಮಿ ನಾಥ | ಮಾತರಿಶ್ವ ಪ್ರೀತ |
ಕರ್ತ ಶ್ರೀ ನಾಗೇಶ | ಶಯನ ಮೋಹನನಗೆ|| 5

" ಪ್ರಾಣದೇವರ ಮಂಗಳ ಶತಪ್ರಾಸ "

ರಾಗ : ಭೈರವಿ ತಾಳ : ಛಾಪು ತಾಳ

ಜಯಮಂಗಳಂ ನಿತ್ಯ ಶುಭ ಮಂಗಳಂ | ||ಪ||

ಸೀತೆಗುಂಗುರ ವಿತ್ತು | ಪ್ರೀತಿ ಪಡಿಸಿದವನಿಗೆ |
ಖ್ಯಾತ ವನವನು ಕಿತ್ತಿ | ತೂರಿದವಗೆ ||
ಪಾತಕರ ಒಡೆಯ ಆ | ಪಾಪಿ ರಾವಣನ ಪುರ |
ವೀತಿ ಹೋತ್ರನಿಗೆ ಉಣಿ | ಸಿದ ಹನುಮಗೆ || 1

ಮೂರನೆಯ ಯುಗದಲ್ಲಿ | ನೀರೆ ಕುಂತಿಗೆ ಜನಿಸಿ |
ಕ್ರೂರ ರಕ್ಕಸರ ಅಸು | ಹೀರಿ ದವಗೆ ||
ವಾರಿ ಜಾನನೆ ದ್ರೌ | ಪದಿಗೆ ಮೋದವ ನಿತ್ತ |
ಮಾರಜನಕನ ದೂತ | ವೀರ ಭೀಮನಿಗೆ || 2

ನಾಲ್ಕನೆಯ ಯುಗದಿಪಾ | ಜಕದಲ್ಲಿ ಜನಿಸಿದಗೆ |
ಜೋಕೆಯಲಿ ದ್ವೈತಾರ್ಥ | ಬೋಧಿಸಿದಗೆ ||
ಶ್ರೀಕಾಂತ ಹರಿಯೆ, ಸ | ರ್ವೋತ್ತಮನು ಎಂತೆಂದು |
ಲೋಕಕ್ಕೆ ಒರೆದ ಜೀ | ವೋತ್ತಮನಿಗೆ || 3

ಜೀವ, ಜೀವಕೆ ಭೇದ | ದೇವ, ಜಡ, ಜಡ ಭೇದ |
ದೇವ, ಜೀವರ ಭೇದ | ಜೀವ, ಜಡಕೆ ||
ಈ ವಿಧದ ಪಂಚ ಭೇ | ದಗಳನ್ನು ತೋರುತ್ತ |
ಕೋವಿದರ ಪೊರೆವ ಕವಿ | ಕುಲ ತಿಲಕಗೆ || 4

ಹರಿ, ಸಿರಿಯು, ವಾಯು, ಸುರ | ತರತಮವ ತೋರಿದಗೆ |
ಮೆರೆವ ಈಜಗ ಸತ್ಯ | ವೆಂದವನಿಗೆ ||
ಕರಿವರದ ನಾಗೇಶ | ಶಯನಗತಿ ಪ್ರಿಯನಾದ |
ಗುರುಪೂರ್ಣ ಪ್ರಜ್ಞಮುನಿ | ಪಾದಗಳಿಗೆ || 5

★ ★ ★

" ಮಂತ್ರ ಪುಷ್ಪಾಂಜಲಿ ಕುಸುಮ "

ರಾಗ : ಯಮುನ್ ಕಲ್ಯಾಣಿ ತಾಳ : ಆದಿತಾಳ

ಚೆಲ್ಲಿರೆ ಸುಮಗಳ | ಚದುರನಿಗೆ | ಸಿರಿ
ವಲ್ಲಭ ರುಕ್ಮಿಣಿ | ರಮಣನಿಗೆ || ||ಪ||

ಪುಲ್ಲನಯನನಿಗೆ | ಪುರುಷೋತ್ತಮಗೆ |
ಪುಲ್ಲಾಕ್ಷಿಯರನು | ಸಂಧಾನದಿಂದ || ||ಅ.ಪ.||

ಮಲ್ಲಿಗೆ, ಮಾಲತಿ | ಸೌಗಂಧಿಕ |
ಕಲ್ಹಾರ, ಕೇದಿಗೆ | ಸೇವಂತಿಕ ||
ಮಲ್ಲೆ, ಮನೋಹರ | ಮಾಧವಿ, ಚಂಪಕ |
ಗೊಲ್ಲ ನಂದನನಿಗೆ | ಇರುವಂತಿಕ || 1

ಅರವಿಂದ, ಸುರಗಿ | ಕರವೀರ |
ಮರುಗ, ಶಿರೀಷವು | ಕೋಕನದ ||
ಅರಳಿದ ಪಾದರಿ | ಪಾರಿ ಜಾತವ |
ಮುರಹರ ಕ್ರಿಷ್ಣಗೆ | ಮಡದಿಯು ರೆಲ್ಲ || 2

ನಂದಕುಮಾರಗೆ | ಮಂದಾರ |
ಸುಂದರ ಶ್ರೇಷ್ಟಗೆ | ಇಂದೀವರ ||
ಗಂಧವಾಹನನು | ಚಂದದ ಸುಮಗಳ |
ಇಂದಿರೆ ರಮಣ ಗ | ರ್ಪಿಸುತಿಹನೆಂದು || 3

ವಸುಧೆಯು ತನ್ನಲಿ | ಧರಿಸಿರುವ |
ಎಸೆವ ಸುಗಂಧದ | ಪುಷ್ಪಗಳ ||
ಕುಸುಮ ಶರನ ಪಿತ | ಭೂವರಾಹಗೆ |
ಅಸಮ ಭಕುತಿಯಲಿ | ಸಲಿಸುವಳೆಂದು || 4

ಹದಿನಾರು ಸಾವಿರ | ನೂರೆಂಟು |
ಸುದತಿಮಣಿಯರ ವ | ನಿಗೆ ಉಂಟು ||
ಮುದದಲಿ ಸತಿಯರ | ಮಧ್ಯದಿ ಮೆರೆಯುವ |
ಮದನ ಮೋಹನನ | ಹೃದಯ ದೊಳಿರಿಸಿ || 5

ರಾಜಸೂಯದ ಅ | ಧ್ವರದಲ್ಲಿ |
ರಾಜ ಧರ್ಮಸತಿ | ಯೊಡ ಗೂಡಿ ||
ರಾಜ ರಾಜೇಶ್ವರ | ರಾಜೀವಾಕ್ಷನ |
ಪೂಜಿಸು ತಿಹ ನೆಂ | ದರಿದು ಭಕುತಿಯಿಂ || 6

ಮತ್ಸ್ಯ, ಕೂರ್ಮ, ಕಿಟಿ | ನರಹರಿಗೆ | ಭಕ್ತ
ವತ್ಸಲ, ವಾಮನ | ಭಾರ್ಗವಗೆ ||
ಲಕ್ಷ್ಮಣಾಗ್ರಜಗೆ | ಅಕ್ಷರ ಪುರುಷಗೆ |
ಲಕ್ಷ್ಮಿರಮಣ ನಾ | ಗೇಶ ಶಯನಗೆ || 7

" ನಾರದ ಮಹಿಮ ಮರುವಕ "

ರಾಗ : ಯಮುನ ಕಲ್ಯಾಣಿ ತಾಳ : ಆದಿತಾಳ

ನಾರದ ಮುನಿವರ ನಮೊ ನಮೊ ||
ಸೇರಿದೆ ನಿಮ್ಮನು ನಮೊ ನಮೊ || ||ಪ||

ತಾರಿಸು ಭವ ಭಯ | ನಾರಾಯಣ ಪ್ರಿಯ |
ತೋರಿಸು ಶ್ರೀ ನಾ | ಗೇಶ ಶಯನನ ಪದ || ||ಅ.ಪ.||

ಶಹನ, ಮೋಹನ, | ಶಂಕರಾಭರಣ |
ಅಹೇರಿ ಯಮುನ ಕಲ್ಯಾಣಿಯಲಿ |
ಮಹತಿ ವೀಣೆಲಿ | ಬಹು ವಿಧ ಭಕ್ತಿಲಿ |
ಮಹಿತನ ಮಹಿಮೆ ಕೊಂ | ಡಾಡಿ ನರ್ತಿಸುವ || 1

ನರಕದಿ ಬಹುಭಯಂ | ಕರಯಾತನೆಯಲಿ |
ನರಳುತಿರುವ ಸತ್ವ | ಜೀವರಿಗೆ ||
ನರಹರಿ ನಾಮಾ | ಮೃತವನ್ನುಣಿಸಿ |
ದುರಿತ ಕಳೆದು ಸ | ದ್ಗತಿಯನು ತೋರಿದ || 2

ಪದುಮ ನಾಭನ | ಹೃದಯ ವರಿತು ನೀ |
ಮದಿಸಿದ ಅಸುರರ | ಮನೆ ಗೈದಿ |
ಮುದವಲಿ ನಟಿಸುತ | ಮೋಹವ ಗೈಯುತ |
ಅದಿತಿ ಸುತರ ಕಾ | ರ್ಯವ ಸಾಧಿಸುವ || 3

ಕರ್ನಾಟಕ ಶುಭ | ಮಾನ್ಯ ಭುವಿಯಲಿ |
ಘನ್ನ ಪುರಂದರ ನಾಮದಲಿ ||
ಮುನ್ನ ಸಂಗೀತ | ಸಾಹಿತ್ಯ ರೂಪದಲಿ |
ಉನ್ನತ ನಿಗಮಾ | ಗಮಗಳ ನೊರೆದ || 4

ರಾಗಸುಧಾರಸ | ಪಾನವ ಮಾಡುವ |
ಯೋಗವ ಕೊಟ್ಟೆನ್ನ | ಕಾಪಾಡು ||
ಭಾಗವತರ ಪ್ರಿಯ | ಸಾಗರ ಶಾಯಿಯ |
ರಾಗದಿಂ ಪಾಡುವ | ಭಾಗ್ಯವ ನೀಡು || 5

" ಗಂಗಾದೇವಿ ನಮನ ಮನೋಹರ "

ರಾಗ : ಖರಹರ ಪ್ರಿಯ ತಾಳ : ಆದಿತಾಳ

ಗಂಗೆನಾ ನಮಿಸುವೆ ಸುಗುಣ | ತರಂಗೆ |
ಹರಿಪಾದ ಭೃಂಗೆ || ||ಪ||

ರಂಗನಪದ ನಖದಿಂದುದ್ಭವಿಸಿದ |
ಮಂಗಳ ಪದವನು ತೋರೆ ಶುಭಾಂಗೆ || ||ಅ.ಪ.||

ಬದರಿ ನಾರಾಯಣನ ಪದ ತೊಳೆದೆ | ಪ್ರಾರ್ಥಿಸುತಲಿನಿಂದೆ |
ಪದುಮಾಕ್ಷಿ ಋಷಿಕೇಶಕೆ ನೀ ಬಂದೆ | ಅಲ್ಲಿಂದ ಮುಂದೆ ||
ಮುದದಿಂದಲಿ ದಕ್ಷಿಣ ಗಾಮಿನಿಯಾದೆ | ಆಗ್ನೇಯಕೆ ಸರಿದೆ |
ಸದಮಲ ಪ್ರಯಾಗ ಕ್ಷೇತ್ರದಿ ಹರಿಯುತ | ಸುಜನರನ್ನು
ಸುಪವಿತ್ರರ ಗೈದೆ || 1

ವೇಣಿ ಮಾಧವನ ಚರಣಕೆ | ಮಣಿದೆ | ಸಂತೋಷದಿನಲಿದೆ |
ಜಾಣೆ ಸರಸ್ವತಿಯು, ಯಮುನೆಯು ಬೆರದೆ | ತ್ರಿವೇಣಿಯಾದೆ |
ಕ್ಷೋಣಿ ಮಂಡಲವನು | ಫಲ ವಾಗಿಸಿದೆ | ಜನಮನವದಣಿಸಿದೆ |
ಮಾನಿನಿಯರಕ್ಕೈ ಪೂಜೆಯ ಗೊಳ್ಳುತ | ವೇಣಿದಾನಕೆ
ನೀ ಕೈಹಿಡಿದೆ || 2

ಹರಿದ್ರಾ ಕುಂಕುಮವು ಗಂಧಸುಪುಷ್ಪ | ಗೆಜ್ಜೆಯ ಶುಭವಸ್ತ್ರ |
ಮರದ ಬಾಗಿನದಲಿ ಮುತ್ತನಿಡುತ್ತ | ಕೊಡುವೆನು ಪಿಡಿ ಹಸ್ತ ||
ತ್ವರದಿಂದ ಗಿಂಡಿಲಿ ನಿನ್ನ ನಿರಿಸುತ | ಪೂಜೆಯ ಗೈಯ್ಯುತ್ತ |
ವರುಣನ ರಾಣಿಯೆ ನಿನ್ನನು ನಮಿಸುತ | ಪುರಕೆ ಬಂದೆನೆ
ಹರುಷವ ಪಡುತ || 3

ಶೃಂಗಾರವೇಣಿ ಶರಧಿಯ ರಾಣಿ | ಶುಕ ಕೋಕಿಲ ವಾಣಿ |
ಹೊಂಗ್ಯಾದಿಗೆ ಪುಷ್ಪ ಮುಡಿದ ಕಲ್ಯಾಣಿ | ಕಾಲಂದಿಗೆ ಪೈಝಣಿ ||
ಬಂಗಾರದ ಮೂಗುತಿ, ವಾಲೆ, ಸರಪಣಿ | ಕಂಠಿಯ ಕಟ್ಬಾಣಿ |
ಮಂಗಳೆ ಮೊಸಳೆಯ ವಾಹನೆ ಚಿರ ಮಾಂ | ಗಲ್ಯ ನೀಡೌ ಸುಗುಣ
ಶಿರೋಮಣಿ || 4

ಬಿಂದು ಮಾಧವನ ಪದಕೊಂದಿಸುತ | ಮುಂದಕೆ ಹರಿಯುತ್ತ |
ನಂದದಿಂ ವಿಶ್ವೇಶನ ಗುಡಿಯುತ್ತ | ಬಾಗಿನವಿುಸುತ್ತ ||
ಬಂದೆಯೆ ಮಣಿ ಕರ್ಣಿಕೆ ಬಳಸುತ್ತ | ಆಘಗಳ ಕಳೆಯುತ್ತ |
ಸುಂದರ ಶ್ರೀನಾಗೇಶ ಶಯನನು | ಸ್ಮರಿಸುತ ವರುಣನ 5
ಬೆರಪೆಯೊ ಹಿಗ್ಗುತ ||

" ಗಂಗಾದೇವಿ ಭಜನ ಅರುಣ ಚಂಪಕ "

ರಾಗ : ಭೈರವಿ ತಾಳ : ಆದಿತಾಳ

ಗಂಗೆ ನಿನ್ನಪದ | ಹಿಂಗದೆ ಭಜಿಸುವೆ |
ಮಂಗಳ ವೀಯಮ್ಮ || ಅಮ್ಮ || ||ಪ||
ರಂಗನ ಪದನಖದಿಂದುದ್ಭವಿಸಿ ತ |
ರಂಗಿಣಿಯೊಗುತ ಹರಿದೆ ಕ್ಷೇತ್ರದಲಿ || ||ಅ.ಪ.||

ಸುರಪುರದಿಂದಲಿ | ಇಳಿದು ಧರಿತ್ರಿಗೆ |
ಕರುಣದಿ ಆಗಮಿಸಿ ||
ನರರ ಪಾಪಗಳ | ಹರಿಸುತ ಸುಜನರ |
ಪೊರೆದು ಶ್ರೀಹರಿಯು | ಪಾದವ ತೋರು || 1

ಚಕ್ಷು, ಭದ್ರೆ, ಸೀ | ತೆಯರನು ಬಿಟ್ಟು |
ದಕ್ಷಿಣ ಕಿಳಿ ದಿರುವೆ ||
ಪಕ್ಷಿ ಗಮನ ಶ್ರೀ | ವೇಣಿ ಮಾಧವನ |
ಅಕ್ಷಯ ಪಾದವ | ಈಕ್ಷಣ ತೋ | ರೆ 2

ಭಗಿರಥ ಭಕ್ತಿಲಿ | ಪ್ರಾರ್ಥಿಸೆ ಬಂದೆಯು |
ಸುಗುಣೆ ಅಲಕನಂದೆ ||
ಜಗದೀಶ ಗುಣ ನಾ | ಗೇಶ ಶಯನನ |
[illegible] | ಪೊಗಳುವೆ ನಿನ್ನ|| 3

" ಭಕ್ತವತ್ಸಲನೆಂಬ ಬಿರುದು ನೀಲಸೇದಂತಿಕ "

ರಾಗ . ಮೋಹನ ತಾಳ : ಆದಿತಾಳ

ಪಾಲಿಸೊ ಕೃಷ್ಣ ಪಾಲಿಸೊ |
ಪಾಲಿಸೊ ನಾ ನಿನ್ನ | ಪಾಲಿಗೆ ಬಂದೆ ||

ಭಾರತ ಯುದ್ಧದಿ | ಧೀರಪಾರ್ಥಗೆ |
ಸಾರಥಿ ಯಾಗುತ | ಸ್ಯಂದನದಿ ||
ಮಾರಜನಕ ಹರಿ | ಅಸ್ತ್ರಪಿಡಿಯೆ ನೆಂದು |
ವೀರ ಪತಿಜ್ಞೆ ಕೈ | ಕೊಂಡನು ಮುದದಿ || 1

ಕುರುಪಿತಾಮಹಬಹು | ಕೆರಳುತ ಧುರದಲಿ |
ಶರಗಳ ಮಳೆಯನು | ಸುರಿಸುತಿರೆ ||
ಕರಿ, ಹಯ, ರಥಗಳು | ಸರುವ ಜನಬಲವು |
ಹರಣವ ತೊರೆಯುತ | ಧರಣಿ ಲೊರಗಿತು || 2

ಮುಳಿದ ಪಿತಾಮಹ | ಪ್ರಳಯದ ಹರನಂತೆ |
ಜ್ವಲಿಸುವ ಸೂರ್ಯನ | ಪ್ರಭೆಯಂತೆ |
ಹೊಳೆ ಹೊಳೆಯುವ ಮಹ | ತೇಜದಿ ವೈರಿಯ |
ಬಲ ಸಂಹರಿಸಿದ | ಜವರಾಯನಂತೆ || 3

ಕೆಂಡವನುಗುಳುವ | ಜ್ವಾಲಾ ಮುಖಿಯಂತೆ |
ಪಾಂಡವ ಪಕ್ಷವ | ದಹಿಸುತಿರೆ ||
ಪಾಂಡು ಸುತರು ಭಯ | ಗೊಂಡು ಹರಿಯಪದ |
ಪುಂಡರೀಕಕೆ ವೈ | ದಿಂಡು ಗೆಡೆದರು || 4

ಭಯದಿಕಂಪಿಸುವ | ಪ್ರಿಯ ಪಾಂಡವರಿಗೆ |
ಜಯವ ಬಗೆದು ಹರಿ | ಭರದಲ್ಲಿ ||
ಜಯ ಲಕ್ಷ್ಮಿಯ ಸಾ | ನ್ನಿಧ್ಯ ಚಕ್ರವ | ಅ
ಭಯ ಕರದಲಿ ಪಿಡಿ | ದಿಳಿದನು ಕೆರಳಿ || 5

ಸಿಟ್ಟಲಿ ಭೀಷ್ಮನ | ದೃಷ್ಟಿಸಿ ಕೋಪದಿಂ |
ದುಷ್ಟತನವ ಖಂ | ಡಿಪೆನೆನುತ |
ನೆಟ್ಟನೆ ರಥದಿಂ | ದಿಳಿದು ಬರುತಲಿರೆ |
ಪಟ್ಟೆ ಪೀತಾಂಬರ | ನೆಲವಲಿ ಉಲಿಯೆ || 6

ಕೆರಳಿದರುಣ ಅಕ್ಷಿ | ಕರದಿ ಸುದರ್ಶನ |
ವರಮಣಿ ಕೌಸ್ತುಭ | ನಲಿಯುತಿರೆ ||
ಭರದಿ ಬರುತಲಿಹೆ | ಸಿರಿ ಕೃಷ್ಣನಿಗೆ |
ಶರವ ಬಿಸುಟು ಭೀ | ಷ್ಮನು ಕರಮುಗಿದ || 7

ರಥದಿಂಧುಮುಕಿದ | ರಥಿಕ ಪಿತಾಮಹ |
ಸ್ಮಿತ ವದನದಿ ಭಕ್ತಿ | ಭಾರದಲಿ ||
ಸ್ತುತಿಸುತ ರೋಮಾಂ | ಚನಯುತ ಗಾತ್ರದಿ |
ಪತಿತ ಪಾವನನೆ | ರಕ್ಷಿಸು ಎಂದ || 8

ಸೃಷ್ಟಿ ಸ್ಥಿತಿಲಯ | ಕಾರಣ ಕರ್ತನೆ |
ದುಷ್ಟ ದನುಜರಸು | ಹೀರುವನೆ ||
ಶ್ರೇಷ್ಠ ಬ್ರಹ್ಮಾದಿಸು | ರಾರ್ಚಿತ ಪಾದನೆ |
ಇಷ್ಟ ದೈವ ಎನ್ನ | ರಕ್ಷಿಸು ಎಂದ || 9

ಅಸ್ತ್ರ ಪಿಡಿಯೆ ನೆಂ | ಬರ್ಥಿಯ ಶಪಥವ |
ಸತ್ಯ ಸಂಕಲ್ಪ ನೀ | ಮಾಡಿರುವೆ ||
ಭೃತ್ಯನ ಸತ್ಯ ಪ್ರ | ತಿಜ್ಞೆ ಸಲಿಪುದಕೆ |
ಭಕ್ತ ವತ್ಸಲನೆ | ಚಕ್ರವ ಪಿಡಿದ್ಯೊ || 10

ಸಾಗರಸುತೆ ಪತಿ | ಭೋಗಿ ತಲ್ಪ ಹರಿ |
ಭಾಗೀರಥಿ ಪಿತ | ಭಾಗ್ಯನಿಧಿ ||
ಬಾಗಿ ಭಜಿಸುವರ | ಭಯವ ಹರಿಸುವನು |
ನಾಗೇಶ ಶಯನ | ಯೋಗಿಗಳ ರಸ || 11

" ಪಾದ ಪೂಜೆ ಶ್ವೇತ ಸೇವಂತಿಕ "

ರಾಗ : ಬೇಗಡೆ   ತಾಳ : ತಿಶ್ರ ಆದಿತಾಳ

ಪಾದಪೂಜೆಯ ಮಾಡಿ | ಪಾವನರಾಗಿ ಬಾಗಿವರವ ಬೇಡಿ | ||ಪ||
ಪಾದಪೂಜೆಯ ಮಾಡಿ | ಬಾದರಾಯಣರಿಗೆ |
ಮೋದದಿಂದ ಶ್ರೀ | ಪೂರ್ಣಭೋಧರಿಗೆ || ||ಅ.ಪ.||

ಸ್ವರ್ಣದ ಪೀಠದಲಿ | ಗುರುಗಳನು ಕೂಡಿಸಿ |
ರನ್ನದ ಹರಿವಾಣದಿ ||
ಚಿನ್ನದ ಗಿಂಡಿಲಿ | ಗಂಗೋದಕ ತಂದು |
ಘನ್ನಪಾದ ತೊಳೆದು | ಧನ್ಯರಾಗಿರಿ ಜನ || 1

ಸುಜನರ ಸಲಹುವುವು | ಈದಿವ್ಯ ಪದಗಳು |
ಕುಜನರ ಮೆಟ್ಟುವುವು ||
ಭಜಿಸುವ ಸುಜನಕ್ಕೆ | ನಿಜಗತಿ ತೋರುವ |
ವಿಜಯ ಸಾರಥಿಯ | ನಿಜ ಗುರು ಮಧ್ವರ || ಪಾದ || 2

ಪುಷ್ಪಮಾಲೆಯ ಹಾಕಿ | ಭಕ್ತಿಯಲಿ ಸೇವಿಸಿ |
ಪಕ್ವ ಫಲಗಳರ್ಪಿಸಿ ||
ಯುಕ್ತವಾದ ತಾಂ | ಬೂಲ ದಕ್ಷಿಣೆ ಇರಿಸಿ |
ಭಕ್ತ ವತ್ಸಲ ವ್ಯಾ | ಸರ ಶ್ರೀ ಮಧ್ವರ || ಪಾದ || 3

ಸಾಲು ದೀಪಾರತಿಯು | ಶುಭಮಂಗಳಾರುತಿ |
ಮೇಲೆ ಪ್ರದಕ್ಷಿಣೆಯು ||
ಫಾಲನ ಗುರುಗಳ | ಪಾದಕೆ ಪೊಂದಿಸಿ |
ಶ್ರೀ ಲೋಲ ವ್ಯಾಸರ | ಮಧ್ವರ ಪ್ರಾರ್ಥಿಸಿ || 4

ಪದ್ಮನಾಭರ ಪದಕೆ | ಅಕ್ಷೋಭ್ಯರಿಗೆ |
ಮಾಧವ ನರಹರಿಗೆ ||
ಮಧ್ವರಾಯರ ಗ್ರಂಥ | ಶುದ್ಧಭಾವತಿ ಪೊತ್ತ |
ಸದ್ವಿದ್ಯ ನಿಲಯ ಶ್ರೀ | ಜಯತೀರ್ಥ ಮುನಿಗೆ || 5

ಕಣ್ವತೀರದಲ್ಲಿರುವ | ಬ್ರಹ್ಮಣ್ಯರಿಗೆ |
ಘನ್ನ ಶ್ರೀಪಾದರಿಗೆ ||
ಚಿಣ್ಣನಿದ್ದಾಗಲೇ | ಕೃಷ್ಣನ್ನ ಕುಣಿಸಿ, ಸ ||
ನ್ಮಾನ್ಯ "ಚಂದ್ರಿಕೆ" ಬರೆದ | ವ್ಯಾಸ ರಾಯರಿಗೆ || 6

ಮುಕ್ತಿ ಮಾರ್ಗವ ತೋರುವ | ವಾದಿರಾಜರಿಗೆ | ವಿ
ರಕ್ತ ರಘೋತ್ತಮರಿಗೆ ||
ಭಕ್ತ ಜನರ ಪ್ರಿಯ | ರಾಘವೇಂದ್ರರಿಗೆ |
ಶಕ್ತನಾಗೇಶ ಶ | ಯನನ ದಾಸರ ದಿವ್ಯ || ಪಾದ || 7

" ಗುರು ವಂದನ ಅವರೋಹಣ ಕ್ರಮ " ಪ್ರತಿಹಾಸ ಸುಮ

ರಾಗ : ಹಿಂದೋಳ ತಾಳ : ಆದಿತಾಳ

ವಂದಿಸಿ ಬೇಡುವೆ | ಚಂದದ ಮತಿಯ || ||ಪ||

ಇಂದಿರೆ ರಮಣನ | ಭಕುತ ಸಂತತಿಯ || ||ಅ.ಪ.||

ಆದಿಯಲ್ಲಿ ಹರಿ | ಯಾಜ್ಞೆಯ ಧರಿಸುತ |
ಮೇದಿನಿ ಗೈತಂದು | ಸುಜನರಿಗೆ ||
ಭೇದ ಜ್ಞಾನವನು | ತರತಮ ವಿಧವನು |
ಬೋಧಿಸಿ ಸಲಹಿದ | ಮೋದತೀರ್ಥರಿಗೆ || 1

ಅದ್ವೈತಿ ಯಾಗಿದ್ದು | ಮಧ್ವಮತಕೆ ಬಂದ |
ಪದ್ಮನಾಭರಿಗೆ | ವಂದಿಸುವೆ ||
ಸಿದ್ಧ ನರಹರಿಗಳ | ಪದ್ಮ ಪದಗಳಿಗೆ |
ಶುದ್ಧ ಮನಸಿನಿಂದ | ಬಿದ್ದುನಾ ಬೇಡ್ವೆ || 2

ಅಕ್ಷೋಭ್ಯ ಮುನಿಗಳ | ಸ್ವಚ್ಛ ಪದಗಳನು |
ಇಚ್ಛೆಇಂದ ನಾ | ಪೂಜಿಸುವೆ ||
ಮತ್ಸರ ಮದ ಮೋಹ | ತುಚ್ಛ ವೆಂದೆನ್ನುತ |
ಅಕ್ಷಣ ಯತಿಯಾದ | ಮಾಧವ ಮುನಿಗೆ || 3

ಜಯ ಮಧ್ವಮತಕೆಂದು | ಜಯ ಭೇರಿ ಹೊಡಿಸಿದ |
ಜಯಪ್ರದ " ನ್ಯಾಯಸು | ಧಾ " ರಚಿಸಿ ||
ಜಯ ಮೂಲರಾಮ ಜಾ | ನಕಿ ಪದ ಸೇವಿಸಿ |
ಜಯ, ಕೀರ್ತಿ, ಪಡೆದ ಶ್ರೀ | ಜಯತೀರ್ಥ ಮುನಿಗೆ || 4

ಭಾನು ಅಂಶದಿಬಂದ | ಬ್ರಹ್ಮಣ್ಯ ಯತಿಗೆ |
ಸಾನುರಾಗದಲಿ | ಭಾವಬೋಧರಿಗೆ ||
ದೀನ ರಕ್ಷಕ ಶ್ರೀ | ಪಾದ ಮುನಿಗಳಿಗೆ |
ಮಾನನಿಧಿಗಳಾ | ವಾದಿರಾಜರಿಗೆ || 5

ಕಾವ ಸದ್ಗುರು ಶ್ರೀ | ವ್ಯಾಸರಾಜರಿಗೆ |
ಕೋವಿದ ಶ್ರೀ ಸತ್ಯ | ಭೋಧರಾಯಗೆ ||
ಈವಸುಧೆಯಲಿ ಮಂ | ತ್ರಾಲಯದಲಿ ವರ |
ವೀವ ಕರುಣಿ ಶ್ರೀ | ರಾಘವೇಂದ್ರರಿಗೆ || 6

ಪರಮ ವೈರಾಗ್ಯನಿಧಿ | ಅರಣ್ಯಕಾರ್ಯರಿಗೆ |
ಹರಿಭಕ್ತಿ ಸಾರಿದ | ಪುರಂದರರಾರ್ಯಗೆ ||
ಶರಣರ ಪೊರೆಯುವ | ವಿಜಯ ಗುರುಗಳಿಗೆ |
ಗುರುಸೇವಾ ಪರ | ಗೋಪಾಲಾರ್ಯರಿಗೆ || 7

ಹರಿಕಥಾಮೃತದ | ಸಾರವ ಸುರಿಸಿದ |
ವರ ಮಾನವಿ ಜಗ | ನ್ನಾಥಾರ್ಯರಿಗೆ ||
ಕರುಣದಿ ಪೊರೆಯುವ | ಮೋಹನಾರ್ಯರಿಗೆ |
ಸಿರಿ ಕೇಶವ ಪ್ರಿಯ | ಕನಕಾರ್ಯವರಗೆ || 8

ಖರಜಿಗಿ ನಿಲಯ ಪ್ರಾ | ಣೇಶ ದಾಸರಿಗೆ |
ಧೀರ ಕೃಷ್ಣನ ಪ್ರಿಯ | ಮದ್ಗುರು ವರಗೆ ||
ಮಾರಜನಕ ನಮ್ಮ | ನಾಗೇಶ ಶಯನನ |
ಆರಾಧಿಸುವಂಥ | ಸಾರ ಸುಜನಕೆ || 9

" ಭಾವ ಭೋಧರ ಪ್ರಾರ್ಥನ ಬಕುಲ (ರಘೋತ್ತಮರು) "

ರಾಗ : ರೀತಿಗೌಳ ತಾಳ : ಛಾಪುತಾಳ

ಭಾವಭೋಧರ ಪಾದ | ಕೆರೆಗುವೆನು ಸತತ |
ಭಾವ ಶುದ್ಧಿಯ ಮಾಡಿ | ಸಲಹ ಬೇಕೆನುತ || ||ಪ||

ಭಾವಜನ ಪಿತನಲ್ಲಿ | ಭಕ್ತಿಯನು ಕೊಡುತ |
ಕಾವಕರುಣಾ ನಿಧಿಯು | ಅವರೇ ಎನುತ್ತ || ||ಅ.ಪ.||

ಆದಿ, ವ್ಯಾಧಿಗಳನ್ನು | ಪರಿಹರಿಸುತಿಹರು |
ಆದರದಿ ಸುಜ್ಞಾನ | ಬೋಧಿಸುತ್ತಿಹರು ||
ಮೋದತೀರ್ಥರ ದಯವ | ಸಂಘಟಿಪರಿವರು |
ಮಾಧವನ ಪಾದಕ್ಕೆ | ನಮ್ಮ ಸಲ್ಲಿಪರು || 1

ಪೂರ್ಣ ಬೋಧರ ಸರ್ವ | ಮೂಲಗ್ರಂಥಗಳ |
ಪೂರ್ಣ ಜ್ಞಾನವ ಪಡೆದು | ತಪದಲ್ಲಿ ಇಹರ ||
ಜಾಣತನದಲಿ ರಚಿಸಿ | ತತ್ವ ಗ್ರಂಥಗಳ |
ಮಾನ್ಯ ತಿರುಕೋವಿಲಿನ | ಶ್ರಿ ರಘೋತ್ತಮರ || 2

ರಾಗಾದಿ ಷಡ್ವರ್ಗ | ಗಳ ಜಯಿಸಿದಾತ |
ರಾಘವೇಶನ ಪೂರ್ಣ | ಕರುಣ ಪಡೆದಾತ ||
ಬಾಗಿ ಭಜಿಸುವ ಜನರ | ಬಿಡದೆ ಪೊರೆವಾತ |
ನಾಗೇಶ ಶಯನನ್ನ | ಪ್ರಿಯ ದಾಸನೀತ || 3

"ಶ್ರೀ ರಾಘವೇಂದ್ರಗುರು"

ರಾಗ : ಧನ್ಯಾಸಿ ತಾಳ : ಆದಿತಾಳ

ರಾಘವೇಂದ್ರಗುರು ದಯಮಾಡೋ ಅನು |
ರಾಗದಲೆನ್ನನು ಕಾಪಾಡೊ || || ಪ ||

ಭಾಗವತರ ಸತ್ಸಂಗವ ನೀಡೊ | ಯೋಗಿ
ವರ್ಯ ಎನ್ನ ಅಘಗಳ ದೂಡೋ || || ಅ.ಪ. ||

ವರಮಂತ್ರಾಲಯ ವರಹಜೆ ತಟದಲ್ಲಿ |
ಪರಿಶೋಭಿಸುತಿಹ ಸುರಧೇನು |
ಹರಿಗುರು ಭಕುತರ ಕರೆದು ವರವನೀವ|
ಪರಮ ಕರುಣಿ ಸುರ ತಲ್ಪತರು || 1

ಕನಕ ಕಶ್ಯಪನಲಿ ಕಂದನಾಗಿ ನೀ |
ಜನಿಸುತ ಹರಿಯನು ಜಪಿಸುತಿರೆ |
ಜನಕನು ಕೋಪದಿಂ ಹರಿಎಲ್ಲಿಹನೆನೆ |
ಘನಕಂಬದಲಿ ತೋರಿದ ಗುರುವೇ || 2

ಬಾಲಕತನದಲಿ ಬಾಲ ಶ್ರೀ ಕೃಷ್ಣನ ||
ಲೀಲೆಯಿಂ ಕುಣಿಸಿದ ವ್ಯಾಸಯತಿ |
ಮಾಯಿಗಳಿನೆ ಗೆದ್ದು "ತಾತ್ಪರ್ಯಚಂದ್ರಿಕ" |
"ನ್ಯಾಯಾಮೃತ" "ತರ್ಕ ತಾಂಡವ" ರಚಿಸಿದ || 3

ತಂತ್ರ ದೀಪಿಕ, ಮಂತ್ರಾರ್ಥ ಮಂಜರಿ |
ತತ್ವ ಮಂಜರಿ, ನ್ಯಾಯ ಮುಕ್ತಾವಳಿ |
ಹತ್ತು ಮೂವತ್ತೇಳು ಗ್ರಂಥಗಳ ರಚಿಸಿ |
ಉತ್ತಮ ಪರಿಮಳ ಬೀರಿದ ಸದ್ಗುರು || 4

ಭಾಗವತಾಗ್ರಣಿ ಭಕ್ತ ಚಿಂತಾಮಣಿ |
ತ್ಯಾಗಿ ಸುಗುಣ ಖಣಿ ವಿದ್ಯನ್ಮಣಿ |
ಯೋಗಿ ಶ್ರೀ ಮಧ್ವರ ದಾಸ ಶಿರೋಮಣಿ |
ನಾಗೇಶ ಶಯನನ ತೋರಿಸು ಕರುಣಿ || 5

★ ★ ★

ರಾಗ : ಸರಸ್ವತಿ ತಾಳ : ಆದಿತಾಳ

ಬೃಂದಾವನದಿ ನೋಡೆ ಶ್ರೀ ಗುರುಗಳಿಗೊಂದಿಸಿ |
ವರಬೇಡೇ ಹೇ ಸಖಿ ||
ಬೃಂದಾವನದಿ ನಿಂದು ಬಂದ ಭಕ್ತರಿಗೆಲ್ಲಾ |
ನಂದವ ನೀಡುವ ಸುಂದರ ಯತಿಗಳ || 1

ಮಂತ್ರಾಲಯದಿಂದಲಿ ಆಗಮಿಸಿದ |
ಕಂತುಪಿತನಾಜ್ಞೆಲಿ | ಶ್ರೀಗುರು ||
ಅಂತರಂಗದಿ ಲಕ್ಷ್ಮಿ ಕಾಂತನ ನೆನೆಯುತ |
ಸಂತರ ಹೃದಯಕ್ಕೆ ಸಂತಸ ಕೊಡುವನ || 2

ಸಂಸಾರ ಸಾಗರದಿ ಪ್ರಪಂಚದಿ |
ಹಿಂಸೆ ಪಡುತ ಭಯದಿ ||
ಕಂಸಾರಿ ಕೃಷ್ಣನ ನಂಬಿದವರ ಅಘ |
ಧ್ವಂಸ ಮಾಡುವ ಗುರು ಹಂಸ ಗಮನೆ ಕೇಳೆ || 3

ಕೊರಳ ತುಳಸಿಯುಮಾಲೆ ನಲಿವುದ ನೋಡೆ |
ಕರದಿ ಜಪದ ಮಾಲೆ ||
ತರಳ ಪ್ರಹ್ಲಾದನ ಗುರುತು ತೋರುತಲಿದೆ |
ಸಿರಿವ್ಯಾಸರಾಜರ ಕುರುಹು ಕಾಣುತಲಿದೆ || 4

ಮಧ್ವರಾಯರ ಶಾಸ್ತ್ರ ಭೋದಿಸುತಿಹ |
ಶುದ್ಧ ಜನಕೆ ಮಾತ್ರ ||
ಶ್ರದ್ಧೆ ಭಕ್ತಿಯಲಿ ಪಾದ ಪದ್ಮವ ಭಜಿಪರ |
ಉದ್ಧಾರ ಮಾಡುವ ಸದ್ವೈಷ್ಣ ವಾಗ್ರಣಿಯು || 5

ಬಳ್ಳಾರಿ ಪುರದಲ್ಲಿ ಬಂದಿರುವರೆ |
ಎಲ್ಲಾರ ಮನದಲ್ಲಿ | ಶ್ರೀಗುರು ||
ಪುಲ್ಲನಯನೆ ನೀನೆಳ್ಳಷ್ಟ್ಯೋಚಿಸಬೇಡ |
ಸೊಲ್ಲನಾಲಿಸಿ ನಿನ್ನ ತಲ್ಲಣ ಕಳೆವರೆ || 6

ಪತಿಸುತ್ರ ಹಿತ ಮಿತ್ರರು ಎನ್ನವರೆಂಬ |
ಮತಿಭ್ರಾಂತಿ ಬಿಡಿಸುವರು | ಈಗುರು ||
ರತಿಪತಿ ಪಿತನಲ್ಲಿ ಅತಿತಿಯ ಭಕ್ತಿಯ |
ಹಿತದಿಂದ ಕೊಟ್ಟು ಸದ್ಗತಿಗೆ ಸೇರಿಸುವರೆ || 7

ಭಾಗವತರ ಬಂಧು ಶ್ರೀ ರಾಘವೇಂದ್ರ |
ತ್ಯಾಗಿ ಕರುಣ ಸಿಂಧು |
ಸಾಗರ ಸುತೆಪತಿ ನಾಗೇಶ ಶಯನನ |
ಆಗಾರ ತೋರುವರ ಯೋಗಿ ಶ್ರೀ ಗುರುಗಳ || 8

ರಾಗ : ಕೇದಾರ   ತಾಳ : ಆದಿತಾಳ

ಕಾಯೊ ಕಾಯೊ ಕಾಯೊ ಗುರುರಾಜ | ಸುರ ಕಲ್ಪಭೂಜ ||
ಕಾಯೊ ಕಾಯೊ ಕಾಯೊ ರವಿತೇಜ ||

ರಾಯ ನಿರ್ಮಲಕಾಯ ಸಜ್ಜನ | ಗೇಯ ಮುನಿವರ್ಯ |
ತೋಯಜಾಕ್ಷರಮೇಶ, ಹರಿಪ್ರಿಯ | ವಾಯು ಮತದ, ಸು,
ಮಾರ್ಗ ತೋರಿಸಿ|| 1

ತುಂಗಭದ್ರ ತರಿಂಗಿಣಿಯು ತಟ | ಮಂಗಳದ ಸದನ | ಶು
ಭಾಂಗ ಹರಿಯ ಪದಾಂಗ ಭೃಂಗ, ಕೃ | ಪಾ ಪಾಂಗದಲಿ ನೋಡಿ
ಎನ್ನನು 2

ನಿತ್ಯದಲಿ ಬಹ ಆರ್ತಜನರಿಗೆ | ಇತ್ತು ಇಷ್ಟಾರ್ಥ |
ಹತ್ತು ಮೂವತ್ತೇಳು ಗ್ರಂಥವ | ಬಿತ್ತಿ ಪರಿಮಳ ಬೀರುತಿಹ ಗುರು || 3

ರಾಮ ನರಹರಿ ಕೃಷ್ಣ ಕೃಷ್ಣರ | ನೇಮದಿಂ ಭಜಿಪ |
ಸ್ವಾಮಿ ಶ್ರೀಗುರು ರಾಘವೇಂದ್ರ, ಸು | ಪ್ರೇಮದಿಂ ಪರತತ್ವ,
ಬೋಧಿಸಿ || 4

ತಂದೆ ಶ್ರೀನಾಗೇಶ ಶಯನನು | ಬೃಂದಾವನದಲ್ಲಿ |
ನಿಂದಿಹನು ಸುರರಿಂದ ಪರಿವೃತ | ನೆಂಬ ಅನುಸಂಧಾನ ವೀಯುತ || 5

ರಾಗ : ಸುರಟಿ ತಾಳ : ಆದಿತಾಳ

ಮಂಗಳ ಮಂಗಳ ಶ್ರೀ ರಾಘವೇಂದ್ರಗೆ |
ಮಂಗಳ ಮಂಗಳ ಗುರುವರ್ಯಗೆ ||
ಮಂಗಳ ಹಿರಣ್ಯಕ ತನುಜ ಪ್ರಹ್ಲಾದಗೆ |
ಮಂಗಳ ಶ್ರೀ ವ್ಯಾಸರಾಜ ಯತಿವರಗೆ ||

ವರಹ ತನಯೆ ತೀರ ಮಂದಿರದಲ್ಲಿಹ |
ಸಿರಿರಾಮ ಚಂದ್ರನ ದಾಸನಿಗೆ ||
ಸುರಧೇನು. ಚಿಂತಾಮಣಿ, ಕಲ್ಪ ತರುವಿನ|
ನೆರೆಪೋಲ್ವ ಶ್ರೀ ಗುರುರಾಘವೇಂದ್ರರಿಗೆ || 1

ಆಯುರಾರೋಗ್ಯ, ಸಂಪತ್ತು, ಸುಜ್ಞಾನವ |
ವಾಯುದೇವಗೆ ಪೇಳಿ ಕೊಡಿಸುವಗೆ ||
ಮಾಯಾರಮಣ ವಾಸುದೇವನ ಪದವ, ಉ |
ಪಾಯದಿಂದಲಿ ಸೇರ್ವ ಮಾರ್ಗ ತೋರುವಗೆ || 2

ಇರುಳು ಸಮಯದಲ್ಲಿ ಪರಿಮಳ ಗ್ರಂಥವ |
ಬರೆದು ಶ್ರೀ ಗುರುಗಳಿಗೊಪ್ಪಿಸಿ ದಗೆ ||
ತರಳನಿದ್ದಾಗಲೆ ವರಮಧ್ವ ಶಾಸ್ತ್ರದ |
ತಿರುಳನರಿತ ಶ್ರೀ ರಾಘವೇಂದ್ರರಿಗೆ || 3

ಪರಿಪರಿ ಗ್ರಂಥವ ರಚಿಸಿ ಸಜ್ಜನರಿಗೆ |
ಹರಿಸರ್ವೋತ್ತಮನೆಂದು ಪೇಳಿದಗೆ ||
ಪರಮಪುರುಷ ಹರಿಯ ಸೇವಕರಾವೆಂದು |
ತರತಮ ಪರಿಯನು ಅರುಹಿದ ಯತಿಗೆ || 4

ವೀಣೆಯ ನುಡಿಸುತ ವೇಣುಗೋಪಾಲನ್ನ |
ಕಾಣುತ್ತ ಹೃದಯದಿ ನಲಿಯುವಗೆ ||
ಗಾನಲೋಲ ಸಿರಿ ನಾಗೇಶಶಯನನ |
ಸಾನುರಾಗವ ಪಡೆದ ಜಾಣ ಯತಿವರಗೆ || 5

“ ಶ್ರೀರಾಯರ ಲಾಲಿ ”

ತೂಗಿರೆ ರಾಯರ ಬೇಗ | ಗುರು
ರಾಘವೇಂದ್ರರನು ಈಗ |
ರಾಗವ ಪಾಡುತ ಬೇಗ | ನೀವು
ಬಾಗುತ ಭಕುತಲಿ ಈಗ||

ನಾರದರಾಶ್ರಮದಲ್ಲಿ | ಆ
ನಾರಿ ಕಯಾದುವಿನಲ್ಲಿ | ಸಿರಿ ||
ತೋರಿದ ಪ್ರಹ್ಲಾದನಲ್ಲಿ |
ನಾರಸಿಂಹನ ಕಂಡನಲ್ಲಿ || 1

ಬ್ರಹ್ಮಣ್ಯತೀರ್ಥರ ಕಂದ | ಗುರು
ಮಾನ್ಯ ವ್ಯಾಸಯತಿ ಬಂದ ||
ಚಿಣ್ಣತನದಿ ಭಕ್ತಿಯಿಂದ | ಸಿರಿ
ಕೃಷ್ಣನ ಕುಣಿಸಿದ ಛಂದ || 2

ನಾಗಗಿರೀಶನ | ವರದಿ | ಗುರು
ಆಗ ಪುಟ್ಟಿದ ಸತ್ಕುಲದಿ ||
ಶ್ರೀ ಗುರು ಸುಧೀಂದ್ರರ ಕರದಿ | ಮುನಿ
ರಾಘವೇಂದ್ರರು ಆದ ಮುದದಿ || 3

ಕನಕ ರತ್ನದ ಮಣಿತಲ್ಪ | ದಲ್ಲಿ |
ಇನಕುಲ ಪತಿಯ | ಸಮೀಪ
ಕುಳಿತಿಹ ಸುಗುಣ ಪ್ರತಾಪ | ಗುರು
ಮುನಿಕುಲ ತಿಲಕ | ಪ್ರದೀಪ 4

ಯೋಗಿ ಶ್ರೀ ಮಧ್ವರದಾಸ | ಗುರು
ಭಾಗವತರ ಸಹವಾಸ ||
ನೀಗುವ ಸುಜನರ ಕ್ಲೇಶ | ಗುರು
ನಾಗೇಶ ಶಯನನ ದಾಸ || 5

ಜೋ ಜೋ ಜೋ ಗುರುರಾಯ |
ಜೋ ಜೋ ಸಜ್ಜನ ಗೇಯ ||
ಜೋ ಜೋ ಮಂಗಳ ಧ್ಯೇಯ | ಗುರು
ಜೋ ಜೋ ಶ್ರೀ ಹರಿಪ್ರಿಯ || 6

ಲಾಲಿ, ಲಾಲಿ, ಗುರುರಾಯ |
ಲಾಲಿ, ಲಾಲಿ ಶುಭಕಾಯ ||
ಲಾಲಿ, ಲಾಲಿ ಗುಣ ನಿಲಯ | ಗುರು
ಲಾಲಿ, ಲಾಲಿ ಸದ್ ಹೃದಯ || 7

" ಶ್ರೀ ವಿಜಯದಾಸರು "

ರಾಗ : ಬೇಹಾನ್   ತಾಳ : ಆದಿತಾಳ

ವಿಜಯರಾಯ ಪೊರೆಯೊ | ಸದ್ಗುರು |
ವಿಜಯರಾಯ ಪೊರೆಯೊ || || ಪ ||

ವಿಜಯಸಾರಥಿಯ | ನಿಜಪದ ಪದುಮವೆ |
ನಿಜಗತಿ ಎನುತಲಿ | ಸುಜನರಿ ಗರುಹಿದ || 1

ಕಾಶಿ ನಗರದಲಿ | ವ್ಯಾಸರ ಪದವನು |
ಪಾಸನೆ ಗೈಯುತ | ದಾಸನಾದ ಶ್ರೀ || 2

ಪದ್ಯ ಪದ ಸುಳಾ | ದಿಗಳ ರೂಪದಲಿ |
ಮಧ್ವರಾಯರ ಸು | ಪದ್ಧತಿ ಪಾಡಿದ || 3
ಶ್ರೀಮನ್ನ್ಯಾಯ ಸು | ಧಾ ಸಾರವ ಬಹು |
ಪಾಮರನಿಂದು | ಚ್ಚಾರವ ಗೈಸಿದ || 4

ಕ್ಷಿಪ್ರಗಿರಿಯ ಸು | ಕ್ಷೇತ್ರದಿ ನೆಲೆಸಿಹ |
ಅಪ್ಪನಾಗೇಶ | ಶಯನನ ದಾಸ || 5

" ಸ್ವ ಗುರು ಸ್ಮರಣೆ "

ರಾಗ : ಭೂಪಾಳಿ,   ತಾಳ : ಝಂಪೆ

ನಾಗೇಶಶರ್ಮ ಗುರು | ಯೋಗಿಮಧ್ವರ ದಾಸ |
ಬಾಗಿ ನಮಿಸುವೆನು | ಕಾಯೋ ||
ಯೋಗ ಭೋಗಗಳೆರಡ | ಸಮನಾಗಿ ಸೇವಿಸುವ |
ಮಾರ್ಗವನು ತೋರಿ ಪೊರೆದೆ | ಮೆರೆದೆ ||

ತಂದೆನೀನಾಗೆನ್ನ | ತಂದೆ ಈ ಧರಣಿಯಲಿ |
ಕಂದರ್ಪ ಪಿತನ ದಯದಿ ||
ಅಂದೆನ್ನ ಜನನಿ ಹರಿ | ಮಂದಿರಕೆ ತೆರಳೆ | ದಯ
ದಿಂದ ಬಿಡದಂತೆ ಪೊರೆದೆ || ಬಿಡದೆ   1

ಎಳೆಯತನದಲಿ ಎನಗೆ । ಒಲವಿನಿಂ ವಿದ್ಯೆಗಳ ।
ಗಿಳಿಗೊರೆವ ತೆರದಿ । ಒರೆದೆ ॥
ಕುಲದಲುತ್ತಮ ರಾದ । ವರನಿಗೆನ್ನನು ದಾನ ।
ಬಲುಸಂಭ್ರಮದಿ ಮಾಡಿದೆ । ಬಿಡದೆ ॥ 2

ವಿದ್ವಾಂಸ ಪದವಿಯನು । ಪೊದ್ದಿದೆಯೊ ಆಂಗ್ಲೇಯ
ಪದ್ಧತಿಯ ಭಾಷೆಯಲ್ಲಿ ॥
ವಿದ್ಯಾರ್ಥಿಗಳಿಗೆಲ್ಲ ಸದ್ಬುದ್ಧಿ ಬೋಧಿಸುತ ।
ಶುದ್ಧ ಧರ್ಮಗಳ ನೊರೆದೆ । ಪೊರೆದೆ ॥ 3

ನಿತ್ಯ ವೇದಾಧ್ಯಯನ । ಮತ್ತೆ ಗಾಯತ್ರಿ ಜಪ ।
ಚಿತ್ತದಲಿ ಧ್ಯಾನಯೋಗ ॥
ತೃಪ್ತಿಪಡಿಸಿದೆ ಆದಿತ್ಯರನು । ಹೋಮದಲಿ ।
ಪಿತೃಗಣವನು ತಣಿಸಿದೆ । ತಣಿದೆ ॥ 4

ಸರ್ವ ಭೂತಗಳಲ್ಲಿ । ಸರ್ವ ಸ್ಥಾನಗಳಲ್ಲಿ ।
ಸರ್ವವಿಧ ಕಾರ್ಯಗಳಲಿ ।
ಸರ್ವೇಶ ಹರಿನಿಂತು । ಸರ್ವವನು ಮಾಡಿಸುವ ।
ಸರ್ವದಾ ಪೊರೆವೆನೆಂದೆ । ತಂದೆ ॥ 5

ಶುದ್ಧ ವೈಷ್ಣವ ನೆನಿಸಿ । ಮಧ್ವ ಶಾಸ್ತ್ರ ಸುಸಾರ
ತಿದ್ದಿ ಪೇಳಿದೆಯೋ । ಎನಗೆ ॥
ಮುದ್ರಿಕೆಯು ನೊಲಿದಿತ್ತು । ಮಧ್ವ ವಲ್ಲಭನಂ ಪ್ರಿ ।
ಪದ್ಮಕೆನ್ನನು ಸಲಿಸಿದೆ । ನಡೆದೆ ॥ 6

ಆಷಾಢ ಬಹುಳ ಅಷ್ಟಮಿ । ದಿನದಿ ಶ್ರೀ ಭಾರ
ತೀಶ ವರದನ । ಪಾದವ ॥
ಲೇಸಾಗಿ ಚಿಂತಿಸುತ । ನೀ ಸಾಗಿ ಪೋದಿ । ನಾ
ಗೇಶ ಶಯನನ । ಸದನಕೆ । ನಿಜಕೆ ॥ 7

" ಶ್ರೀಹರಿ, ಸಿರಿ, ಗುರು, ನಮನ "

ಯಾರೀಜಗದಿ ಸೃಷ್ಟಿ, ಸ್ಥಿತಿ, ಲಯ ಕಾರಣರಾಗಿಹರೊ |
ಯಾರೀಜಗವನು ಉದರ ದೊಳಿಟ್ಟು ಸಂರಕ್ಷಿಸು ತಿಹರೊ |
ಯಾರಾಜ್ಞೆಯಲಿ ಕೂಟಸ್ಥಳು ಈ ವಿಶ್ವವ ಧರಿಸಿಹಳೊ |
ಯಾರಾಜ್ಞೆಯಲಿ ವಿಧಿ, ಭವ, ಶಕ್ರರು ಜಗವನು ಪಾಲಪರೊ || 1

ಯಾರ ಆಜ್ಞದಿ ಸೂರ್ಯನು ಜಗತಿಗೆ ಕಿರಣವ ಬೀರುವನೊ |
ಯಾರ ಆಜ್ಞದಿ ಚಂದಿರ ವಿಶ್ವಕೆ ತಂಪನು ಎರೆಯುವನೊ |
ಯಾರ ಆಜ್ಞದಿ ಪರ್ಜನ್ಯನು ತಾ ಮಳೆಯ ಸುರಿಸುತಿಹನೊ |
ಯಾರ ಆಜ್ಞದಿ ಭೂದೇವಿಯು ತಾ ಧಾನ್ಯವ ನೀಡುವಳೊ || 2

ಯಾರ ನಿಯಮದಲಿ ಶರಧಿರಾಜನು ಭೋರ್ಗರೆಯುತ್ತಿಹನೊ |
ಯಾರ ನಿಯಮದಲಿ ನದಿಗಳು ಉದಕವ ಪೂರೈಸುತಲಿಹವೊ |
ಯಾರ ಆಣತಿಯ ಭಯದಲಿ ಅಗ್ನಿಯು ತೇಜದಿ ಜ್ವಲಿಸುವನೊ |
ಯಾರ ಆಣತಿಯ ಭಯದಲಿ ಮೃತ್ಯುವು ದಾವಿಸು ತಿರುತಿಹನೊ || 3

ಆ ಮಹ ಸ್ವಾಮಿಯೆ ಸರ್ವ ಜಗತ್ತಿಗೆ ಪ್ರೇರಕ ನಾಗಿಹನು |
ಆ ಮಹ ಸ್ವಾಮಿಯೆ ಸರ್ವಜಗದಲಿ ವ್ಯಾಪ್ತನಾಗಿಹನು |
ಆ ಮಹ ಪ್ರೇಮಿಯೆ ಸರ್ವರಲಿದ್ದು ಕರ್ತ ನೆನಿಸು ತಿಹನು |
ಆ ಮಹ ಪ್ರೇಮಿಯೆ ಸುಜನರ ಆತ್ಮಸುಹೃತ್ತು ವಾಗಿಹನು| 4

ಯಾ-ವಾತನ ಕರಪದುಮದಿ, ಸರ ಸದಿ ತಾ ಲೋಲೈಸುತಲಿಹಳೊ |
ಯಾ-ವಾತನ ಸೇವಿಸುತಲಿ, ಕೈಯಲಿ ಚಾಮರವಬೀಸುತಿಹಳೊ |
ಯಾ-ವಾತನ ಆಜ್ಞದಿ ವಿಶ್ವವ ತಾನೇ ಸಂರಕ್ಷಿಸುತಿಹಳೊ |
ಯಾ-ವಾತನ ವಕ್ಷಸ್ಥಳವನು ಪ್ರೇಮದಿ ಆಶ್ರೈಸಿರು ತಿಹಳೊ || 5

ಯಾ–ವಾತನ ನೇಮವ ನರಿಯುತ ಆತನ ಅನುವರ್ತಿಸು ತಿಹಳೊ |
ಯಾ–ವಾತನು ನಟಿಸುವ ನಟನೆಯ ನನುಸರಿಸುತ ತಾ, ನಟಿಸುವಳೊ |
ಯಾ–ವಾತನ ಮಹಿಮೆಯ ಸೀಮೆಯಗಾಣದೆ ಅಚ್ಚರಿ ಪಡುತಿಹಳೊ |
ಆ–ನಾಥನ ಪ್ರೇಮದ ಅರಸಿಯು ನಮ್ಮನು ಕಾಪಾಡಲಿ ಸತತ || 6

ಯಾ–ವಾತನ ಕರಪಿಡಿಯಲಿ ಗದರೂಪದಿ ಸ್ಥಾನವ ಪಡೆದಿಹನೊ |
ಯಾ-ವಾತನ ನಿಯಮದಿ ಪ್ರಾಣಿಗಳೆಲ್ಲರ ಉಸುರಲಿ ಜಪಿಸುವನೊ |
ಯಾ-ವಾತನ ನೇಮದಿ ತತ್ವಗಳೊಳ ಹೊರಗೆಲ್ಲ ತುಂಬಿಹನೊ |
ಆ-ನಾಥನ ಪ್ರೇಮದ ಮಾತರಿಶ್ವನು ಕಾಪಾಡಲಿ ನಿರತ || 7

ಆ, ವಾತನೆ ಎಮ್ಮಯ ಕರ್ಮದ ನೆಲೆಗಳ ಜ್ಞಾನದಿ ಅರತಿಹನು |
ಆ, ವಾತನೆ ಸುಜನರ ಹೃದಯದ ದೋಷವ ಪರಿಹರಿಸುತಲಿಹನು |
ಆ, ವಾತನೆ ತ್ರಿವಿಧದಜೀವರ ಸಾಧನೆ ಬಗೆಯನು ಅರಿತಿಹನು |
ಆ, ವಾತನೆ ಸುಜನರ ತಾಪವ ಕಳೆಯುತ ಸದ್ಗತಿ ಪಾಲಿಪನು || 8

ಸುಮನಸರೆಲ್ಲರು ಪವನರಾಯನ, ಸು,ಭೃತ್ಯರು ಎನಿಸುವರು |
ಸುಮನದಿ ಮಧ್ವಸುಶಾಸ್ತ್ರವ ಪಠಿಸುತ ಸಂತಸ ಪಡುತಿಹರು |
ಕ್ರಮದಿ ಪವನನಲ್ಲಿಹ ಶ್ರೀಹರಿಯ ಉಪಾಸನೆ ಗೈಯುವರು |
ನಮಿಸುತ ಭಕ್ತಿಲಿ ಭಾರತೀಶನ ಆಜ್ಞೆಯ ಪಾಲಿಪರು || 9

ಆ, ನಂದವು ಪರಮಾನಂದವಕಾಣು ಮಧ್ವರ ಮತದಲ್ಲಿ |
ಏ, ನೆಂದು ಪೊಗಳಲಿ ಆನಂದವ ಶ್ರೀಮಧ್ವರ ಗ್ರಂಥದಲಿ |
ಆ, ನಂದವು ಪರಮಾನಂದವು ನಿಜ ಈ ವೈಷ್ಣವ ಜನುಮದಲಿ |
ಸಾ–ನಂದದಿ ಪೇಳಿಹೆ ಮಧ್ವಮುನಿ, ತಾ, ನಾಪ್ತವಚನದಲಿ || 10

ಜಯ ಜಯ ಭಾರತಿರಮಣ ಶ್ರೀಗುರು ಮುಖ್ಯ ಪ್ರಾಣೇಶ |
ಜಯ ಜಯ ರಾಮರದೂತ ವಿ, ಖ್ಯಾತ ಜಯತು ವಾನರೇಶ |
ಜಯ ಜಯ ಭೀಮ, ಕುರುಕುಲೇಶ ಸಂರಕ್ಷಿಸು ನಾಗೇಶ |
ಶಯನಗೆ ಸರ್ವಸಮರ್ಪಣೆ ಮಾಡುವ ಮಧ್ವ ಯೋಗೀಶ || 11

★ ★ ★

ಭಾಗ - 2

" ಉಗಾಭೋಗ "

ತಂದೆ ತಾಯಿಗಳು ಅಂದೆ ಸರಿದರು ದೇವ |
ಪೊಂದಿಸಿಹರು ಎನ್ನ ನಿನ್ನ ಶ್ರೀಪಾದಕ್ಕೆ |
ಕುಂದುಗಳೆಣಿಸದೆ ಕಾಪಾಡು ಸಿರಿ ಗೋ |
ವಿಂದ ಗೋವಳರಾಯ ಪತಿಯಾಂತರ್ಗತ |
ಇಂದಿರೆ ರಮಣನೆ ಪ್ರಪಿತಾಮಹ ನೀನೆ |
ಹಿಂದೆ, ಮುಂದೆ, ಇಂದು, ಎನ್ನ ಕರ್ಮಂಗಳ |
ಚಂದದಿ ನೋಡುತ್ತಲಿಹ ಸರ್ವೇಶನೆ |
ಸುಂದರಿ ಕೃಷ್ಣೆಗೆ ಸೌಭಾಗ್ಯವಿತ್ತನೆ |
ಕುಂದದ ಸೌಮಾಂಗಲ್ಯವ ನೆನಗೀಯೊ |
ನಂದನಂದನ ಶ್ಯಾಮಸುಂದರ ಶುಭನಾಮ |
ವಂದಿಸಿ ನುತಿಸಿ ಬಲವಂದು ಬೇಡುವೆ, ಆ
ನಂದತೀರ್ಥ ವರದ ನಾಗೇಶ ಶಯನ ||

ಜನಕ ನೀನೆಆಗಿ ಸಲಹುತ್ತಲಿರುವೆ |
ಜನನಿ ನೀನಾಗೆನ್ನ ಪೊರೆಯುತ್ತಲಿರುವೆ |
ಧನ, ಕನಕ, ಸಂತಾನ, ನೀಪಾಲಿಸಿರುವೆ |
ಅನುಗ್ರಹಿಸಿ ಅಕ್ಷರದ ಜ್ಞಾನವಿತ್ತಿರುವೆ |
ಇನಿಯ ನಂತರ್ಗತನೆ ಪ್ರಪಿತಾಮಹನೆ |
ಅನುದಿನದಲಿ ಎನ್ನ ಹರುಷಗೊಳಿಸುವನೆ |
ಮನದ ಸಂಶಯಗಳನು ಹರಿದೊಗೆಯೊ ನೀನೆ |
ಎನ ಮೇಲೆ ದಯತೋರು ನಾಗೇಶ ಶಯನ ||

ವಾತರೋಗುವು ತಗುಲಿ ಭೀತಿ ಪಡುತಿಹ, ತನ್ನ |
ಪೋತನ್ನ ಮಾತೆಯು ಆತು ತೊಡೆಯಲ್ಲಿಟ್ಟು |
ಖ್ಯಾತ ವೈದ್ಯರ ಕರೆದು ರೀತಿ ಪೇಳುತ ಬಳಲಿ |
ಆತ ಕೊಟ್ಟೌಷಧಿಯ ಪ್ರೀತಿ ಇಂದಲಿ ಉಣಿಸಿ |
ಮಾತಾಡಿ ನೇವರಿಸಿ ಶೀತ, ವಾತ, ಕಳೆಯೆ |
ಚೇತರಿಸಿ ಕೊಂಡ ಆ ಪೋತನ್ನ ನೋಡಿದೆನೊ |
ಮಾತರಿಶ್ವವರದ ನಾಗೇಶ ಶಶಯನ ಆ
ಮಾತೆಯೋಲು ಎನ್ನ ಪಾತಕ ಪರಿಹರಿಸೊ ||

ಪಂಚ ಜ್ಞಾನೇಂದ್ರಿಯದಿ | ಪಂಚಕರ್ಮೇಂದ್ರಿಯದಿ |
ಪಂಚ ಭೂತಗಳಲ್ಲಿ | ಪಂಚ ತನ್ಮಾತ್ರೆಯಲಿ |
ಪಂಚ ನಾಮಗಳಿಂದ | ಸಂಚರಿಸಿ ಸುಖವೀವ |
ಪಂಚ ರೂಪಾತ್ಮ ವಿ | ರಿಂಚಿ ಜನಕ ಹರಿಯೆ|
ಸಂಚಿತಾಗಾಮಿ ಪ್ರಾ | ಲಬ್ಧ ಮೂರರ ಬಾಧೆ |
ವಂಚಿಸದೆ ಕಳೆದು | ಮುಂಚೆ ಕಾಪಾಡಯ್ಯ |
ಅಂಚೆ ವಾಹನ ಜನಕ | ನಾಗೇಶ ಶಯನನೆ |
ಚಂಚಲತೆ ತರಿದು | ಸ್ಥಿರ ಭಕ್ತಿ ನೀಡೊ ||

ಬಾಲನ್ನ ಜನನಿಯು | ಲೀಲೆ ಇಂದಲಿ ತನ್ನ |
ತೋಳ ಲೌಕುತ ತೊಡೆಯ | ಲ್ಲಿಟ್ಟು ಮುದ್ದಿಸಿ, ಎದೆಯ |
ಪಾಲನ್ನೂಡಿಸುವಾಗ | ಮೇಲಾದ ಮನೆಯವರು |
ಏಳೇಳು ಎಂದೊದರೆ | ಏಳ ಪೋಗಲು ತಾಯಿ |
ಬಾಲ ತಾಯಿಯ | ತೋಳ ಬಿಡಲೊಲ್ಲದೆ, ಕ |
ಣ್ಣಾಲಿಗಳ ಒರೆಸುತ್ತ | ರೋಧಿಪ ತೆರದಿ, ನಾ |
ನೇಳ ಲಾರೆನೊ ನಿನ್ನ | ಧ್ಯಾನ ಸುಧೆಯನು ಬಿಟ್ಟು |
ವ್ಯಾಳ ಶಯನ ಶ್ರೀ | ನಾಗೇಶ ಶಯನ ||

★ ★ ★

(ಈ ಪದವನ್ನು ಶ್ರೀಲಕ್ಷ್ಮೀದೇವಿಯರ ಪ್ರಾರ್ಥನೆಯ ಸಾಲಿನಲ್ಲಿ ಸೇರಿಸುಕೊಂಡು ಹಾಡಿಕೊಳ್ಳತಕ್ಕದ್ದು ಎಂದು ಪ್ರಾರ್ಥನೆ)

ರಾಗ : ದರ್ಬಾರ ಕಾನಡ   ತಾಳ : ಏಕತಾಳ

ಮಾತಾಡೆ ಮಧುವೈರಿ ಯರ್ಧಾಂಗಿ । ಬಹು
ಸೋತು ಬಂದಿಹೆನಾನು ಕನಕಾಂಗಿ ॥ ॥ಪ॥

ಸೀತೆ, ರುಕ್ಮಿಣಿ, ಭಾಮಿ, ಲಲಿತಾಂಗಿ–ಎನ್ನ
ಮಾತೆ ಮಹಲಕ್ಷುಮಿ ಮೃದುವಾಗಿ ॥ ಒಂದು ॥ ॥ಅ.ಪ.॥

ಹೆಣ್ಣುಮಗಳೆನ್ನುವ ಅಭಿಮಾನ । ತಾಯಿ ।
ಎನ್ನಲ್ಲಿ ನಿನಗುಂಟು ಬಹುಮೋಹ ।
ಇನ್ನೀಗ ನಿನಗೇಕೆ ಬಿಗುಮಾನ – ಬಿಡು ।
ಪನ್ನಂಗವೇಣಿ ನಿನ್ನನು ನಂಬಿಹೆನಾ ॥ 1

ಹರಿಯ ಅಮೋಘ ವೀರ್ಯವ ನೀನು ।
ಧರಿಸಿ ಹದಿನಾಲಕ್ಕು ಲೋಕವನು ॥
ಹೊರಗೆ ತಂದ ದಯಾಮಯಿ ನೀನು । ಶ್ರೀ
ಹರಿಗೆ ಪೇಳು ಎನ್ನ ಅರಿಕೆಯನು ॥ 2

ಬ್ರಹ್ಮಾದಿಗಳಿಗೆಲ್ಲ ನೀಮಾತೆ । ಅಮ್ಮ
ಸುಮ್ಮನ ಸರಿಗೆಲ್ಲ ವರದಾತೆ ॥
ಅಮ್ಮತ್ರಿಗುಣಮಾನಿ ಹರಿಪ್ರೀತೆ, ಹೀಗೆ ।
ಸುಮ್ಮನೆ ಕುಳಿತಿಹೆ ಮೌನವದೇಕೆ ? 3

ನಾನಾ ಯೋನಿಗಳಲ್ಲಿ | ನಾಬಂದೆ | ಈಗ
ದೀನಳಾಗಿ ಬೇಡುತ ನಿಂದೆ |
ಮಾನಸದಲ್ಲಿಹ ಮಲವನ್ನು ಕಳೆದು, ಮ
ಹಾನುಭಾವಳೆ ಎನ್ನಪೊರೆಎಂದೆ || 4

ನಿನ್ನ ಹೊರತು ಅನ್ಯರೆನಗಿಲ್ಲ | ತಾಯೆ
ಮನ್ನಿಸು ಎನ್ನವಗುಣವೆಲ್ಲ ||
ಘನ್ನ ಶ್ರೀ ನಾಗೇಶಶಯನನ್ನ | ಸತಿ
ಕಣ್ಣಿನಿಂದ ನೋಡಿ ಇನ್ನಾದರು, ಒಂದು || 5

ಒ ಪ್ಪೋ ೞ ಲೆ

ಪುಟ	ಸಾಲು	ತಪ್ಪು	ಸರಿ (ಒಪ್ಪು)
3	10	ಜರಣ ಕಮಲಕ್ಕೆರಗಿ	ಚರಣ ಕಮಲಕ್ಕೆರಗಿ
	11	ಮ್ರಾತೆಯು	ಮಾತೆಯೆ
	12	ಪ್ರೀತೆಯು	ಪ್ರೀತಿಯು
5	4	ಜಯಿಸಿದಮನು	ಜಯಿಸಿದವನು
5	15	ಪೂಗಳೆ	ಪೊಗಳೆ
14	6	ಹೃತ್ಯದ್ಧಿಯು	ಹೃತ್ಸ್ಯದ್ಧಿಯು
28	10	ನೀರಾಜಿನ	ನೀರಾಜನ
34	17	ಲಕ್ಷಣ	ಲಕ್ಷ್ಮಣ
38	9	ಭಾನುರಾಂಗಿ	ಭಾಸುರಾಂಗಿ
	16	ಅನುಹಾ	ಆಮುಹಾ
39	11	ಬಲವರದಗೆ	ಬಲಿವರದಗೆ
	14	ಮಿತ್ರ	ಮಿತ್ರೆ.
47	13	ಸಮುಗಳಿಗೆ	ಸುಮುಗಳಿಗೆ
51	1	ದುರ್ಷರ್ಮವತು	ದುಷ್ಕರ್ಮವನು
	20	ಕೂಡುವೆ	ಕೊಡುವೆ
52	15	ಜೆನ್ನದ	ಚಿನ್ನದ
56	1	ವಾಲಿಸೊ	ಪಾಲಿಸೊ
	3	ವಿವುಲ	ವಿಪುಲ
59	11	ನೀಧನುದಿಸಿ	ನೀನುದಿಸಿ
60	9	ಅನತ ಜನಗಳ	ಆನಿತ ಜನಗಳ
	25	ಪೂರೆವುದು	ಪೊರೆವುದು
66	26	ಪಟ್ಟೆದರಸಿ	ಪಟ್ಟದರಸಿ